ಯಶವಂತ ಚಿತ್ತಾಲರ ಕತೆಗಳಲ್ಲಿ ಸ್ತ್ರೀ ಸಂವೇದನೆ ಒಂದು ಅಧ್ಯಯನ

ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ

ಸಂಶೋಧಕರು

ಸುನೀತಾ .ಸಿದ್ರಾಮ.ಹೆಡ್ಡೂರಶೆಟ್ಟಿ

ಮಾರ್ಗದರ್ಶಕರು

ಡಾ॥ಬಿ.ಎಂ.ಪುಟ್ಟಯ್ಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-582276.

2006

ಯಶವಂತ ಚಿತ್ತಾಲರ ಕತೆಗಳಲ್ಲಿ ಸ್ತ್ರೀ ಸಂವೇದನೆ ಒಂದು ಅಧ್ಯಯನ

ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ

ಸಂಶೋಧಕರು

ಸುನೀತಾ .ಸಿದ್ರಾಮ.ಹೆದ್ದೂರಶೆಟ್ಟಿ

ಮಾರ್ಗದರ್ಶಕರು

ಡಾ॥ಬಿ.ಎಂ.ಪುಟ್ಟಯ್ಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-582276.

2006

ದೃಢೀಕರಣ ಪತ್ರ

ಸುನೀತಾ.ಸಿದ್ರಾಮ.ಹೆದ್ದೂರಶೆಟ್ಟಿ ಇವರು ಯಶವಂತ ಚಿತ್ತಾಲರ ಕತೆಗಳಲ್ಲಿ: ಸ್ತ್ರೀಸಂವೇದನೆ ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಪ್ರೌಢ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:04/07/200

ಸ್ಥಳ: ವಿದ್ಯಾರಣ್ಯ

ಡಾ॥ ಬಿ.ಎಂ. ಪುಟ್ಟಯ್ಯ

ಮಾರ್ಗದರ್ಶಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-582276.

ಪ್ರಮಾಣ ಪತ್ರ

ಯಶವಂತ ಚಿತ್ತಾಲರ ಕತೆಗಳಲ್ಲಿ ಸ್ತ್ರೀಸಂವೇದನೆ ಒಂದು ಅಧ್ಯಯನ ಎಂಬ ಶೀರ್ಷಿಕೆಯ ಈ ಪ್ರೌಢ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆಸಲ್ಲಿಸಲ್ಲು ಡಾ॥ ಬಿ.ಎಂ.ಪುಟ್ಟಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: 04/07/2006

ಸ್ಥಳ: ವಿದ್ಯಾರಣ್ಯ

ಸುನೀತಾ. ಸಿದ್ರಾಮ.ಹೆದ್ದೂರಶೆಟ್ಟಿ.

ಎಂ.ಫಿಲ್ ವಿದ್ಯಾರ್ಥಿನಿ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬.

ಪರಿವಿಡಿ

ಅಧ್ಯಾಯ- ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಯಾವುದೇ ಒಂದು ವಿಷಯದ ಬಗ್ಗೆ ಅಧ್ಯಯನ ಮಾಡಬೇಕಾದರೆ ಆ ವಿಷಯವನ್ನು ಕೇವಲ ಒಂದೇ ನಿಟ್ಟಿನಲ್ಲಿ ಗಮನಿಸದೆ ಆ ವಿಷಯದ ಓರೆ-ಕೋರೆಗಳನ್ನೂ ಸಫಲತೆ-ವಿಫಲತೆಗಳನ್ನೂ ಒಟ್ಟಾರೆ ಇಡಿಯಾಗಿ ಅಭ್ಯಸಿಸುವದು ಅತ್ಯಂತ ಅವಶ್ಯವಾಗಿದೆ.

ಚಿತ್ತಾಲರ ಕತೆಗಳಲ್ಲಿ ಕಂಡುಬರುವಂತಹ ಸ್ತ್ರೀ ಸಂವೇದನೆಯನ್ನು ಕುರಿತು ಅಧ್ಯಯನ ಮಾಡುವಾಗ ಸಂವೇದನೆಯೆಂದರೆನು? ಎಂಬುದನ್ನೂ ಕುರಿತು ಅಧ್ಯಯನ ಮಾಡುಲಾಗುವುದು. ಆದ್ದರಿಂದ ಸಂವೇದನೆ ಎಂದರೇನು? ಅದರಲ್ಲೂ ಸ್ತ್ರೀ ಸಂವೇದನೆ ಎಂದರೇನು ಎಂಬುದರ ಕುರಿತು ಅಧ್ಯಯನ ಮಾಡುವುದು ಇಲ್ಲಿಯ ಮುಖ್ಯ ಉದ್ದೇಶವಾಗಿದೆ.

ಇನ್ನು ಸ್ತ್ರೀ ಸಂವೇದನೆ ಕುರಿತು ಅಭ್ಯಸಿಸುವಾಗ 'ಸ್ತ್ರೀವಾದ' ವೂ ಎದ್ದು ನಿಲ್ಲುವುದು ಇಲ್ಲಿ ಸ್ತ್ರೀವಾದವನ್ನು ಕುರಿತು ಅನೇಕರು ಚರ್ಚಿಸಿದ್ದಾರೆ. ಸ್ತ್ರೀವಾದವೆಂದರೆನು? ಇದರ ನಿಜವಾದ ಅರ್ಥವೇನು? ಸ್ತ್ರೀವಾದವನ್ನು ಯಾವ ರೀತಿ ಮಂಡಿಸಲಾಗುತ್ತದೆ? ಇಲ್ಲಿ ಸ್ತ್ರೀವಾದಕ್ಕಿರುವ ತನ್ನದೇ ಆದಂತಹ ತಿಳುವಳಿಕೆಗಳಾವವು? ಇವುಗಳೆಲ್ಲವುಗಳ ಕುರಿತು ಅಧ್ಯಯನ ಮಾಡುವುದು ಇಲ್ಲಿಯ ಉದ್ದೇಶವಾಗಿದೆ.

ಸಂವೇದನೆಯೆಂದರೇನು? ಮುಖ್ಯವಾಗಿ ಸಂವೇದನೆಯ ಘಟಕಗಳಾವವು ಇವುಗಳ ಕುರಿತೂ ಇಲ್ಲಿ ಚರ್ಚಿಸಲಾಗಿದೆ.

ಸ್ತ್ರೀ ಸಂವೇದನೆಯೆಂದು ಎಲ್ಲರೂ ತಮ್ಮ ಕೃತಿಗಳಲ್ಲಿ ಅತ್ಯಂತ ಸಹಜವಾಗಿ ಬಳಸುತ್ತಾರೆ. ಹಾಗಾದರೆ ಸ್ತ್ರೀ ಸಂವೇದನೆಗೆ ನಿರ್ದಿಷ್ಟವಾದಂತಹ ಅರ್ಥವಿದೆಯೇ? ಅದಕ್ಕೆ ವ್ಯಾಖ್ಯಾನಗಳನ್ನು ನೀಡಲಾಗಿದೆಯೇ? ನೀಡಿದ್ದರೆ ಅದೆಷ್ಟು ಸಮಂಜಸ? ಎಂಬುದನ್ನು ಕುರಿತು ಅಧ್ಯಯನ ಮಾಡುವುದಾಗಿದೆ.

ಸ್ತ್ರೀ ಸಂವೇದನೆಯ ಕುರಿತು ಹಿಂದೆ ಚರ್ಚಿಸಲಾಗಿದೆಯೇ? ಅಥವಾ ಈಗಿನಿಂದ ಬಂದುದಾಗಿದೆಯೇ? ಸ್ತ್ರೀ ಸಂವೇದನೆಯು ಒಂದೇ ದಾರಿಯಿಂದ ಒಂದೇ ಕೋನದಿಂದ

ಒಳಗೊಂಡಿರುವಂತಹದಲ್ಲ ಸ್ತ್ರೀ ಸಂವೇದನೆ ಎಂಬುದು ಸ್ತ್ರೀ ಜೀವನದ ಎಲ್ಲಾ ಮಜಲುಗಳಿಂದ ಎಲ್ಲ ಕೋನಗಳಿಂದ ನೋಡಬೇಕಾದುದು ಅತ್ಯಂತ ಅವಶ್ಯಕವಾಗಿದೆ. ಹಾಗಾದರೆ ಸ್ತ್ರೀ ಸಂವೇದನೆ ಸ್ವರೂಪವೇನು? ಎಂಬುದರ ಕುರಿತು ಅಧ್ಯಯನ ಮಾಡುವುದಾಗಿದೆ.

ಸ್ತ್ರೀ ಸವೇದನೆಯು 'ಸ್ತ್ರೀವಾದ' ಜೊತೆಗೆ ಬೆಳೆದು ಹೊಸದೊಂದು ಅರ್ಥವನ್ನು ಪಡೆಯುತ್ತದೆ. ಸ್ತ್ರೀವಾದ ಕೇವಲ ಪುರುಷರ ವಿರುದ್ಧ ಸೊಂಪು ಎನಿಸಿಕೊಳ್ಳದೆ. ಸ್ತ್ರೀ ಸಂವೇದನೆಯ ರೂಪವನ್ನು ಪಡೆಯುತ್ತಿದೆ ಹಾಗಾದರೆ ಸ್ತ್ರೀವಾದವು ಸ್ತ್ರೀಸಂವೇದನೆಯ ಸ್ವರೂಪವೇನು? ಅದರ ವಿಶಿಷ್ಟತೆಯೇನು? ಸ್ತ್ರೀಸಂವೇದನೆಯು ಅದರಿಂದ ಪ್ರಭಾವ ಪಡೆದಿರುವುದು ಹೇಗೆ ಎಂಬುದು ಇಲ್ಲಿ ಅಧ್ಯಯನ ವಾಡುವುದು ಉದ್ದೇಶವಾಗಿದೆ.

ಸ್ತ್ರೀ ಸಂವೇದನೆ ಅದರ ಸ್ವರೂಪ ಲಕ್ಷಣ ಇವುಗಳನ್ನು ಅಧ್ಯಯನ ಮಾಡುವಾಗ ಈಗಿನ ಮಹಿಳಾ ಸಾಹಿತ್ಯವನ್ನೂ ಅಭ್ಯಸಿಸುವದು ಅತ್ಯಂತ ಅವಶ್ಯ ಇಂದಿನ ಸ್ಥಿತಿಯಲ್ಲಿ ಸ್ತ್ರೀ ಸಂವೇದನೆಯು ಯಾವ ರೀತಿ ಮಹಿಳೆಯ ಕಾವ್ಯದಲ್ಲಿ-ಕೃತಿಯಲ್ಲಿ ಮೂಡಿಬರುತ್ತಿದೆ ಅವಳ ನೋವು-ನಲಿವು ಗುರಿಮುಟ್ಟುವ ಛಲ ಪ್ರತಿಭಟನೆ ಪ್ರತಿಯೊಂದು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡುವುದಾಗಿದೆ.

ಮಹಿಳೆಯರಂತೆ ಪುರುಷರೂ ಸಹ ಸ್ತ್ರೀ ಸಂವೇದನೆಯ ಕುರಿತಾದ ವಿಷಯದಲ್ಲಿ ಯಾವ ರೀತಿ ಯೋಚಿಸಿದ್ದಾರೆ ಎಂಬುದು ಶಿವರಾಮಕಾರಂತ ಭೈರಪ್ಪನವರ ಕೃತಿಯಲ್ಲಿ ಕಂಡುಬರುವುದು. ಇಲ್ಲಿರುವ ಸ್ತ್ರೀ ಹಿಂದಿನಂತೆ ಅಸ್ಥಿತ್ವವಿಲ್ಲದ ಅಬಲೆಯಲ್ಲ ಪುರುಷನ ನೆರಳಲ್ಲ ತನ್ನದೇ ಆದ ಅಸ್ಥಿತ್ವವನ್ನು ಹೊಂದಿ ಪ್ರಭಾವಿರೂಪದಲ್ಲಿ ಹೊರಬಂದಿದ್ದಾಳೆ.

ಆದ್ದರಿಂದ ಸ್ತ್ರೀ ಸಂವೇದನೆಯ ಕುರಿತು ಅಧ್ಯಯನ ಮಾಡುವಾಗ ಈ ವಿಷಯಗಳನ್ನೂ ಚರ್ಚಿಸುವುದು ಅತ್ಯಂತ ಮುಖ್ಯ ಉದ್ದೇಶವಾಗಿದೆ.

ಚಿತ್ತಾಲರು ಬರೆದಂತಹ ಕತೆಗಳಲ್ಲಿ ಮೂಡಿ ಬಂದಂತಹ ಸ್ತ್ರೀಸಂವೇದನೆ ಯಾವ ರೀತಿಯದು? ಅದನ್ನು ಅವಳು ಒಪ್ಪಿಕೊಂಡಂತಹ ಬಗೆ ಹೇಗೆ? ಕೇವಲ ಶಬ್ದಗಳಲ್ಲಿ ನೇರವಾಗಿ ಹೇಳದೇ ಕೆಲವೊಂದು ಸ್ತ್ರೀ ಸಮಸ್ಯೆಗಳನ್ನು ಕುರಿತು ಪ್ರತಿಮೆಗಳ ಮೂಲಕ ಲೇಖಕರು ತೋರಿಸಿದ್ದಾರೆ.

ಸ್ತ್ರೀ ಸಂದರ್ಬದ ಒತ್ತಡ ಸಿಕ್ಕಿ ಅನುಭವಿಸುವಂತಹ ದುರಂತ, ಶೋಷಣೆ, ಅಸಹಾಯಕತೆ, ನೋವು, ಪ್ರತಿರೋಧ ಪ್ರತಿಯೊಂದು ಸ್ಪಷ್ಟಪಡಿಸಿದ್ದಾರೆ.

ಚಿತ್ತಾಲರ ಕತೆಗಳಲ್ಲಿ ಕಂಡುಭರುವಂತಹ ಸ್ತ್ರೀ ಸಮಸ್ಯೆಗಳನ್ನು ಒಟ್ಟುಗೂಡಿಸಿ ವಿಭಾಗಿಸಿದಾಗ ಬರುವಂತಹ ಕತೆಗಳಲ್ಲಿ ಸ್ತ್ರೀ ಸಮಸ್ಯೆಗಳ ಕುರಿತು ಚರ್ಚಿಸುವುದು ಆ ಸಮಸ್ಯೆಗಳಿಗೆ ಕಾರಣಗಳನ್ನು ಹುಡುಕುವುದು ಅವಶ್ಯಕ ಆದ್ದರಿಂದ ಈ ಅಧ್ಯಯನದಲ್ಲಿ ಒಟ್ಟು ಸಮಸ್ಯೆಗಳ ಕುರಿತು ಕಾರಣ-ಪರಿಣಾಮಗಳ ಬಗ್ಗೆ ಚರ್ಚಿಸುವುದು ಮುಖ್ಯ ಉದ್ದೇಶವಾಗಿದೆ.

ಚಿತ್ತಾಲರ ಕತೆಗಳಲ್ಲಿ ಕಂಡುಬರುವ ಕೆಲವು ಮುಖ್ಯ ಅಂಶಗಳಲ್ಲಿ ಶೋಷಣೆಯೂ ಒಂದು ಇದು ಸ್ತ್ರೀ-ಪುರುಷ ಅಲ್ಲದೇ ಮೇಲ್ವರ್ಗ-ಕೆಳವರ್ಗ ಎಲ್ಲ ಕಡೆಗೂ ಕಂಡುಬರುತ್ತದೆ. ಆ ಶೋಷಣೆಯ ಕುರಿತು ಅಧ್ಯಯನ ಮಾಡುವುದು ಎಂದರೆ ಶೋಷಣೆ ಕೇವಲ ಮಾಡಿಸಿಕೊಳ್ಳುವುದರಿಂದ ಮಾತ್ರವಲ್ಲ ಸಮಾಜದ ಮೌಲ್ಯವನ್ನು ಒಪ್ಪಿಕೊಂಡು ಶೋಷಿಸುವುದು ನಮ್ಮ ನಿಯಮ ಎಂಬಂತೆ ಶೋಷಿಸುವವರ ಮಧ್ಯೆ ಇರುವಂತ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡುವುದೂ ಇಲ್ಲಿಯ ಉದ್ದೇಶವಾಗಿದೆ.

ಚಿತ್ತಾಲರ ಕತೆಗಳಲ್ಲಿ ಕಂಡುಬರುವ ಇನ್ನೊಂದು ಅಂಶವೆಂದರೆ ಮದುವೆಯನ್ನು ಕುರಿತದ್ದು ಇಂದಿನ ಮದುವೆಗಿರುವ ಸಮಸ್ಯೆಗಳು ಮದುವೆಯಾಗದಿರುವ ಮಹಿಳೆಯ ಕನಸುಗಳು ಅಲ್ಲದೆ ಮದುವೆಯಾಗದ ಹೆಣ್ಣು ಮಕ್ಕಳನ್ನು ಹೊಂದಿರುವ ತಂದೆ-ತಾಯಿಯರ ಕನಸುಗಳು ಕನಸು ನನಸಾಗದೆ ಬರುವಂತಹ ವಿಫಲತೆಗಳು ಅವಿವಾಹಿತೆಯರ ಸಮಸ್ಯೆಗಳು.

ಮದುವೆ ಮಧ್ಯ ಎದ್ದು ನಿಲ್ಲುವ ಪ್ರೇಮ ವಿವಾಹಕ್ಕೆ ಪ್ರಬಲ ಅಡ್ಡಿಯಾಗಿರುವ ಜಾತಿ ಸಮಸ್ಯೆ ಇವುಗಳನ್ನು ಕುರಿತು ಅಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ.

ಚಿತ್ತಾಲರ ಕತೆಗಳಲ್ಲಿ ಕಂಡುಬರುವ ಹೃದಯ ಸ್ಪರ್ಶಿ ಘಟನೆಗಳಲ್ಲಿ ದುರಂತಗಳು ಮುಖ್ಯ ಇವರ ಕತೆಗಳಲ್ಲಿ ಬರುವಂತಹ 'ದುರಂತ'

ಪಾತ್ರಗಳು ನಿಜಕ್ಕೂ ನಮ್ಮ ಮನ ಕಲುಕುತ್ತವೆ. ಈ ದುರಂತಗಳಿಗೆ ಕಾರಣ ? ಸ್ತ್ರೀಯ ಅಸಹಾಯಕತೆಯೇ ? ಪುರುಷ ಶೋಷಣೆಯೇ ? ಇವುಗಳನ್ನು ಎದುರಿಸಿ ನಿಲ್ಲಲಾಗದ ಸಮಾಜದ ಕಟ್ಟು ನಿಟ್ಟುಗಳೇ ? ಈ ದುರಂತವನ್ನು ಸಮಾಜ ಸ್ವೀಕರಿಸುವಂತಹ ರೀತಿ ಇವುಗಳನ್ನು ಕುರಿತು ಆಧ್ಯಯನ ಮಾಡುವುದೂ ಸಹ ಮುಖ್ಯ ಉದ್ದೇಶವಾಗಿದೆ.

ಪುರುಷನ ಕಾಮ-ಪ್ರೇಮ ಪ್ರತಿಯೊಂದಕ್ಕೂ ಬಲಿಯಾಗುವ ಸ್ತ್ರೀ ಪುರುಷನೊಂದಿಗೆ ಮುಖಾ-ಮುಖಿಯಾದಾಗ ತನ್ನ ಬದುಕಿನ ನಿರ್ಧಾರವನ್ನು ಯಾವ ರೀತಿ ತೆಗೆದುಕೊಳ್ಳುತ್ತಾಳೆ ? ಅಲ್ಲಿರುವ ಸಮಸ್ಯೆಗಳಿಗೆ ಸರಿಯಾದ ಮಾರ್ಗವನ್ನು ಹೇಗೆ ಹುಡುಕುತ್ತಾಳೆ ? ಇವುಗಳನ್ನು ಕುರಿತು ಆಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ.

ಸ್ತ್ರೀ ಅನುಭವಿಸುವ ನೋವು ಮತ್ತು ಅಸಹಾಯಕತೆಗಳು ಕತೆಗಳುದ್ದಕ್ಕೂ ಹಾಯ್ದು ಹೋಗಿವೆ. ಕೆಲವೋರ್ವರು ಆಸಹಾಯಕತೆಯನ್ನು ಒಪ್ಪಿಕೊಂಡು ಬದುಕಿದ್ದರೆ ಇನ್ನು ಕೆಲವರು ಆ ನೋವನ್ನು ತಾಳಲಾರದೆ ದುರಂತ ನಾಯಕಿಯರಾಗುತ್ತಾರೆ. ಅವರ ನೋವು ಅಸಹಾಯಕತೆಯ ಕಾರಣ ಅದರ ಮೂಲ ಸಮಸ್ಯೆಯ ಕುರಿತು ಅಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ.

ಛಲ ಹೆಣ್ಣಿಗೊಂದು ದೇವರು ಕೊಟ್ಟಿರುವ ಅಸ್ತ್ರ ಆ ಛಲಕ್ಕಾಗಿ ತನ್ನವರನ್ನು ಕಳೆದುಕೊಂಡು ಹೋರಾಡಿ ತನ್ನದೇ ಆದ ರೀತಿಯಲ್ಲಿ ಬದುಕುವ ಸ್ತ್ರೀಯರ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಇನ್ನು ಚಿತ್ತಾಲರ ಕತೆಗಳಲ್ಲಿ ಗುಪ್ತವಾಗಿ ಅಲ್ಲಲ್ಲಿ ಇಣುಕಿ ನೋಡುವ ಸ್ತ್ರೀ ಭಾವನೆಗಳನ್ನು ಸ್ಪಷ್ಟವಾಗಿ ಹೇಳಲಾಗದ ಹೃದಯದೊಳಗೆ ಹೂತಿಟ್ಟುಕೊಂಡು ಮೌನವಾಗಿ ಬದುಕುತ್ತಿರುವವರ ಬಗ್ಗೆಯೂ ಇಲ್ಲಿ ಅಧ್ಯಯನ ಮಾಡುವುದು ಉದ್ದೇಶವಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಚಿತ್ತಾಲರ ಕತೆಗಳಲ್ಲಿ ಸ್ತ್ರೀ ಸಂವೇದನೆಯ ಕುರಿತು ಅಧ್ಯಯನ ಮಾಡುವುದೇ ಮುಖ್ಯ ಉದ್ದೇಶವಾಗಿದೆ.

ಅಧ್ಯಯನ – ೨

ಸ್ತ್ರೀ ಸಂವೇದನೆಯ ಸ್ವರೂಪ

ಹಿಂದಿನ ಕಾಲದಿಂದಲೂ ನೋಡುತ್ತಾ ಬಂದರೆ ಸ್ತ್ರೀ ಸಂವೇದನೆ ಬಗ್ಗೆ ಅಧ್ಯಯನ ಹಂತ ಹಂತವಾಗಿ ಬೆಳೆಯುತ್ತಾ ಬಂದಂತಹುದಾಗಿದೆ.

ಮೊದಲೆಲ್ಲಾ ಸ್ತ್ರೀ ಸಂವೇದನೆ ಬಗ್ಗೆ ಪ್ರಾಮುಖ್ಯತೆ ತುಂಬಾ ವಿರಳ ಎಂದೇ ಹೇಳಬಹುದು. ಪೂರ್ವ ವೇದಕಾಲದಲ್ಲಿ ಸ್ತ್ರೀ ಪ್ರಾಮುಖ್ಯತೆ ಅವಳ ನೋವು ತುಡಿತ ನಲಿವಿನಂತಹ ಭಾವನೆಗೆ ಬೆಲೆಯು ಉತ್ತರ ವೇದ ಕಾಲದಲ್ಲಿ ಕಡಿಮೆಯಾಯಿತು. ಮುಂದೆ ಹೋದಂತೆಲ್ಲಾ ಸ್ತ್ರೀ ಒಂದು ಯಂತ್ರದ ಗೊಂಬೆಯಾದಳು ಅವಳ ಯಾವ ಭಾವನೆಗಳಿಗೂ ಬೆಲೆಯಿಲ್ಲದೆ ಕೇವಲ ಆಜ್ಞಾಧಾರಕಳಾದಳು. ರಾಮಾಯಣದ ಕಾಲದಲ್ಲಿ ಪಾತಿವೃತ್ಯಕ್ಕಾಗಿ ಬಡಿದಾಡಿದ ಅವಳು ಮಹಾಭಾರತದ ಹೊತ್ತಿಗೆ ಕ್ರಾಂತಿಯ ಕಿಡಿ ಹಚ್ಚಿದಳು ಮುಂದೆ ಬರುತ್ತಾ ಹೋದಂತೆ ತನಗಾಗುತ್ತಿರುವ ನೋವು ಶೋಷಣೆಗಳ ವಿರುದ್ಧ ಬಂಡಾಯವೆದ್ದಳು ಹಿಂದಿನಿಂದ ಕೇವಲ ವೇದನೆ ಯಾಂತ್ರಿಕವಾಗಿದ್ದ ಅವಳ ಜೀವನ ಸಂಘರ್ಷ ಛಲ-ಬದುಕಿಗಾಗಿ ರೂಪುಗೊಂಡಿತ್ತು.

ಹಿಂದಿನಿಂದಲೂ ಪರರ ನೋವು-ನಲಿವುಗಳನ್ನು ತನ್ನದಾಗಿಸಿಕೊಂಡು ಯಂತ್ರದಂತೆ ಬದುಕಿದ ಇವಳಿಗೆ ತನ್ನದೇ ಆದ ಸಂವೇದನೆ ಇರಲಿಲ್ಲ ಕೇವಲ ಬಾಲ್ಯವಿವಾಹ-ಶಿಶುವಿವಾಹಗಳ ಕಮ್ಮಲಿಗೆಯಲ್ಲಿ ಬೆಂದು ಬೆಂಡಾದ ಇವಳಿಗೆ ತನ್ನದೆನ್ನುವ ಸಂವೇದನೆ ಇರುವುದೆನ್ನುವುದೂ ತಿಳಿದಿತೆ?

ಕಾಲ ಬದಲಾದಂತೆ ಜೀವನದ ಗತಿಯೂ ಬದಲಾಯಿಸಿತು ಕೇವಲ ಪುರುಷನೊಂದಿಗೆ ತಳಕು ಹಾಕಿಕೊಂಡಿದ್ದನ್ನು ಹೊರಬಂದು ಬೇರೆಯಾಗಿಯೇ ಅವಳದೇ ಸ್ಪಂದನ ಹೋರಾಟ ನಡೆಯುವಂತೆ ಮಾಡಿತು.

ಹಾಗಾದರೆ ಸ್ತ್ರೀ ಸಂವೇದನೆ ಎಂದರೇನು?

ಅನುಭವವೊಂದಕ್ಕೆ "ಭಾವನಾತ್ಮಕ ಹಾಗೂ ಬೌದ್ಧಿಕ ಪಾತಳಿಯ ವ್ಯಕ್ತಿ ವಿಶಿಷ್ಟವಾದ ಪ್ರತಿಕ್ರಿಯೆ" ಇದು ಸ್ತ್ರೀಗೆ ಸಂಬಂಧಿಸಿದ್ದಾದರೆ ಇವನ್ನೇ ಸ್ತ್ರೀ ಸಂವೇದನೆ ಎನ್ನಬಹುದು.

ಸ್ತ್ರೀ ಸಂವೇದನೆಯ ಅರ್ಥವನ್ನು ತಿಳಿದುಕೊಳ್ಳಬೇಕಾದರೆ 'ಸ್ತ್ರೀವಾದಿ ವಿಮರ್ಶೆ'ಗೆ ಕಾಲಿಡಬೇಕಾದದ್ದು ಅತ್ಯಂತ ಅವಶ್ಯಕ ಸ್ತ್ರೀವಾದಿನೆಲೆಯು ಸಂವಹನ ಅರ್ಥವಂತಿಕೆ ಹೃದಯ ವಂತಿಕೆಗಳನ್ನು ಇತರರಿಂದ ಪಡೆಯುವುದಾಗಿದೆ.

ಸ್ತ್ರೀವಾದವು ಕನ್ನಡ ಭಾಷೆಗೆ ಕನ್ನಡ ಸಂಸ್ಕೃತಿಗೆ ಕನ್ನಡ ಸಾಹಿತ್ಯಕ್ಕೆ ನಿಧಾನವಾಗಿ ಆದರೆ ಗಟ್ಟಿಯಾಗಿ ತನ್ನ ಬೇರಿಳಿಸುತ್ತಿದೆ. ಸ್ತ್ರೀ ಸಂವೇದನೆಯು ಸ್ತ್ರೀವಾದಿನೆಲೆಯ ಮೂಲದ್ರವ್ಯಗಳಲ್ಲಿ ಒಂದಾಗಿದೆ ಆದ್ದರಿಂದ ಸ್ತ್ರೀವಾದಿ ನೆಲೆಯ ಬಗ್ಗೆ ತಿಳಿಯುವದು ಅತ್ಯವಶ್ಯಕವಾಗಿದೆ.

ಸಂಚಿ ಹೊನ್ನಮ್ಮ " ಹದಿಬದೆಯ ಧರ್ಮ" ದಲ್ಲಿ ಸ್ತ್ರೀವಾದದ ಇಣುಕು ನೋಟವೂ ನಮಗೆ ಸಿಗುವುದಿಲ್ಲ ಅದಕ್ಕೆ ಬದಲಾಗಿ ಪುರುಷ ಪ್ರಧಾನ ಸಮಾಜದ ಮೌಲ್ಯಗಳ ವಿಜೃಂಭಣೆಯೇ ಇಲ್ಲದೆ "ಪೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ ಪೆಣ್ಣಲ್ಲವೇಪೊರೆದವಳು ಪೆಣ್ಣು ಪೆಣ್ಣಿಂದೇತಕೆ ಜೀಳುಗಳೆದರು ಕಣ್ಣು ಕಾಣದ ಗಾವಿಲರು" ಎಂಬ ಒಂದು ಸೂತ್ರ ಪ್ರಾಯವಾದ ಪದ್ಯವನ್ನಿಟ್ಟುಕೊಂಡು ಉಳಿದ ಪದ್ಯಗಳಲ್ಲಿ ಅವಳು ಹೆಂಗಸರಿಗೆ ತೊಡಿಸಿರುವ ಸಂಪ್ರದಾಯದ ಸಂಕೋಲೆಯನ್ನು ಅಲ್ಲಗಳೆಯಲಾಗುವುದಿಲ್ಲ. ಆ ಕಾಲಕ್ಕೆ ಅದಕ್ಕಿಂತ ಹೆಚ್ಚಿನದನ್ನು ನಾವು ನಿರೀಕ್ಷಿಸುವಂತೆಯೂ ಇಲ್ಲ ಕಲೆ, ಸಾಹಿತ್ಯ, ಸಂಸ್ಸೃತಿಗಳಿಗೆ ಪ್ರಾಮಾಣಿಕವಾದ ಸಮಾನ ಪ್ರೋತ್ಸಾಹ ನೀಡಿದ ಮೈಸೂರು ಒಡೆಯರ ಆಸ್ಥಾನದಲ್ಲಿದ್ದ ಕವಿಯತ್ರಿಯರಲ್ಲಿ ಶೃಂಗಾರಮ್ಮ, ಹೆಳವನಕಟ್ಟಿ ಗಿರಿಯಮ್ಮ ಇವರೂ ಬರುತ್ತಾರೆ. ಒಡೆಯರ ಸಾಂಪ್ರದಾಯಕ ಮನೋಭಾವದಡಿಯಲ್ಲಿ ಕಾವ್ಯ ರಚಿಸಿದ ಇವರುಗಳು ಅಕ್ಕಮಹಾದೇವಿಯಂತೆ ಕ್ರಾಂತಿ ಪ್ರಧಾನ ಸಮಾಜದ ಮೌಲ್ಯಗಳನ್ನೇ ಒಪ್ಪಿ ಮುನ್ನಡೆಯುವ ಅನಿವಾರ್ಯತೆ ಇವರಿಗಿತ್ತು. ಅದನ್ನೇ ಅವರು ತಮ್ಮ ಕಾವ್ಯಗಳಲ್ಲಿ ಪ್ರತಿಂಜಿಸಬೇಕಾಯಿತು.

ಆದ್ದರಿಂದಲೇ ಭಕ್ತಿ ಪ್ರಧಾನವಾದ ಸೀತಾ ಕಲ್ಯಾಣ, ಚಂದ್ರಹಾಸನ ಕತೆ, ಉದ್ದಾಳೀಕನ ಕತೆ ಕೀರ್ತನಗಳು ಅವರ ಲೇಖನಿಯಿಂದ ರೂಪಗೊಂಡವುಗಳು.

ಕಳೆದ ಹದಿನೈದು ವರ್ಷಗಳಿಂದೀಚೆಗೆ ಸ್ತ್ರೀವಾದವು ಕನ್ನಡ ಸಾಹಿತ್ಯದಲ್ಲಿ ಗಟ್ಟಿಗೊಳ್ಳುತ್ತಿದ್ದರೂ, ಒಂದು ಪ್ರಬಲ ಸಂಘಟನೆಯಾಗಿ ಬೆಳೆದಿದ್ದರೂ ಸ್ತ್ರೀವಾದವೆಂದರೇನು ಎಂಬ ಪ್ರಶ್ನೆಯಿಂದ ಹಿಡಿದು, ಸ್ತ್ರೀವಾದಿಗಳೆಲ್ಲರೂ ಸ್ವಚ್ಛಂಧ ಸ್ವತಂತ್ರರು ಎಂದು ತಿಳಿಯುವ ವಾದಿಸುವ ಅತಿರೇಕದವರೆಗೆ ಇದರ ವ್ಯಾಪ್ತಿಯಿದೆ. ಸ್ತ್ರೀಯರ ಪರವಾಗಿ ವಾದಿಸುವವರೆಲ್ಲರೂ ಸ್ತ್ರೀವಾದಿಗಳು ಅದರಲ್ಲಿ ಸ್ತ್ರೀಯರಿರಬಹುದು ಪುರುಷರಿರಬಹುದು. ಸ್ತ್ರೀಯರ ವಿರುದ್ಧವಾಗಿ. ಮಾತನಾಡುವವರು ಸ್ತ್ರೀವಾದಿಗಳಲ್ಲ ಅವರಲ್ಲಿ ಸ್ತ್ರೀಯರಿಬಹುದು. ಪುರುಷರಿರಬಹುದು-ಇದು ಸಾಮಾನ್ಯವಾಗಿ ಸ್ತ್ರೀವಾದ ಎಂದರೇನು ಎಂದು ಕೇಳುವ ಪ್ರಶ್ನೆಗೆ ಹದಿನೈದು ವರ್ಷಗಳಿಂದ ಕೇಳುತ್ತಾ ಬಂದಿರುವ ಇನ್ನೂ ಮುಂದೂ ಕೇಳಬಹುದಾದ ಪ್ರಶ್ನೆಗೆ ಕೊಡುವ ಕೊಡಬಹುದಾದ ಸರಳವಾದ ಉತ್ತರ ಮತ್ತು ಸ್ತ್ರೀ ಶೋಷಣೆಯ ಬಗ್ಗೆ ಮಾತನಾಡುವವರು ಒಂದು ಎಚ್ಚರಿಕೆಯನ್ನಂತು ವಹಿಸಬೇಕು. ಈ ಶೋಷಣೆ ಪುರುಷರಿಂದ ಮಾತ್ರ ನಡೆಯದೇ ಸ್ತ್ರೀಯರಿಂದ, ಸಮಾಜದಿಂದ ನಿಯಮಗಳಿಂದ ಈ ಹಿನ್ನೆಲೆಯಲ್ಲಿ ಸರಳವಾದ ಸ್ತ್ರೀವಾದ ಇಂದಿನ ಅಗತ್ಯವಾಗಿದೆ. ಸ್ತ್ರೀವಾದ ಇಂದು ಮನೆ ಮನೆಯ ಬಾಗಿಲನ್ನು ತಟ್ಟುತ್ತಿದೆ. ಹೀಗೆ ಮನೆ ತಟ್ಟುವ ಸ್ತ್ರೀವಾದ ಕಬ್ಬಿಣದ ಕಡಲೆಬಾರದು, ದಂತಗೋಪುರದಲ್ಲಿ ಕುಳಿತು ಅಸಂಖ್ಯಾತ ಸ್ತ್ರೀಯವರನ್ನು ವಂಚಿಸದೆ. ಅದಕ್ಕೆ ಬದಲಾಗಿ ಭಾರತದ ಪರಿಸರಕ್ಕೆ ಕನ್ನಡದ ಪರಿಸರಕ್ಕೆ ಇದನ್ನು ಹೇಗೆ ಅನ್ವಯಿಸಬಹುದು ಎಂದು ಚಿಂತಿಸಬೇಕು. ಈ ನಿಟ್ಟಿನಲ್ಲಿ ಯೋಚಿಸಿದಾಗ ಸಮಾನತೆಯನ್ನು ಕೇಳವದು ಸ್ತ್ರೀವಾದವಲ್ಲ ಗಂಡು ಮಕ್ಕಳನ್ನು ತೊರೆದು ಬೀದಿಗಿಳಿಯುವದೂ ಸ್ತ್ರೀವಾದವಲ್ಲ. ಅತ್ಯಾಧುನಿಕ ಫ್ಯಾಶನ್ನುಗಳ ಮೊರೆ ಹೋಗುವುದು ಸ್ತ್ರೀವಾದವಲ್ಲ ಸ್ತಿವಾದವೆಂದರೆ ಸಂವಹನ ಅರ್ಥವಂತಿಕೆ. ಹೃದಯವಂತಿಕೆಗಳನ್ನು ಸ್ತ್ರೀಯರು ಇತರರಿಗೆ ನೀಡಿ ಇತರರಿಂದ ಅದನ್ನು ಸಹಜವಾಗಿ ಪಡೆಯುವುದಾಗಿದೆ. ಹೇಗೆ ತಾಯಿ ತನ್ನ ಮಗುವಿಗೆ ಸಹಜವಾಗಿ ಹಾಲೂಡಿಸಿ ಪೋಷಿಸುವಳೋ ಹಾಗೆ ಆದರೆ ಕೆಲವು ಬಾರಿ ಸಂಘಟನೆಗಳನ್ನು ಮಾಡಿಕೊಳ್ಳುವುದು. ಚಳುವಳಿ ನಡೆಸುವುದು, ಪ್ರತಿಭಟನೆ ಮಾಡುವದು. ಇವು ಅದರ ಅನಿವಾರ್ಯ

ಅಂಗಗಳಾಗುತ್ತವೆ-ಮಗು ಅಳದಿದ್ದರೆ ತಾಯಿಯೂ ಹಾಲು ಕುಡಿಸುವುದಿಲ್ಲ.

ಸ್ತ್ರೀವಾದವು ಹೀಗೆ ಜನಪರವಾದ ಸ್ತ್ರೀಸಂವೇದನೆಯನ್ನು ಅರಿತಂತ ತಹದಾಗಿರಬೇಕು ಜನರಲ್ಲಿ ಬೆರೆಯಬೇಕು ಯಾವುದೇ ವಾದವಾದರೂ ಮೌಖಿಕ ಸಂಪ್ರದಾಯವಾಗಿ ಉಳಿಯದೇ ಬೆಳೆಯಬೇಕೆಂದರೆ ಬರಹರೂಪಕ್ಕಿಳಿಯಬೇಕು ವೇದ, ಉಪನಿಷತ್ತು, ರಾಮಾಯಣ, ಬುದ್ಧನ ಉಪದೇಶ ಮಹಾಭಾರತ ಪುರಾಣಗಳು, ಸ್ಮೃತಿಗಳು- ಈ ಎಲ್ಲವೂ ಶೃತಿ ಪರಂಪರೆಯಲ್ಲಿಯೇ ಬದುಕಿದ್ದು ಅನಂತರ ಬರಹ ರೂಪಕ್ಕಿಳಿದವು ವಾಸ್ತವವಾಗಿ ಮುದ್ರಣವಾದ ಗ್ರಂಥದಲ್ಲಿ ಇವುಗಳ ಉಚ್ಚಾರ ದೋಷವಿರಬಹುದೇ ಹೊರತು ಶೃತಿ ರೂಪದಲ್ಲಿ . ಅಲ್ಲ ಸ್ತ್ರೀವಾದವು ಈಗಾಗಲೇ ಕನ್ನಡ ಸಾಹಿತ್ಯದಲ್ಲಿ ಹೇಗೆ ಪ್ರತಿಪಾದಿತವಾಗಿದೆ ಅಥವಾ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದದ ಬೇರುಗಳನ್ನು ಹೇಗೆ ಹುಡುಕಬಹುದು ಎಂಬ ಚರ್ಚೆ ವಿಚಾರ ಮಂಡನೆವಾದ ನಡೆದಿದೆ ಬರಹರೂಪದಲ್ಲಿ ಒಂದು ಒಂದೂವರೆ ದಶಕದಲ್ಲಿ ಬದುಕಿನಲ್ಲಿ ತಲೆಯೆತ್ತಿದ ಸ್ತ್ರೀವಾದವನ್ನು ಕನ್ನಡ ಸಾಹಿತ್ಯಕ್ಕೆ ಪ್ರಾಯೋಗಿಕವಾಗಿ ಅನ್ವಯಿಸಿ ಬದುಕನಲ್ಲಿಯೂ ತರಲು ಪ್ರಯತ್ನಿಸಲಾಗಿದೆ.

ಪುರಾಣ -ಪ್ರಾಚೀನ ಮಹಾಕಾವ್ಯಗಳಲ್ಲಿನ ಸ್ತ್ರೀ ಪಾತ್ರಕ್ಕೆ ಆಧುನಿಕ ಸಂವೇದನೆ.

ಇತ್ತೀಚಿನ ದಶಕಗಳಲ್ಲಿ ಪುರಾಣಗಳ ಮತ್ತು ಪ್ರಾಚೀನ ಮಹಾಕಾವ್ಯಗಳ ಸ್ತ್ರೀಪಾತ್ರಗಳನ್ನು ಅದರ ಕಾಲದೇಶಗಳಿಂದ ಬಿಡುಗಡೆಗೊಳಿಸಿ ಅವರ ಮೂಲಕ ತಮ್ಮ ಆಧುನಿಕ ಸಂವೇದನೆಯನ್ನು ಬಿಂಬಿಸುವ ಕವಿತೆ ಕಾದಂಬರಿಗಳು ಬಂದಿವೆ ಇಲ್ಲಿ ಸೀತೆ ಅಹಲ್ಯೆ ದ್ರೌಪದಿ ಮೊದಲಾದವರಿಗೆ ಹೊಸ ಬಾಯಿ ಕೊಡಲಾಗಿದೆ; ಅವರ ವರ್ತನೆಗಳನ್ನು ಪ್ರಶ್ನಿಸಲಾಗಿದೆ. ಆದ್ದರಿಂದ ಸ್ತ್ರೀ ಸಂವೇದನೆಯನ್ನು ಸಾಹಿತ್ಯದಲ್ಲಿ ಹುಡುಕುವಾಗ ಸ್ತ್ರೀ ನಿರ್ಮಿತ ಪುರುಷ ನಿರ್ಮಿತ ಎಂದು ಗೆರೆ ಹಾಕಿಕೊಂಡು ಹುಡುಕುವ ಅಗತ್ಯವಿಲ್ಲ. ಅದರಂತೆ ' ಪರ್ವ' ಕಾದಂಬರಿಯಲ್ಲಿ ಕುಂತಿ, ದ್ರೌಪದಿ, ಮಾದ್ರಿ ಪ್ರತಿಯೊಬ್ಬರಿಗೂ ಹೊಸದೊಂದು

ಅಸ್ಥಿತ್ವವನ್ನು ನೀಡಿದ್ದಾರೆ. 'ಹೋಮರನೂ ತೂಕಡಿಸುತ್ತಾನೆ' ಎಂಬ ಹೇಳಿಕೆಯಂತೆ ಮಹಾಕಾವ್ಯದಲ್ಲಿ ಮಹಾಕವಿಯ ಅವಜ್ಞೆಗೆ ಒಳಗಾದ ಪಾತ್ರಗಳಲ್ಲಿ ರಾಮಾಯಣದ ಉರ್ಮಿಳೆಗೆ ಕುವೆಂಪು ತಮ್ಮ 'ರಾಮಾಯಣ ದರ್ಶನಂ' ನಲ್ಲಿ ಹೊಸದೊಂದು ಅಸ್ಥಿತ್ವ ಸ್ಥಾಪಿಸಿದ್ದಾರೆ.

ಪುರಾಣ ಮತ್ತು ಮಹಾಕಾವ್ಯಗಳು ಸ್ತ್ರೀ ಅಸ್ಥಿತ್ವವನ್ನು ಗೌಣವಾಗಿಸಿದೆ. ಅಲ್ಲದೇ ಕೇವಲ ಆದರ್ಶದ ರೂಪಗಳಾಗಿದ್ದವು ಅವರ ಮಾನಸಿಕ ಸ್ಪಂದನಗಳಿಗೆ ಅಲ್ಲಿ ಯಾವುದೇ ರೀತಿಯಾದಂತ ಅಸ್ಥಿತ್ವವಿರಲಿಲ್ಲ ಸ್ತ್ರೀಯರು ಕೇವಲ ಪತಿಯ ನೆರಳುಗಳಾಗಿದ್ದರು ವಾಲ್ಮೀಕಿ ಸೀತೆಯ ಪತಿವ್ರತೆಯ ಮಹಾಪೂರದಲ್ಲಿ ಉರ್ಮಿಳೆ ಕೊಚ್ಚಿಕೊಂಡು ಹೋದಳು ಆದರೆ ಕುವೆಂಪು ಉರ್ಮಿಳೆಗೆ ಹೊಸದೊಂದು ರೂಪಕೊಟ್ಟು ಅವಳನ್ನು ಕತೆಯಲ್ಲಿ ಉತ್ತುಂಗ ಸ್ಥಿತಿಗೇರಿಸಿದ್ದಾರೆ. ಅಷ್ಟೇ ಅಲ್ಲದೆ ಮಂಥರೆಯೂ ಸಹ ವಿಶಿಷ್ಟ ಪಾತ್ರದಲ್ಲಿ ಮಮತೆಯ ಸುಳಿಯಾಗಿ ಹೊರಬಂದಿದ್ದಾಳೆ.

'ಪರ್ವ' ಕಾದಂಬರಿಯಲ್ಲಿ ಬರುವ ಪ್ರತಿ ಸ್ತ್ರೀಯೂ ಒಂದೊಂದು ಬದುಕಿದೆ ಹೊಸದಾದ ಅಸ್ಥಿತ್ವವಿದೆ. ಗಂಡನು ಕುರುಡುನೆಂದು ಕಣ್ಣಿಗೆ ಬಟ್ಟೆ ಕಟ್ಟಿ ಕೊಂಡಂತಹ ಗಾಂಧಾರಿಯು ತನ್ನ ಒಳಗಣ್ಣನ್ನು ತೆರೆದಿದ್ದಾಳೆ. ಕುಂತಿ, ದ್ರೌಪದಿ, ಮಾದ್ರಿ ಪ್ರತಿಯೊಬ್ಬರೂ ಮನಬಿಚ್ಚಿ ಮಾತನಾಡಿದ್ದಾರೆ ತಾವು ಸೋತ-ಗೆದ್ದ ಸ್ಥಾನವನ್ನು ಕುರಿತು ಚಿಂತಿಸಿದ್ದಾರೆ.

ಖಾಂಡೇಕರವರ 'ಯಯಾತಿ'ಯೂ ಸಹ ದೇವಯಾನಿ, ಶರ್ಮಿಷ್ಟೆಯನ್ನು ಜೀವಂತವಾಗಿಡಿಸುವಲ್ಲಿ ಯಶಸ್ವಿಯಾಗಿದೆ . ಮಹಾಕಾವ್ಯ ಮಾಲೆಯಲ್ಲಿ ಬರುವ ಈ ಕಥೆ ದೇವಯಾನಿ ಶರ್ಮಿಷ್ಟೆಯರಿಗೆ ಒಂದು ಹೊಸ ದಿಕ್ಕನ್ನೇ ತೋರಿಸಿದೆ.

ವ್ಯಾಸ ಭಾರತದಲ್ಲಿ ಕೇವಲ ದುಷ್ಟ ಪಾತ್ರಕ್ಕೆ ಸೀಮಿತವಾದ ಪೂತನಿಯನ್ನು ಹೊಸದೊಂದು ರೂಪ ಕೊಟ್ಟು ಅವಳನ್ನು ಕೃತಾರ್ಥಳಾಗಿದ್ದಾರೆ.

ಇಲ್ಲಿರುವ ಸ್ತ್ರೀಯರು ತಮ್ಮ ನೋವು-ನಲಿವು ತೊಳಲಾಟಗಳೆಲ್ಲಾ ಹೃದಯತುಂಬಿ ಬಿಂಬಿಸಿದ್ದಾರೆ.

ಪುರಾಣ-ಮಹಾಕಾವ್ಯಗಳಲ್ಲದೇ ಇಂದಿನ ಅನೇಕ ಲೇಖಕರೂ ಸಹ ಸ್ತ್ರೀ ಸಂವೇದನೆಯನ್ನು ಕನ್ನಡಿಯಂತೆ ತೋರಿಸಿದ್ದಾರೆ.

ಶಿವರಾಮ ಕಾರಂತರ "ಮರಳಿ ಮಣ್ಣಿಗೆ"ಯ ಸರಸೋತಿ, ಪಾರೋತಿ ನಾಗವೇಣಿಯರು ಗಂಡನಿಲ್ಲದೆ ಇಲ್ಲದೇ 'ಫಣಿಯಮ್ಮ' ನಂತಹ ಬದುಕನ್ನೇ ಬದುಕಿದವರು ಕಾರಂತರು ಪ್ರಾರಂಭದಿಂದಲೇ ಬದುಕನ್ನು ತೆರೆದ ಮನಸ್ಸಿನಿಂದ ಕಂಡವರು ಅವರ ಕಾಲಕ್ಕೆ ಮೂಗು ಮುರಿಯುತ್ತಿದ್ದ ಗಂಡು-ಹೆಣ್ಣಿನ ಸಂಬಂಧದ ಆರೋಗ್ಯಕರ ನಿಲುವನ್ನು ಆರೋಗ್ಯವಂತಹ ಮನಸ್ಸಿನಿಂದ ಪ್ರತಿಪಾದಿಸಿದವರು ಅವರ "ಮೈಮನಗಳ ಸುಳಿಯಲ್ಲಿ" "ಮೂಕಜ್ಜಿಯ ಕನಸುಗಳು" "ಹೆತ್ತಾಳ ತಾಯಿ" ಮೂಢನಂಬಿಕೆಗಳನ್ನು ಬದಿಗೆ ಸರಿಸಿ ಹೆಣ್ಣಿನ ಹೃದಯವನ್ನು ತೆರೆದಿಟ್ಟಿತು ಚದುರಂಗ "ವೈಶಾಖ" ದಲ್ಲಿ ರುಕ್ಮಿಣಿಯ ಬಗೆಗೆ ಲೇಖಕರ ಅನುಕಂಪವನ್ನು ಸ್ಪಷ್ಟವಾಗಿಯೇ ಗುರುತಿಸಬಹುದು ಅವಳ ನಿಸ್ಸಹಾಯತೆ ಲೈಂಗಿಕತೆ ಬದುಕಿನ ಅನಿವಾರ್ಯತೆಗಳಲ್ಲಿ ಕಾದಂಬರಿಗಾರರು ಅವಳಿಗಾಗಿ ಕುದಿಯುತ್ತಾರೆ. ಅಪ್ಪಟ ಪ್ರಾದೇಶಿಕತೆಯಿಂದ ಕೆಲಬಾರಿ ಕಬ್ಬಿಣದ ಕಡಲೆಯಾದರೂ ಮಿರ್ಜಿ ಅಣ್ಣಾರಾಯರ 'ನಿಸರ್ಗ' ದ ತಾರಾಳ ಪರವಾಗಿಯೇ ಲೇಖಕರಿದ್ದಾರೆ.

ಫಣಿಯಮ್ಮನಂತಹ ವ್ಯಕ್ತಿಯನ್ನು ಎಂ.ಕೆ ಇಂದಿರಾ ಕಂಡಿದ್ದರು ದುರಾದೃಷ್ಟ ಅಸಹನೀಯ ಬದುಕು ಮತ್ತು ವೈಧ್ಯವ್ಯದ ಕಲನೆರಳ ಕೆಳಗೆ ಹೇಗೆ ಅವಳ ಮಾನವೀಯತೆ ಪುಟಿದೆದ್ದಿತು ಎಂಬ ಚಿತ್ರಣವಿದೆ. ಇಲ್ಲಿ ಅವರ 'ತುಂಗಭದ್ರಾ' ಮಂದಾಕಿನಿಯ ಪಾತ್ರದಲ್ಲೇ ಈ ಹೊಳದು ಕಂಡಿದೆ ಅವರ ಸಣ್ಣಕತೆಗಳ ಸ್ತ್ರೀ ಪಾತ್ರಗಳು ಪುರುಷರನ್ನು ಅವಲಂಬಿಸದೇ ದೆವ್ವದಂತೆ ಇಡೀ ಮನವಾರ್ತೆ ಮಾಡಿ ಸಂಸಾರವೆಂಬ ಸಾಗರದಲ್ಲಿ ಈಜಿ ದಡ ಸೇರುವುದನ್ನು ನಾವು ಕಾಣುತ್ತೇವೆ.

ಅನುಪಮಾ 'ಮಾಧವಿ'ಯಲ್ಲಿ ಬಂಡಾಯ ಮನೋಭಾವದ ಪಾತ್ರವಿದ್ದರೆ ಅವರ ಅನೇಕ ಕಾದಂಬರಿಗಳಲ್ಲಿ ವಿಚಾರವಾದಿಯೂ ಸ್ಫಲಿತ ಬುದ್ಧಿಯುಳ್ಳವಳೂ ವಿದ್ಯಾವಂತೆಯೂ ಆಗಿದ್ದು ಪ್ರೇಮಕ್ಕೆ ತುಡಿಯುವ ನಾಯಕಿಯಿರುತ್ತಾಳೆ. ಗಟ್ಟಿ ಕಾದಂಬರಿಗಳನ್ನು ಗುರುತಿಸುವ ಈ ಜಾಡಿನಲ್ಲಿಯೇ ಇನ್ನೊಂದು ಮಾತು ಹೇಳುವುದೊಳ್ಳೆಯದು ಸ್ತ್ರೀ ಪರವಾದ ಇಂತಹ ಗಟ್ಟಿ ದನಿಯತ್ತಿರುವ ಲೇಖಕ ಲೇಖಕಿಯರ ನಡುವೆ ತಾವು ಸ್ವತಃ ಹೆಣ್ಣಾಗಿದ್ದೂ ತಮ್ಮ ಕಥಾನಾಯಕಿಯರನ್ನು ಬಣ್ಣದ ಬೊಂಬೆಯಾಗಿಸಿ ಸುಂದರವಾದ ದೇಹ ಸುಂದರವಾದ ಮುಖಕ್ಕೆ ಅವಳನ್ನು ಸೀಮಿತಗೊಳಿಸಿ ವಿಚಾರವಾದದಿಂದ ವಿಮುಖಳಾಗಿಸಿ ಅತಿ ಸುಂದರನಾದ ನಾಯಕನೊಂದಿಗೆ ಅವಳ ಪ್ರಣಯ ವ್ಯವಹಾರವನ್ನು ಸಾಗಿಸಿ ಅಲ್ಪಸ್ವಲ್ಪ ಅಡಚಣೆಯನ್ನೊದಗಿಸಿ ಕೊನೆಗೆ ಶುಭಂ ಎಂದು ಮುಗಿಸುವ ಮತ್ತು ಕಾಲೇಜಿನ ಹದಿಹರೆಯದ ಮನಸ್ಸುಗಳನ್ನೇ ಬದುಕೆಂದರೆ ಇಷ್ಟೇ ಎಂಬ ತಪ್ಪು ಗ್ರಹಿಕೆಗೆ ತಳ್ಳಿ ಬದುಕಿನ ಕಠಿಣ ವಾಸ್ತವಗಳನ್ನು ಎದುರಿಸಲಾಗದ ಹೇಡಿಗಳನ್ನಾಗಿ ಅವರನ್ನು ಪರಿವರ್ತಿಸುವ ಸಾಲು-ಸಾಲು ಕಾದಂಬರಿಗಳು ಬರುತ್ತವೆ. ಆದರೆ ಸಾಹಿತ್ಯ ಜನರ ಬದುಕನ್ನು ಪ್ರತಿಬಿಂಬಿಸುವದು ಕಾರಣ ಸ್ತ್ರೀಯರು ಅಬಲೆಯರು ಕೈಲಾಗದವರು ಅವರು ಬಳ್ಳಿಗಳಂತೆ ಆಶ್ರಯವಿಲ್ಲದೆ ಬದುಕಲಾರರು ಎಂಬ ನಮ್ಮ ಕವಿ ಸಮಯಗಳನ್ನು ಮೀರಿ ಬೆಳೆದು ಹಳೆಯ ಪ್ರತಿಮಗಳನ್ನು ಬಂಧಿಸಿ ತಾವೇ ಹೊಸ ಪ್ರತಿಮೆಗಳಾಗಬೇಕಾದದ್ದು ಅನಿವಾರ್ಯವಾಗಿದೆ. ಸ್ತ್ರೀವಾದಿ ನೆಲೆ ಯೆಂದರೆ ಸಮಗ್ರ ಸಾಹಿತ್ಯದಿಂದ ಪ್ರತ್ಯೇಕವಾಗಿ ನಿಲ್ಲುವ ದ್ವೀಪವಾಗಿ ಬಿಡುವ ನಿಲುವು ಎನ್ನುವ ಧೋರಣೆಯೂ ಕಂಡುಬರುತ್ತದೆ. ಈ ಅತಿಗಳ ಗೊಡವೆಗೆ ಹೋಗದೇ ಈ ವಿಶಿಷ್ಟ ನೆಲೆಯ ಅಧ್ಯಯನಕ್ಕೆ ಎದುರಾಗುವ ಕೆಲವು ಅಧ್ಯಯನಕ್ಕೆ ಎದುರಾಗುವ ಕೆಲವು ಸಮಸ್ಯೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಈ ಪರಿಕಲ್ಪನೆಯಲ್ಲಿಯೇ ಸಂಕೀರ್ಣತೆಯಿದೆ ಮೊದಲನೆಯದಾಗಿ ವರ್ಗೀಕರಣದ ಯಾವ ಹಂತದಲ್ಲಿ ಇದು ಸಿದ್ಧಿಸುತ್ತದೆ ಇನ್ನುವುದನ್ನು ಸ್ಪಷ್ಟಪಡಿಸಿಕೊಳ್ಳಬೇಕು ಎಂದರೆ ಒಟ್ಟಾರೆಯಾದ ಮಾನವೀಯ ಸಂವೇದನೆಗಳನ್ನು ಒಂದು ಘಟಕವಾಗಿ ತೆಗೆದುಕೊಂಡು ಅವುಗಳನ್ನು ಸ್ತ್ರೀ-ಪುರುಷ ವಿಭಾಗಗಳಾಗಿ ಒಡೆದುಕೊಳ್ಳುತ್ತೇವೆಯೇ? ಹಾಗೆಂದರೆ ಮುಸ್ಲಿಂ

ದಲಿತ ಇತ್ಯಾದಿಗಳು ಸಮಗ್ರ ಸ್ತ್ರೀ ಅಥವಾ ಪುರುಷ ಸಂವೇದನೆಯ ಉಪವಿಭಾಗಗಳಾಗುತ್ತವೆ. ಹೀಗಿಲ್ಲದೆ ಈ ಒಳವಿಭಾಗಗಳನ್ನೇ ವರ್ಗೀಕರಣದ ತಳಹದಿಯನ್ನಾಗಿಟ್ಟುಕೊಂಡು ಪ್ರತಿಯೊಂದನ್ನೂ ಮತ್ತೆ ಸ್ತ್ರೀ-ಪುರುಷ ವರ್ಗಗಳಾಗಿ ವಿಭಾಗಿಸುತ್ತೇವೆಯೇ? ಈ ಅಂಶವನ್ನು ಮತ್ತಷ್ಟು ಸ್ಪಷ್ಟಪಡಿಸುವುದಾದರೆ ದೇವನೂರು ಮಹಾದೇವರ 'ಸಾಕವ್ವ'ನ ಪಾತ್ರವು ಸಂವಹಿಸುವುದು ದಲಿತ ಸ್ತ್ರೀಯ ಸಂವೇದನೆಗಳನ್ನೇ ಅಲ್ಲವೇ ಎನ್ನುವ ಗೊಂದಲವನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ. ಅಲ್ಲದೇ ಈ ಕ್ರಮದಲ್ಲಿ-ಅಭ್ಯಾಸದ ಅನುಕೂಲಕ್ಕೆಂದೇ ಇಟ್ಟುಕೊಂಡರೂ ಕೂಡಾ ಸ್ತ್ರೀ-ಪುರುಷರಿಬ್ಬರಿಗೂ ಸಮಾನವಾಗಿರುವ ಸಂವೇದನೆಗಳ ಸ್ಥಾನವೂ ಸಂದಿಗ್ಧವಾಗಿಯೇ ಉಳಿಯುತ್ತದೆ.

ಸಂವೇದನೆಯ ನಿರ್ವಚನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಗೊಂದಲವು ಇನ್ನಷ್ಟು ಹೆಚ್ಚಾಗುತ್ತದೆ ಇಲ್ಲಿ ಸಾಮಾನ್ಯೀಕರಣ ಪ್ರಕ್ರಿಯ ಮತ್ತು ಅಭಿವ್ಯಕ್ತಿಯ ಪ್ರಮಾಣಿಕತೆಗಳೆರಡೂ ಚರ್ಚಾಸ್ಪದ ಅಂಶಗಳೇ ಆಗುತ್ತವೆ. ಸಂವೇದನೆ ಯನ್ನುವುದು ವ್ಯಕ್ತಿ ವಿಶಿಷ್ಟವೆನ್ನುವುದನ್ನು ಒಪ್ಪುವುದಾದರೆ "ಸ್ತ್ರೀ ಸಮುದಾಯಕ್ಕೆ ವಿಶಿಷ್ಟವಾಗಿರುವ ಸಂವೇದನೆಗಳು ಎನ್ನುವ ಉಲ್ಲೇಖವೆನ್ನುವೇ ಅಸಂಗತವಾಗುತ್ತವೆ" 'ಸ್ತ್ರೀಸಂವೇದನೆ' ಎಂದಾಗ ಬರಿಯ ಸ್ತ್ರೀಯರ ಸಂವೇದನೆ ಎನ್ನುವ ಅರ್ಥವಷ್ಟೇ ಸ್ಫುರಿಸುವುದಿಲ್ಲ ಒಬ್ಬ ಸಾಹಿತಿಯು "ಹೆಣ್ಣಾಗಿ ಅವಳ ಅನುಭವ ಲೋಕವನ್ನು ಪ್ರವೇಶಿಸಿ" ಬರೆದಾಗ ಮಾತ್ರವೇ ಸ್ತ್ರೀ ಸಂವೇದನೆಯು ಪ್ರಕಟವಾಗುತ್ತವೆ.

ಎಲ್ಲಾ ಸ್ತ್ರೀಯರಲ್ಲೂ ಸ್ತ್ರೀತ್ವಕ್ಕೆ ವಿಶಿಷ್ಟವಾದ ಸಂವೇದನೆಗಳು ಇರಲೇಬೇಕಾಗಿಲ್ಲ ಅಥವಾ ಪುರುಷರಲ್ಲೂ ಸ್ತ್ರೀ ಸಂವೇದನೆಗಳು ಇರುತ್ತವೆನ್ನುವುದನ್ನು ನವು ನಿರಾಕರಿಸಿಬೇಕಾಗಿಲ್ಲ. ಅಲ್ಲದೇ ಮಹಿಳೆಗೆ ಅಸ್ತಿತ್ವವಿರುವುದು ಕೇವಲ ಅವಳ ಸ್ತ್ರೀತ್ವದಲ್ಲಿ ಅಲ್ಲ. ಅವಳಿಗೂ ವರ್ಗ, ವರ್ಣ, ಸಂಸ್ಕೃತಿ, ಪ್ರದೇಶ, ಧರ್ಮ ಮುಂತಾದ ಹಲವು ನೆಲೆಗಳಿವೆ ಹೀಗಾಗಿ ಮುಸ್ಲಿಂ ಸ್ತ್ರೀಯೊಬ್ಬಳ ಪ್ರಬಲವಾದ ಸಂವೇದನೆಗಳು ದಲಿತ ಮಹಿಳೆಯರೊಂದಿಗೆ ಸಮೀಕರಣಗೊಳ್ಳಲಾರವು.

ಈ ಅಂಶವನ್ನು ಒತ್ತಟ್ಟಿಗೆ ಇತ್ತರೂ ಕೂಡಾ ಈ ಸಂವೇದನೆಗಳು ವಸ್ತು ನಿಷ್ಠತೆಯನ್ನು ಎಷ್ಟರ ಮಟ್ಟಿಗೆ ಉಳಿಸಿಕೊಳ್ಳುತ್ತವೆನ್ನುವುದು ಪರಿಶೀಲನೆಗೆ ಅರ್ಹವಾಗುತ್ತವೆ.

ಎಲ್ಲ ಅಭಿವ್ಯಕ್ತಿಗಳೂ ವೈಯಕ್ತಿಕ, ನೈತಿಕ,ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮೌಲ್ಯಗಳ ಹಲವು ಸುಂಕದ ಕಟ್ಟೆಗಳನ್ನು ಹಾವೇ ಪ್ರಕಟಗೊಳ್ಳುತ್ತವೆ. ಹಾಗೆ ಸೋಸಲ್ಪಟ್ಟು ಉಳಿಯುವ ಅನಿಸಿಕೆಗಳು ಕೂಡಾ ಭಾಷಿಕ, ಸಾಹಿತ್ಯಕ ಹಾಗೂ ನಿರ್ದಿಷ್ಟ ಮಾಧ್ಯಮದ ಮಿತಿಗಳಿಗೆ ಒಳಪಡುತ್ತವೆ. ಹೀಗೆಂದಾಗ ಮೂಲ ಸಂವೇದನೆಗಳಿಗೆ ಇವುಗಳು ಎಷ್ಟರ ಮಟ್ಟಿಗೆ ನಿಷ್ಠನಾಗಿರಬಲ್ಲವು ಎನ್ನುವ ಪ್ರಶ್ನೆಯೂ ಏಳುತ್ತದೆ.

ಈ ಹಿನ್ನೆಲೆಯಲ್ಲಿ "ಶತಮಾನಗಳಿಂದ ಗಂಡು-ಹೆಣ್ಣು ಕೂಡಿ ಬದುಕಿದವು ಅವರಿಬ್ಬರಿಗೂ ಪರಿಚಿತವಾದ ಒಂದು ಸಾಮನ್ಯ ಪ್ರಪಂಚವಿದ್ದಂತೆ ಹೆಣ್ಣಿಗೆ ಅವಳದೇ ಆದ ಭೌತಿಕ, ಮಾನಸಿಕ, ಭಾವನಾತ್ಮಕ ಪ್ರಪಂಚವು ಉಳಿಯಿತು ಆದುದರಿಂದ ಮಹಿಳೆಯ ಸ್ಪಂದನೆಯ ಗ್ರಹಿಕೆಯ ಸ್ವೀಕಾರದ ಲಯ-ಗಲಿ-ತೀವ್ರತೆಗಳು ಭಿನ್ನವಾದುವು. ಈ ಭಿನ್ನತೆ ಬದುಕನ್ನು ನೋಡುವ ಅವಳ ದೃಷ್ಟಿಕೋನಕ್ಕೂ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿದೆ" ಎನ್ನುವ ವಿಜಯಾದಬ್ಬೆಯವರ ಅಭಿಪ್ರಾಯವನ್ನು ಗ್ರಹಿಸಬಗುದು. ಈ ವೈಶಿಷ್ಟ್ಯ ಪೂರ್ಣವಾದ ಅನುಭವದ ಅಭಿವ್ಯಕ್ತಿಯನ್ನು ಸ್ತ್ರೀ ಸಂವೇದನೆ ಯೆಂದು ಕರೆಯಬಹುದು ಈ ಅಭಿವ್ಯಕ್ತಿ ಸಾಹಿತಿಯ ಅಂಗವನ್ನು ಅವಲಂಬಸಿರುವುದಿಲ್ಲ.

ಸ್ತ್ರೀ-ಪುರುಷ ಜೊತೆ ಜೊತೆಯಾಗಿ ಬೆಳೆದದ್ದು ನಿಜವಾದರೂ ದಿನಗಳೆದಂತೆ ಅವರು ಬೇರೆ ಬೇರೆಯಾಗುತ್ತಲೇ ನಡೆದರು. ಇದಕ್ಕೆ ಕಾರಣ ಸ್ತ್ರೀಯು ಪುರುಷರಿಗಿಂತ ಸೂಕ್ಷ್ಮ ಎಂಬ ಭಾವನೆಯೇ ಇರಬಹುದು. ಅಥವಾ ಅವಳ ಮಾಸಿಕ ಋತುಚಕ್ರ ಅವಳ ತಾಯ್ತನವೂ ಕಾರಣವಾಗಿರಬಹುದು ಹೀಗಾಗಿ ಅವಳ ಪ್ರಪಂಚ ಹೆರಿಗೆ ಮನೆ ಅಡಿಗೆ ಮನೆಯಲ್ಲಿಯೇ ಕಳೆದುಹೋಗಿರಲೂಬಹುದು. ಹೀಗಾಗಿ ಅವಳ ಮಾನಸಿಕ ಭೌತಿಕ ಪ್ರಪಂಚ ಪುರುಷನಿಗಿಂತಲೂ ಭಿನ್ನವಾಗಿತ್ತು. ಅವಳು ಬದುಕನ್ನು ನೋಡುವ ದೃಷ್ಟಿಕೋನವೂ ಸಹ ಬದಲಾಗುತ್ತಾ ಹೋಯಿತು ವಿಭಿನ್ನವಾದರಿತಹ ಜೀವನವನ್ನು ಅವಳು

ಅನುಭವಿಸತೊಡಗಿದಾಗ ತಿಳಿಯದಲೇ ಆದರ್ಶಗಳನ್ನು ತನ್ನುವಾಗಿಸಿಕೊಂಡಳು ಅವರೊಳಗೆ ತಾನೂ ಸಹ ಬಂದಿಯಾದಳು. ಪುರುಷರು ಆದಶಠದ ಮೂಟೆಯನ್ನೇ ಅವಳ ಹೆಗಲೇರಿಸಿ ತಾವು ಮಾತ್ರ ಅದರಿಂದ ದೂರ ಉಳಿದರು.

ಹೀಗಾಗಿ ಅವಳ ಭಾವನೆ ಅವಳ ಪ್ರಪಂಚ ಪುರುಷರಿಗಿಂತ ಭಿನ್ನವಾಯಿತು.ಅದರಲ್ಲಿ ಅವಳ ಅಸ್ಥಿತ್ವ ಕೇವಲ ಪುರುಷನ ನೇರಳಾಯಿತು ಅವಳ ಸ್ಪಂದನೆ ಅವಳಲ್ಲಿ ಅನುಭವಿಸುವ ತಾಕಲಾಟಗಳನ್ನೆಲ್ಲಾ ಸೇರಿ ನಾವು 'ಸ್ತ್ರೀ ಸಂವೇದನೆ' ಎಂದು ಕರೆಯಬಹುದಾಗಿದೆ. ಸ್ತ್ರೀಯು ಅನುಭವಿಸುವಂತಹ ಪ್ರತಿಯೊಂದು ಜೀವನದ ಮಿಡಿತ-ನೋವು ನಲಿವುಗಳನ್ನು ಒಟ್ಟಾರೆಯಾಗಿ ಸ್ತ್ರೀ ಸಂವೇದನೆ ಎಂದು ಹೇಳಬಹುದು.

ಮಣಿಮಾಲಿನಿ.ವಿ.ಕೆ ಯವರು (ಉದಯವಾಣಿ,ಜುಲೈ 1998, ಮಹಿಳಾ ಸಂವೇದನೆ) ಕನ್ನಡ ಸೃಜನಶೀಲ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನಾಲ್ಕು ಆಯಾಮಗಳು ಪ್ರಧಾನವಾಗಿ ಕಂಡು ಬರುತ್ತವೆ ಎಂದು ಗುರುತಿಸುತ್ತಾರೆ.

1) ಮಹಿಳಾ ಸಾಹಿತಿಗಳಲ್ಲಿ ಕಂಡುಬರುವ ಸ್ವ-ಅಭಿವ್ಯಕ್ತಿ ಸ್ವಲ್ಪಮಟ್ಟಿಗೆ ಆತ್ಮವೃತ್ತಾತ್ಮಕವಾದ ಸ್ವಂತದ ಸ್ವರೂಪದ ಶೋಧದತ್ತ ಮುಖ ಮಾಡಿರುವ ಸಾಹಿತ್ಯ ಪ್ರಕಾರ.
2) ಸ್ತ್ರೀ ಪರವಾದ, ಸಹಾನುಭೂತಿಯ ನಿಲುವನ್ನು ತಳೆಯುವ ಬರಹಗಳು ಕಲ್ಪಿಸುವ ಕೃತಿಗಳು.
3) ಜೀವ ವಿರೋಧಿ ದೃಷ್ಟಿಕೋನವಿರುವ ಸ್ತ್ರೀಸಂವೇದನೆಯು ಅಭ್ಯಾಸವನ್ನಷ್ಟೆ ಕಲ್ಪಿಸುವ ಕೃತಿಗಳು.
4) ಯಾವುದೇ ಬಗೆಯ ಲಿಂಗ ವಿವಕ್ಷಗೆ ಹೊರಡವ,ಸ್ತ್ರೀಯನ್ನು ಒಬ್ಬವ್ಯಕ್ತಿಯಾಗಿ ವ್ಯಕ್ತಿತ್ವದ ಎಲ್ಲ ಶಕ್ತಿ,ಮಿತಿ,ಸಾಧ್ಯತೆಗಳೊಂದಿಗೆ ಗುರುತಿಸುವ ರಚನೆಗಳು.

ಇವುಗಳಲ್ಲಿ ಮೊದಲನೆಯದಾಗಿ ನಮ್ಮ ಮಹಿಳಾ ಸಾಹಿತಿಗಳು ಸ್ತ್ರೀ ಸಂವೇದನಗಳಿಗೆ ಸ್ಪಂದಿಸಿದ ರೀತಿಯನ್ನು ಗಮನಿಸಬಹುದು. "ಸಾಮಾಜಿಕವಾಗಿ ಸಾಹಿತ್ಯಕವಾಗಿ ಒಟ್ಟಿನಲ್ಲಿ

ಹೇಳುವುದಾದರೆ ಸಾಂಸ್ಕೃತಿಕವಾಗಿ ನಮ್ಮ ದೇಶದ ಮಹಿಳೆಯರು ಅಭಿವ್ಯಕ್ತಿಯ ಅನುಕೂಲ ಮತ್ತು ಅವಕಾಶಗಳಿಂದ ವಂಚಿತರಾಗಿಯೇ ಇದ್ದರೆನ್ನುವುದು ಐತಿಹಾಸಿಕ ಸತ್ಯ " ಎನ್ನುವ ಮಾತು ಸ್ವೀಕಾರಾಹ೯ವೇ ಆಗಿದೆ.

ಇತ್ತಿಚೇಗೆ ಮಹಿಳೆಯು ತನ್ನ ಮೌನವ್ರತವನ್ನು ಮುರಿಯ ತೊಡಗಿದ್ದಾಳೆ ತನ್ನ ಬಗೆಗೇ ಇರುವ ಭಯಗೊಳಿಸುವಂಥ ಅನೇಕ ಸತ್ಯಗಳನ್ನು ಗ್ರಹಿಸತೊಡಗಿದ್ದಾಳೆ ಇದುವರೆಗೆ ತಾನು ಭದ್ರವೆಂದು ನೆಲೆಯಾರಿದ್ದು ಸೈದ್ಧಾಂತಿಕ ಬುನಾದಿಯಿಲ್ಲದ ಅಂತರಾಳದಲ್ಲಿ ಎನ್ನುವ ಎಚ್ಚರದೊಂದಿಗೇ ವಸ್ತುಸ್ಥಿತಿಯನ್ನು ಸ್ವೀಕರಿಸುವ, ಪ್ರತಿಕ್ರಿಯಿಸುವ ಪ್ರತಿಭಟಿಸುವ ಪ್ರಕ್ರಿಯೆಯಲ್ಲಿ ಅವಳು ತೊಡಗಿಕೊಳ್ಳುತ್ತಿದ್ದಾಳೆ.

ಇಷ್ಟೆಲ್ಲಾ ಒಪ್ಪಿಕೊಂಡರೂ ಕನ್ನಡದಲ್ಲಿ ಮಹಿಳಾ ಅಭಿವ್ಯಕ್ತಿಗಳು ಬಹಳ ಮಟ್ಟಿಗೆ ನೀರಸವಾಗಿರುವುದರ ಹಿನ್ನೆಲೆಯು ನಮಗೆ ಮುಖ್ಯವಾಗುತ್ತದೆ. ಭಾರತದ ಇತರ ಭಾಷೆ ಸಾಹಿತ್ಯಗಳ ಹಲವು ಕೃತಿಗಳನ್ನು ಓದಿದಾಗ ಅನುಭವಕ್ಕೆ ಬರುವ ತೀವ್ರತೆ,ಕನ್ನಡ ಬರಹಗಾತಿ೯ಯರ ಕೃತಿಗಳನ್ನು ಓದಿದಾಗ ಆಗುವುದಿಲ್ಲ " ಎಂದು 1979 ರಷ್ಟು ಹಿಂದೆಯೇ ಬಿ.ನ ಮಂಗಳಾ ಹೇಳಿದ್ದರು.

ಮಂಗಳಾ ಅವರ ಮಾತುಗಳನ್ನು ಆವೇಶದಿಂದ ಪ್ರತಿಭಟಿಸುವುದರ ಬದಲಿಗೆ ಎಚ್ಚರಿಕೆಯಿಂದ ಪರಿಶೀಲಿಸಬೇಕಾದ ಅಗತ್ಯವು ಸಹ ಕಂಡುಬರುತ್ತದೆ. ವಾಸ್ತವವಾಗಿ ನಮ್ಮ ಮಹಿಳಾ ಸಾಹಿತಿಗಳ "ದೃಷ್ಟಿ-ಸೃಷ್ಟಿ"ಗಳೆರಡೂ ಪೇಲವವಾಗಿವೆ ಎನ್ನುವ ಈ ನಿರೀಕ್ಷಣೆಯು ನಮ್ಮ ವಿಶ್ಲೇಷಣೆಗೆ ಮೌಲ್ಯಮಾಪನಕ್ಕೆ ದಿಕ್ಸೂಚಿಯಾಗಬೇಕಾಗಿದೆ.

ಆದರೆ ಇಂದು ಒಂದು ಸಮಸ್ಯೆಯು ಹೊರಹೊಮ್ಮಿದೆ ಅದೇನೆಂದರೆ ಇಂದಿನ ಕನ್ನಡ ಮಹಿಳಾ ಸಾಹಿತ್ಯವನ್ನು 'ವಿಶ್ವದ ಮಹಿಳಾ ನಿಮಿ೯ತ ಸಾಹಿತ್ಯ ' ಮತ್ತು ಕನ್ನಡದ ಪುರುಷ ನಿರ್ಮಿತ ಸಾಹಿತ್ಯ ಈ ಎರಡು ಸಿದ್ಧಮಾದರಿಗಳ ಸಂದರ್ಭದಲ್ಲಿಯೇ ಗ್ರಹಿಸುವ

ಪ್ರವೃತ್ತಿಯು ನಮ್ಮಲ್ಲಿ ಬೆಳೆಯುತ್ತಿದೆ. ಇದಕ್ಕೆ ನಮ್ಮ ಮಹಿಳಾ ಸಾಹಿತಿಗಳಲ್ಲಿರುವ ಸತ್ವಪೂಣ೯ವಾದ ಸ್ವಯಂಪೂರ್ಣವಾದ ಸ್ವ-ಮಾದರಿಯ ಕೊರತೆಯೂ ಒಂದು ಕಾರಣವಾಗಿದೆ. ಆದರೆ ಎಂ.ಕೆ. ಇಂದಿರಾ ಅವರ ತುಂಗಭದ್ರ ದಂಥ ಕೌಟುಂಬಿಕ ಕಾದಂಬರಿಯನ್ನು ಜೇನ್ ಆಸ್ಟಿನ್‌ಳ ಪ್ರೈಡ್ ಅಚಿಡ್ ಪ್ರಿಜುಡಿಸ್ ಅಥವಾ ಶಿವರಾಮಕಾರಂತರ ಮರಳಿ ಮಣ್ಣಿಗೆ ಕಾದಂಬರಿಯೊಂದಿಗೆ ಹೋಲಿಸಬೇಕಾದ ಅಗತ್ಯವಿದೆಯೆ ?

ನಮ್ಮ ಮಹಿಳಾ ಸಾಹಿತ್ಯದಲ್ಲಿ ಏನೇನು ಇಲ್ಲವೆಂದು ಪಟ್ಟಿ ಮಾಡುವಷ್ಟೇ ಶ್ರದ್ಧೆಯಿಂದ ಅಲ್ಲಿ ಏನೇನಿವೆಯೆನ್ನುವುದನ್ನು ಗುರುತಿಸುವ . ಪ್ರಯತ್ನವನ್ನು ನಾವು ಮಾಡುತ್ತಿಲ್ಲ.ಇಲ್ಲಿ ಯಾವುದೇ ಕೃತಿಯನ್ನು ನಾನು ಹೆಸರಿಸಲು ಬರುವುದಿಲ್ಲ ಆದರೆ ಗುಣಗ್ರಹಿ ಧೋರಣೆಯಿರುವ ಸ್ವಸ್ಥ ಮನಸ್ಸು-ದೃಷ್ಟಗಳಷ್ಟೇ ಇಂದಿನ ಮಹಿಳಾ ನಿಮಿ೯ತ ಅಭಿವ್ಯಕ್ತಿಯ ಅನನ್ಯತೆಯಗಳನ್ನು ಗುರುತಿಸಬಲ್ಲವು

ಇದೇ ಸಂದರ್ಭದಲ್ಲಿ ನಮ್ಮ ಮಹಿಳಾ ಸಾಹಿತಿಗಳಲ್ಲಿರುವ ಕೆಲವು ಭ್ರಮೆಗಳನ್ನು ಗಮನಿಸಬೇಕು ನಮ್ಮ ಹೆಚ್ಚಿನ ಬರಹಗಾರ್ತಿಯರ ಸಾಹಿತ್ಯ ಸೃಷ್ಟಿಯ ಹಿಂದೆ ಯಾವುದೇ ಆಂತರಿಕ ಒತ್ತಡವಾಗಲೀ ಅನುಭವಗಳ ಸಂಕೀರ್ಣತೆಯಾಗಲೀ ಇರುವುದಿಲ್ಲ. ಪ್ರಜ್ಞೆಗಳು ತೀವ್ರವಾದ ಸಂವೇದನೆಗಳಿಗೆ ಒಳಗಾಗುವುದಕ್ಕೂ ಅವರ ಬರವಣಿಗೆಗಳಿಗೂ ಅರ್ಥಾರ್ಥ ಸಂಬಂಧವೂ ಇರುವದಿಲ್ಲ. ಆದುದರಿಂದಲೇ ನಮ್ಮ ಬಹುಪಾಲು ಮಹಿಳೆಯರು ತಮ್ಮ ಲೇಖನ ಕಾವ್ಯಗಳಲ್ಲಿ ಹರಿಜನ ಮಹಿಳೆ ಭಿಕ್ಷುಕಿ ಪತಿತೆ, ಶೋಷಿತೆ ಮುಂತಾದವರ ಬಗೆಗೆ ನಾವು ಬರೆದಿದ್ದೇವೆ ಮಹಿಳಾ ಸಂವೇದನೆಗಳಿಗೆ ಸ್ಪಂದಿಸಿದ್ದೇವೆ ಎನ್ನುವ ಭ್ರಮೆಯನ್ನು ಬೆಳೆಸಿಕೊಳ್ಳುತ್ತಾರೆ ಈ ಮಾದರಿಯ ಬುದ್ಧಿಪೂರ್ವಕವಾದ ರಚನೆಗಳು ಕೇವಲ ಹೊರ ವಿವರಗಳನ್ನು ಕೆಲವೋಮ್ಮೆ ಅದೂ ಜಾಳು ಮತ್ತು ಕೃತಕವಾಗಿ ಕಟ್ಟಿಕೊಡುತ್ತವೆಯೇ ಹೊರತಾಗಿ ಭಾವಸ್ಪಂದಿಗಳಾಗುವುದಿಲ್ಲ. ಆ ಮಹಿಳೆಯರ ಸಂಘರ್ಷದ ಸ್ವರೂಪವನ್ನು ಅರ್ಥೈಸಿಕೊಳ್ಳುವುದಿಲ್ಲ. ಈ ಮಿತಿಯನ್ನು ಒಪ್ಪಿಕೊಂಡೇ ಈ ನೆಲೆಯ ಅಧ್ಯಯನವನ್ನು

ನಡೆಸಬೇಕಾಗುತ್ತದೆ. ಆಂತರಿಕ ಒತ್ತಡ ತೀವ್ರವಾದ ಸಂವೇದನೆಯನ್ನು ತಮ್ಮ ಕೃತಿಗಳಲ್ಲಿ ಮಾಡಿಸುವಂತಹ ಗುಣವನ್ನು ಇಲ್ಲಿ ಬೆಳೆಸಿಕೊಳ್ಳ ಬೇಕಾದುದು ಅತ್ಯಂತ ಅಗತ್ಯವಾಗಿದೆ.

ಇಲ್ಲಿ ಲೇಖಕ ಚಿತ್ರಿಸಬೇಕಾದಂತಹ ಆಮುಕ್ತ ಸಮಾಜವೊಂದರ ಹುಳುಕುಗಳು ಒಳಸುಳಿಗಳು ಸವಾಲು ಸಾಧ್ಯತೆಗಳು ಇವುಗಳನ್ನೆಲ್ಲಾ ನಾವು ವಾತಾನುಕೂಲಿತ ಕೊಠಡಿಯೊಳಗೆ ತಂಪು ಪಾನೀಯವನ್ನು ಹೀರುತ್ತಾ ಕೊಳಚೆ ಪ್ರದೇಶದ ಉಸಿರುಕಟ್ಟುವ ವಾತಾವರಣದ, ಅರೆಹೊಟ್ಟೆಯ ತಳಮಳವನ್ನು ಅಭಿವ್ಯಕ್ತಿಸುವ ಲೇಖಕಿಯ ಬರಹಗಳಲ್ಲಿ ಕಂಡುಬರುವದು ಕಷ್ಟಸಾಧ್ಯ ಏಕೆಂದರೆ ಪರಕಾಯ ಪ್ರವೇಶದಷ್ಟು ಸುಲಭವಾಗಿ ಪರಭಾವ ಪ್ರವೇಶವು ಸಾಧ್ಯವಾಗುವುದಿಲ್ಲ. ಅಪರಿಚಿತ ಪ್ರಪಂಚವನ್ನು ಸಾಹಿತ್ಯದ ವಸ್ತುವಾಗಿ ಸ್ವೀಕರಿಸಿದಾಗ ಉಂಟಾಗುವ ಗೊಂದಲಗಳನ್ನು ಅಸಂಬದ್ಧಗಳನ್ನು ನಮ್ಮ ಲೇಖಕಿಯರು ಮನಗಾಣಬೇಕಾದದ್ದು ಅತ್ಯಂತ ಅವಶ್ಯ.

ಇದೇ ಸಂದರ್ಭದಲ್ಲಿ ಇಂದಿನ ಮಹಿಳಾ ಸಾಹಿತ್ಯವು ಸೃಷ್ಟಿಸುವ ಕೆಲವು ಅಭ್ಯಾಸಗಳನ್ನು ಪ್ರಸ್ತಾವಿಸಬೇಕು ಕೆಲವು ಬರಹಗಳಲ್ಲಿ ಚಿತ್ರಿತವಾಗಿರುವ ಹೊರಾಟದ ನೆಲೆಗಳನ್ನು ಗಮನಿಸಬಹುದು ಸ್ತ್ರೀ ನೆಲೆಯ ಅಭಿವ್ಯಕ್ತಿಯ ತಳಹದಿಯಲಾಗಿರುವವುದು ಎಲ್ಲಾ ವಿಧದ ಯಾಜಮಾನ್ಯಗಳ ನಿರಾಕರಣೆ ಮತ್ತು ಸ್ವಂತಿಕೆಯ ಸ್ಥಾಪನೆಯನ್ನುವದನ್ನು ಎಲ್ಲರೂ ಒಪ್ಪುತ್ತಾರೆ. ಶೋಷಕ ಪ್ರವೃತ್ತಿಯು ಹೆಣ್ಣಿನಲ್ಲಿರಲ್ಲಿ ಗಂಡಿನಲ್ಲಿರಲಿ ಅದು ಖಂಡನಾರ್ಹವೇ ಆಗುತ್ತದೆ. ಇದನ್ನು ನಿರ್ವಹಿಸುವಾಗ ತುಸುವೇ ಎಚ್ಚರ ತಪ್ಪಿದರೂ ಅದರ ಪರಿಣಾಮವು ವಿಪರೀತವಾಗುತ್ತದೆ.

ಗಂಡುಕೂಸು ಸಾವಿರಾರೂ ಹೆಣ್ಣು ಮಕ್ಕಳ ಜೀವನಕ್ಕೆ ಕೊಳ್ಳಿಯಿಡುತ್ತದೆ. ಅದನ್ನು ಹುಟ್ಟಿತ್ತೆಲೇ ಕೊಲ್ಲುವದರಿಂದ ಈ ಸಮಸ್ಯೆಗೆ ಪರಿಹಾರಸಿಗುವದು ಎಂದು ಕೃತಿಗಳನ್ನು ರಚಿಸಿದರೆ ಅಭಾಸವೆನಿಸುವುದು.

ಇಂಥ ಸಂದೇಶಗಳು ಜೀವ ವಿರೋಧಿಗಳಾಗಿವೆ. ಆವೇಶ ಪೂರ್ಣವಾಗಿವೆ

ಅನೈಸರ್ಗಿಕ ನೆಲೆಯವುಗಳಾಗಿವೆ. ಎಷ್ಟೇ ಸಾಂಕೇತಿಕವೆಂದುಕೊಂಡರೂ ಇಂಥ ನಿಲುವನ್ನು ಸಮರ್ಥಿಸುವುದು ಕಷ್ಟವಾಗುತ್ತೆದೆ. ಗಂಡು-ಹೆಣ್ಣುಗಳ ಮಧ್ಯೆ ಕಂದಕವನ್ನು ನಿರ್ಮಿಸುವ ಪರಸ್ಪರರ ಮೇಲೆ ಕತ್ತಿ ಮಸೆಯುವುದೇ ಸಂಘರ್ಷವೆನ್ನುವ ದೃಷ್ಟಿಕೋನವು ಸ್ವಲ್ಪ ಮಟ್ಟಿಗೆ ಹಾಸ್ಯಾಸ್ಪದವಾಗುತ್ತವೆ. ಒಟ್ಟು ಸಮಾಜದ ಸ್ವಾಸ್ಥ್ಯ ರಕ್ಷಣೆಯೂ, ಸಾಹಿತ್ಯ ಸೃಷ್ಟಿಯ ಉದ್ದೇಶಗಳಲ್ಲಿ ಒಂದಾಗಿದೆಯೆನ್ನುವುದು ನಾವು ಸದಾ ನೆನಪಿಡಬೇಕಾಗುತ್ತದೆ.

"ಪುರುಷರೊಂದಿಗಿನ ವಿನಿಮಯ ಸಹಚರ್ಯಗಳು ಹೆಚ್ಚಿದಂತೆ ಹೆಂಗಸರಿಗೆ ಸಂಬಂಧಿಸಿದಂತೆ ಇರುವ ಅರ್ಥಹೀನವಾದ ಜೀವ ವಿರೋಧಿ ಮೌಲ್ಯಗಳು ಕುಸಿದು ಹೊಸ ಮಹಿಳೆಯ ಹೊಸ ಮನುಷ್ಯನ ಹೊಸ ಚರಿತ್ರೆಯ ಪ್ಯಟಗಳಿಗೆ ನಾಂದಿಯಾಗ ಬೇಕು" ಎನ್ನುವ ಕರೆಯನ್ನು ನಮ್ಮ ಅನೇಕ ಮಹಿಳಾ ಸಾಹಿತಿಗಳು ಸರಿಯಾದ ಸಂದರ್ಭದಲ್ಲಿಯೇ ಗ್ರಹಿಸಿದ್ದಾರೆ ಪ್ರತಿಕ್ರಿಯಿಸಿದ್ದಾರೆ. ತಮ್ಮ ಅನುಕೂಲಕ್ಕಾಗಿ ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಗೆ ಸೃಷ್ಟಿಸಿಕೊಟ್ಟ ಮೌಲ್ಯಗಳಲ್ಲಿ ತಾಯ್ತನವೂ ಒಂದಾಗಿದೆ.

ಇದನ್ನು ಅತಿಯಾಗಿ ವೈಭವೀಕರಿಸುತ್ತಾ ಹೆಣ್ಣಿನ ಜೀವನದ ಅರ್ಥವಂತಿಕೆಯನ್ನು ಸಾರ್ಥಕ್ಯವನ್ನು ಅವಳ ಮಾತೃತ್ವದೊಂದಿಗೆ ಸಮೀಕರಿಸಿದ್ದರಲ್ಲಿ ಆ ಮೌಲ್ಯ ವ್ಯವಸ್ಥೆಯ ದುರಂತವಿದೆ. ನಮ್ಮ ಕೆಲವು ಲೇಖಕಿಯರು ಆ ವಿದ್ಯೆಯನ್ನು ಬಯಲುಗೊಳಿಸಲು ಪ್ರಯತ್ನಿಸಿದ್ದಾರೆ. ಎಂದರೆ ಕೌಟುಂಬಿಕ ನೆಲೆಯಾಚೆಗೂ ಸ್ತ್ರೀಗೆ ಇರುವ ಅಸ್ತಿತ್ವವನ್ನು ಇಂಥ ರಚನೆಗಳು ಸ್ಪಷ್ಟಪಡಿಸಿವೆ. ಸವಾಲುಗಳನ್ನು ಎದುರಿಸುತ್ತಾ ತಮ್ಮ ನಿಜವಾದ ಸ್ವರೂಪಗಳ ಪತ್ತೆಗೆ ಹೊರಡುವ ಆ ಪ್ರಕ್ರೀಯೆಯಲ್ಲಿ ಗಟ್ಟಿಯಾಗುತ್ತಾ ಹೋಗುವ ಈ ಪಾತ್ರಗಳೂ ಸ್ತ್ರೀ ಸಂವೇದನೆಗಳ ವಿಶಿಷ್ಟಾಂಶಗಳನ್ನು ಸೂಚಿಸುತ್ತವೆ.

ಇದರ ಇನ್ನೊಂದು ಬದಿಗೆ ಈ ಮೌಲ್ಯ ನಿರಾಕರಣೆಯನ್ನು ಅತಿಯಾಗಿ ಜಗ್ಗುವ ಪ್ರವೃತ್ತಿಯನ್ನು ಕಾಣುತ್ತೇವೆ. ವಿವಾಹ ಸಂಸ್ಥೆಯು ಪ್ರತಿಪಾದಿಸುವ ವಿಧಿ-ನಿಷೇದಗಳು ಸ್ತ್ರೀಯ ಲೈಂಗಿಕ ಬದುಕನ್ನು ನಿಯಂತ್ರಿಸುತ್ತವೆ. ಪುರುಷ ಯಾಜಮಾನ್ಯದ ಸಂಕೇತಗಳಾಗಿವೆಯೆನ್ನುವದು ಸರಿಯೇ ಆದರೆ ಇವುಗಳನ್ನು ಪ್ರತಿಭಟಿಸುವ ಉತ್ಸಾಹದಲ್ಲಿ ಬಹು ಪತ್ನಿತ್ವವನ್ನಾಗಲೀ ವಿವಾಹ ಬಾಹಿರ ಸಂಬಂಧಗಳನ್ನಾಗಲೀ ಪ್ರೋತ್ಸಾಹಿಸುವ

ಅಗತ್ಯವಿದೆಯೇ? ಇವೆಲ್ಲಾ ಮಹಿಳಾ ಸಂವೇದನಾತ್ಮಕತೆಯನ್ನು ಒಂದೋ ತಪ್ಪಾಗಿ ಗ್ರಹಿಸಲಾಗಿದೆ ಇವೆಲ್ಲಾ ಅನವಶ್ಯಕವಾಗಿ ತಿರುಚಲಾಗಿದೆ. ಇದು ಅಂಥ ಅಭಿವ್ಯಕ್ತಿಗಳ ಗ್ರಹಿಕೆಯನ್ನು ಹಾದಿ ತಪ್ಪಿಸುವ ಇಲ್ಲ ಅಪಾಯಗಳ ಸೂಚನೆಯಾ ಆಗಿದೆ.

ಈ ಸಂಧರ್ಬದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಬೇಕಾಗಿರುವುದುಆಕ್ರೋಶ ಆವೇಶಗಳಲ್ಲಿ "ಹೆಣ್ಣು ಹೆಣ್ಣಾಗಿ ಹುಟ್ಟುವುದಿಲ್ಲ ಸಾಮಾಜಿಕ ಪ್ರಕ್ರಿಯಗಳ ಮೂಲಕ ಅವಳನ್ನು ಹೆಣ್ಣಾಗಿ ರೂಪಿಸಲಾಗುತ್ತದೆ. " ಎನ್ನುವ ಅರಿವಿನೊಂದಿಗೆ ಸಾಧಿಸಬೇಕಾದ ಅಭಿವ್ಯಕ್ತಿ ಪ್ರಕಾರಗಳು ನಮ್ಮ ಸದ್ಯಕಾಲೀನ ಅಗತ್ಯಗಳಾಗಿವೆ.

"ಲಿಂಗಬೇಧವು ಪ್ರಕೃತಿ ಸಹಜವಾದುದು ಸೃಷ್ಟಿಯ ಸಾಹಿತ್ಯಕ್ಕೆ ಅಗತ್ಯವಾದುದು ಆದರೆ ಲಿಂಗ ಪ್ರಬೇದವು ಮಾನವ ನಿರ್ಮಿತವಾದುದು ಈ ದೃಷ್ಟಿಕೋನವನ್ನು ಬದಲಾಯಿಸುವುದು ಸಾಧ್ಯ" ಎನ್ನುವ ವಿಶ್ವಾಸವು ನಮ್ಮ ಸಾಹಿತಿಗಳಲ್ಲಿ ಮೂಡಬೇಕಾಗಿದೆ. ಸಾಹಿತ್ಯ ಸೃಷ್ಟಿಯಲ್ಲಿ ಪ್ರತಿಫಲಿಸಬೇಕಾದೆ ಇಲಿ ಪ್ರತಿಯೊಂದನ್ನೂ ಹೊಸ ದೃಷ್ಟಿಕೋನದಿಂದ ಕಾಣುವುದು ಅತ್ಯಂತ ಅವಶ್ಯಕವಾಗಿದೆ ವಿಚಾರಗಳನ್ನು ಸೀಮಿತವಾದಂತಹ ದೃಷ್ಟಿಕೋನಕ್ಕೆ ಒಳಪಡಿಸದೇ ಅದೊಂದು ವಿಮರ್ಶೆಯ ದಾರಿಯತ್ತ ಒಯ್ಯಬೇಕಾದುದು ಅತ್ಯಂತ ಅವಶ್ಯಕವಾಗಿದೆ. ವಿಷಯ ಕೇವಲ ಮೇಲ್ನೋಟಕ್ಕೆ ಅಳೆಯದೆ ಅದನ್ನು ಆಳವಾಗಿ ಅಬ್ಯಸಿಸಿ ಅನುಭಾವಿಸಿ ಬರೆಯುವುದು ಅತ್ಯಂತ ಅವಶ್ಯಕ.

ಮಹಿಳಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನಾ ಸ್ವರೂಪ

ವಿಮರ್ಶಕರು ಹೊಸಗನ್ನಡ ಸಾಹಿತ್ಯದ ಬೆಳವಣಿಗೆಯ ಕುರಿತು ವಿವೇಚಿಸಿದ್ದಾರೆ. ತಮ್ಮ ದೃಷ್ಟಿಯ ಅಳತೆಗೋಲಿನಿಂದ ಇದರ ಆಳ-ಅಗಲಗಳನ್ನು ಅಳೆದು ನೋಡಿದ್ದಾರೆ. ಹೊಸಗನ್ನಡ ಸಾಹಿತ್ಯದ ವೈಶಿಷ್ಟ ಅದರ ವೈವಿಧ್ಯಮಯ ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಅಡಗಿರುವುದನ್ನು ಗುರುತಿಸಿದ್ದಾರೆ. ಇದರ ಜೊತೆಯಲ್ಲಿ ಮಹಿಳಾ ಸಾಹಿತ್ಯದ

ರೂಪರೇಷೆಗಳು ಹಾಗೂ ಇತಿಮಿತಿಗಳನ್ನು ಚರ್ಚಿಸಿದ್ದಾರೆ. ಕೆಲವರು ಮಹಿಳಾ ಸಾಹಿತ್ಯ ನಾಲ್ಕುಗೋಡೆಗಳ ಮಧ್ಯದ ಅನುಭವವನ್ನು ಮಾತ್ರ ಪ್ರತಿಪಾದಿಸುತ್ತದೇ ಹೊರತು ಬಾಹ್ಯ ಪ್ರಪಂಚದ ಅನುಭವಗಳನ್ನು ಕಟ್ಟಿಕೊಡುವುದಿಲ್ಲವೆಂಬ (ಅಭಿವ್ಯಕ್ತಿ) ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನು ಕೆಲವರು ಶತಮಾನದಿಂದಲೂ ಮಹಿಳೆ ಅಸ್ಪೃಶ್ಯಳಾಗಿ ಎರಡನೇ ದರ್ಜೆಯ ಪ್ರಜೆಯಾಗಿ ಪುರುಷ ಪ್ರಧಾನ ಸಮಾಜದ ಸಂಸ್ಕೃತಿಯ ಸಂಕೋಲೆಯಾಳಗಿ ಬಂಧಿತಳಾಗಿದ್ದು. ಹನ್ನೆರಡನೇ ಶತಮಾನದಲ್ಲಿ ಮಾತ್ರ ವೈಚಳಿ ಬಿಟ್ಟು ಮಾತನಾಡಿದ್ದು ಅನಂತರ ಇಂದಿನವರೆಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದು ತಮ್ಮ ಅನೇಕ ಮಿತಿಗಳ ನಡುವೆಯೂ ಸಾಹಿತ್ಯ ರಚನೆಗೆ ತೊಡಗಿದ್ದು ಗಮನಾರ್ಹವಾಗಿದೆಯಂಬ ಸಮಾಧಾನಕರವಾದ ಮಾತುಗಳನ್ನು ಆಡಿದ್ದಾರೆ.

ಮಹಿಳಾ ಸಾಹಿತ್ಯಕ್ಕೆ ಪುರುಷ ದೃಷ್ಟಿಯ ವಿಮರ್ಶೆಯ ಕೃಪೆಯಾಗಲಿ ಅಥವಾ ಸ್ತ್ರೀವಾದಿ ದೃಷ್ಟಿಯ ರೀತಿಯಾಗಲಿ ಬೇಕಾಗಿಲ್ಲ. ಇಂದು ಮಹಿಳಾ ಸಾಹಿತ್ಯವನ್ನು ವಸ್ತುನಿಷ್ಟವಾಗಿ ವಿಮರ್ಶಿಸಬೇಕಾಗಿದೆ. ಮಹಿಳಾ ಸಾಹಿತ್ಯದ ಒಲವು-ನಿಲುವುಗಳನ್ನು ಅವಳು ಬದುಕಿದ ಸಾಮಾಜಿಕ ಪರಿಸರದ ಮತ್ತು ಎದುರಿಸಿದ ಪರಿಸ್ಥಿತಿಯ ಹಿನ್ನಲೆಯಲ್ಲಿ ಮೌಲ್ಯಮಾಪನ ಮಾಡಬೇಕಾಗಿದೆ. ಆಗ ಮಾತ್ರ ಮಹಿಳಾ ಸಾಹಿತ್ಯದ ಸಾಧ್ಯತೆ ಮಿತಿಗಳನ್ನು ಅಧಿಕೃತವಾಗಿ ಗುರುತಿಸಲು ಸಾಧ್ಯವಾಗುತ್ತದೆ.

ಮಹಿಳೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದಿದ್ದು ತನ್ನನ್ನು ಕುರಿತು ಹಾಗೂ ಸಾಮಾಜಿಕ ಸಂಬಂಧಗಳನ್ನು ಕುರಿತು ಮಾತನಾಡಿದ್ದು ಮೊದಲು 12 ನೇಯ ಶತಮಾನದಲ್ಲಿ ಆನಂತರ 19 ನೇ ಶತಮಾನದಲ್ಲಿ ಎಂಬುದನ್ನು ಐತಿಹಾಸಿಕ ದೃಷ್ಟಿಯಿಂದ ತುಂಬಾ ಮುಖ್ಯವಾದ ಸಂಗತಿಯಾಗಿದೆ.

ಹೊಸಗನ್ನಡ ಸಾಹಿತ್ಯ ರಚನೆಗೆ ಸಾಮಾಜಿಕ ಸ್ಥಿತ್ಯಂತರ ಚಾರಿತ್ರಿಕ ಒತ್ತಡ ಮತ್ತು ಆಚಿತರಿಕ ಅಗತ್ಯ ಕಾರಣವಾದಂತೆ ಮಹಿಳಾ ಸಾಹಿತ್ಯದ ರಚನೆಗೆ ಬದಲಾದ ಸಾಮಾಜಿಕ ಮೌಲ್ಯಗಳು, ಸ್ತ್ರೀ ಶಿಕ್ಷಣ ಸ್ವಾತಂತ್ರ್ಯ-ಸಮಾನತೆಯ ಅವಕಾಶಗಳು ಕಾರಣವಾಗಿವೆ.

ಆದುದರಿಂದಲೇ ಯಾವ ಕಾಲದ ಸಾಹಿತ್ಯದಲ್ಲಿಯೂ ಕಾಣಿಸದಷ್ಟು ವಸ್ತು ವೈವಿಧ್ಯತೆ-ಪ್ರಯೋಗ ಶೀಲತೆಯನ್ನು ಹೊಸಗನ್ನಡ ಸಾಹಿತ್ಯದಲ್ಲಿ ಕಾಣಬಹುದು.

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಅಕ್ಕಮಹಾದೇವಿ ಮತ್ತು ಸಂಚಿಹೊನ್ನಮ್ಮ ಇವರಿಬ್ಬರೂ ಮಹಿಳೆಯರಿಗೆ ಸಂಬಂಧಿಸಿದ ಎರಡು ಮಾದರಿಗಳನ್ನು ಪ್ರತಿನಿಧಿಸುತ್ತಾರೆ. ಎಂದು ಮಹಿಳಾ ಸಾಹಿತ್ಯದ ಕುರಿತು ಜಿ.ಎಸ್.ಶಿವರುದ್ರಪ್ಪ ನವರು ಹೇಳುವುದರಲ್ಲಿ ಮಹಿಳಾ ಸಾಹಿತ್ಯದ ಒಲವನ್ನು ಕಾಣಬಹುದಾಗಿದೆ.

ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ರಚನೆಗೊಂಡ ಮಹಿಳಾ ಸಾಹಿತ್ಯವನ್ನು ಅವಲೋಕಿಸಿದಾಗ ಮೂಲ ರೀತಿಯ ಸಾಹಿತ್ಯಕ ವಿಚಾರಗಳು ಮತ್ತು ಸ್ತ್ರೀ ಪರ ಸವೇದನೆಗಳನ್ನು ಕಾಣಬಹುದಾಗಿದೆ. ಒಂದು ನವೋದಯ ಕಾಲದಿಂದ ನವ್ಯದ ಕಾಲದವರೆಗೆ ಇನ್ನೊಂದು ನವ್ಯದಿಂದ ದಲಿತ ಬಂಡಾಯದವರೆಗೆ ಮತ್ತೊಂದು ದಲಿತ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಗುರುತಿಸ ಬಹುದಾಗಿದೆ. ಸಂಚಿಹೊನ್ನಮ್ಮಳ ಸ್ತ್ರೀ ಪರವಾದ ದ್ವಂದ್ವನಿಲುವು ಮೊದಲನೆಯ ಮಹಿಳಾ ಸಾಹಿತ್ಯದಲ್ಲಿ ಪ್ರಯೋಗಶಿಲತೆಯನ್ನು ಕಾಣಬಹುದಾಗಿದೆ. ಮೂರನೆಯ ಮಾದರಿಯ ಮಹಿಳಾ ಸಾಹಿತ್ಯದಲ್ಲಿ ಅಕ್ಕಮಹಾದೇವಿಯ ಸ್ತ್ರೀಪರ ಸಂವೇದನೆಯನ್ನು ಹಾಗೂ ಸಾಮಾಜಿಕ ನಿಲುವನ್ನು ಕಾಣಬಹುದಾಗಿದೆ ಮೊದಲನೆಯ ಮತ್ತು ಮೂರನೆಯ ಹಂತದ ಮಹಿಳಾ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಏಕತನತೆಯಿದ್ದರೆ ಎರಡನೆ ಹಂತದ ಮಹಿಳಾ ಸಾಹಿತ್ಯ ಮುಕ್ತ ಆಲೋಚನೆಯಿಂದ ಕೂಡಿದೆ. ಮೂರನೆ ಹಂತದ ಮಹಿಳಾ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ವೈವಿಧ್ಯತೆಯನ್ನು ಕಾಣಬಹುದಾಗಿದೆ.

ನವೋದಯ ಲೇಖಕರ ಸಾಹಿತ್ಯ ರಚನೆಗೆ ಪಾಶ್ಚಾತ್ಯ ಸಾಹಿತ್ಯ-ಸಂಸ್ಕೃತಿ ಹಾಗೂ ಭಾರತೀಯ ಸಾಮಾಜಿಕ-ರಾಜಕೀಯ ಸ್ಥಿತ್ಯಂತರಗಳು ಪ್ರೇರಣೆಯಾದರೆ ನವೋದಯ ಸಂದರ್ಭದ ಲೇಖಕಿಯರ ಸಾಹಿತ್ಯ ರಚನೆಗೆ ನವೋದಯ ಪೂರ್ವ ಮತ್ತು ನವೋದಯ ಲೇಖಕರ ಸಾಹಿತ್ಯ ದೇಶಿ ಚಳುವಳಿಗಳು ಪಾಶ್ಚಾತ್ಯ ಶಿಕ್ಷಣ ನೀತಿ ಹಾಗೂ ಸ್ವಾತಂತ್ರ್ಯ

ಸಮಾನತೆಯಂತಹ ವಿಚಾರಗಳು ಪ್ರೇರಣೆಯಾಗಿವೆ. ಪ್ರೀತಿ, ಪ್ರೇಮ, ತ್ಯಾಗ, ಸ್ನೇಹ, ಸೌಹಾರ್ದತೆ ಆದರ್ಶದಂತಹ ಪ್ರಕೃತಿ-ದೇವರು ಧರ್ಮ-ಆಧ್ಯಾತ್ಮದ ಕುರಿತು ಒಲವನ್ನು ಮೂಡಿಸುವುದು ಸಾಮಾಜಿಕ ಸುಧಾರಣೆ ರಾಷ್ಟ್ರೀಯ ಪ್ರಜ್ಞೆಯಂತಹ ಕಾಳಜಿಗಳನ್ನು ಅಭಿವ್ಯಕ್ತಿಸುವುದರ ಜೊತೆಗೆ ಸಾಂಪ್ರದಾಯಿಕ ಅನಿಷ್ಟ ಪದ್ಧತಿಗಳನ್ನು ಖಚಿಡಿಸುವುದು ಗಂಡು-ಹೆಣ್ಣಿನ ಸಂಬಂಧದ ಕುರಿತು ಪ್ರಯತ್ನಿಸುವುದು ಸ್ತ್ರೀ ಶಿಕ್ಷಣ ಅಗತ್ಯದ ಅರಿವು ಮೂಡಿಸುವುದು ಮತ್ತು ಸಾಮಾಜಿಕ ಕಾಳಜಿಗಳನ್ನು ಚಿತ್ರಿಸಿರುವುದೇ ನವೋದಯ ಲೇಖಕಿಯರ ವಿಶೇಷತೆ ಅಂದಿನ ಲೇಖಕಿಯರ ಸಾಹಿತ್ಯದ ಒಲವುಗಳು ಸ್ತ್ರೀ ಸಂವೇದನೆಯ ನೆಲೆಗಟ್ಟಿನ ಮೇಲಿ ನಿಂತಿವೆ.

ಭಾರತೀಯ ಸಾಹಿತ್ಯ ತನ್ನ ಸಮಕಾಲಿನ ಸಾಹಿತ್ಯಕ ಸಾಮಾಜಿಕ ಚಳುವಳಿಯ ಸಿದ್ಧಾಂತಗಳಿಗೆ ಬದ್ಧವಾಗಿ, ದೇಶಿಯ ಹಾಗೂ ಅನ್ಯದೇಶಿಯ ಸಾಹಿತ್ಯಕ-ಸಾಮಾಜಿಕ ವಾದಗಳ ಪ್ರೇರಣೆ-ಪ್ರಭಾವಕೊಳಗಾಗಿ ಸಾಹಿತ್ಯ ರಚನೆಗೊಂಡಿದೆ, ಈ ವಿಚಾರ ಹೊಸಗನ್ನಡ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಆದರೆ ಹೊಸಗನ್ನಡ ಮಹಿಳಾ ಸಾಹಿತ್ಯಕ್ಕೆ ಅನ್ವಯಿಸುವುದಿಲ್ಲ ಏಕೆಂದರೆ ಮಹಿಳಾ ಸಾಹಿತ್ಯ ಯಾವುದೇ ಕಾಲದ ಸಾಹಿತ್ಯಕ-ಸಾಮಾಜಿಕ ಚಳುವಳಿಯ ಸಿದ್ಧಾಂತಗಳಿಗೆ ಬದ್ಧವಾಗಿದೆ ಆಯಾ ಕಾಲದ ಸಾಹಿತ್ಯಕ-ಸಾಮಾಜಿಕ ಚಳುವಳಿಯ ತಾತ್ವಿಕ ವಿಚಾರಗಳಿಂದ ಪ್ರಭಾವಿತವಾಗಿದೆ ಬಂಡಾಯದ ಸಂದರ್ಭವನ್ನು ಹೊರತು ಪಡಿಸಿದರೆ ಲೇಖಕಿಯರು ಯಾವುದೇ ಚಳುವಳಿ ಸಂಘಟನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಸಾಹಿತ್ಯ ರಚನೆಗೆ ತೊಡಗದೆ ಚಳುವಳಿಯ ಆಶಯಗಳನ್ನು ಅಭಿವ್ಯಕ್ತಿಸಿದ್ದಾರೆ. ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ.

ನವೋದಯ ಸಂದರ್ಭದ ತಿರುಮಲಾಂಬಾ ಕಲ್ಯಾಣಮ್ಮ, ಗೌರಮ್ಮ, ಶ್ಯಾಮಲಾದೇವಿ, ಜಾನಕಮ್ಮ ಮೊದಲಾದ ಲೇಖಕಿಯರು ತಮ್ಮ ಕೃತಿಗಳಲ್ಲಿ ಸ್ತ್ರೀಯ ಸ್ಥಾನಮಾನಗಳ ಮಾನಾಪಮಾನಗಳ ನೋವು-ನಲಿವುಗಳ ಕುರಿತು : ವಿವಾಹ ಪೂರ್ವ ವಿವಾಹ ನಚಿತರದ ಲೈಂಗಿಕ ಸಂಬಂಧಗಳಿಂದ ಉಂಟಾದ ಸಮಸ್ಯೆಗಳ ಕುರಿತು; ಬಾಲ್ಯವಿವಾಹ ವಿಧವಾವಿವಾಹ, ವರದಕ್ಷಿಣೆಯಂತಹ ಸಮಸ್ಯೆಗಳ ಕುರಿತು ಹಾಗೂ ಸ್ತ್ರೀ ಶಿಕ್ಷಣದ ಅಗತ್ಯದ ಕುರಿತು

ವಿವೇಚಿಸಿರುವ ರೀತಿ ಪ್ರಗತಿಪರವಾಗಿದೆ. ಆದರೆ ಸ್ತ್ರೀಯ ಸ್ಥಾನ-ಮಾನಗಳ ಕುರಿತಂತೆ ಲೇಖಕಿಯರ ಬಲವಾದ ದೃಷ್ಟಿ ಸುಧಾರಣಾ ಮನೋಧರ್ಮದ ಪರಿಧಿಯಾಚೆ ಬೆಳೆಯಲಿಲ್ಲ ಆದರೂ ಶೈಕ್ಷಣಿಕ ಸೌಲಭ್ಯ-ಸಾಮಾಜಿಕ ಸ್ವಾತಂತ್ರ್ಯ ಇಲ್ಲದ ಅಂದಿನ ಸಂದರ್ಭದಲ್ಲಿ ಲೇಖಕಿಯರು ಸ್ತ್ರೀ ಜಗತ್ತಿನ ಸಮಸ್ಯೆಗಳನ್ನು ವಸ್ತು ನಿಷ್ಠವಾಗಿ ಮತ್ತು ಅನುಭಾವಾತ್ಮಕವಾಗಿ ಸರಳವಾಗಿ ಸುಂದರವಾದ ಶೈಲಿಯಲ್ಲಿ ಆತ್ಮೀಯವಾಗಿ ಚಿತ್ರಿಸಿದ್ದು ಆಶಾದಾಯಕವಾಗಿದೆ.

ಪ್ರಗತಿಶೀಲ ಚಳುವಳಿಯ ನಂತರದ ಲೇಖಕಿಯರು ಯಾವುದೇ ಸೈದ್ಧಾಂತಿಕ ಬದ್ಧತೆಗೆ ಒಳಗಾಗದೇ ತಮ್ಮ ಬದುಕಿನ ಅನುಭವಗಳಿಗೆ ಮಾತ್ರ ಬದ್ಧರಾದದ್ದು ಗಮನಿಸಬೇಕಾದ ಸಂಗತಿ ಅನುಪಮಾ ನಿರಂಜನರ ಇತ್ತೀಚಿನ ಕಾದಂಬರಿಗಳ ಸ್ತ್ರೀ ಪಾತ್ರಗಳು ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವಂತೆ ಪ್ರಶ್ನಿಸುವಂತೆ ಹಾಗೂ ಸಮಾನತೆಗಾಗಿ ಹೋರಾಡುವಂತೆ ವಾಣಿ, ಎಂ.ಕೆ.ಇಂದಿರಾ, ತ್ರಿವೇಣಿಯವರ ಕಾದಂಬರಿಗಳ ಸ್ತ್ರೀ ಪಾತ್ರಗಳು ಪ್ರಶ್ನಿಸುವುದಿಲ್ಲ ಪ್ರತಿಭಟಿಸುವುದಿಲ್ಲ ತ್ರಿವೇಣಿಯವರು ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆಗಳನ್ನು ಮನಃ ಶಾಸ್ತ್ರದ ನೆಲೆಯಲ್ಲಿ ಚಿತ್ರಿಸಿದರೆ ಅನುಪಮಾ ಅವರು ಸ್ತ್ರೀ ಕೇಂದ್ರಿತ ಪಾತ್ರಗಳನ್ನು ವೈಚಾರಿಕ ನೆಲೆಯಲ್ಲಿ ಚಿತ್ರಿಸಿದ್ದಾರೆ. ವರ್ಗ ಸಂಘರ್ಷ ಕಾರ್ಮಿಕರ ಸಮಸ್ಯೆ ಹಾಗೂ ಸಂಘಟನೆಯ ಅಗತ್ಯದ ಕುರಿತು ಸೈದ್ಧಾಂತಿಕವಾಗಿ ವಿವೇಚಿಸಿದ್ದಾರೆ. ಸ್ತ್ರೀ ಸ್ವತಂತ್ರತೆ ಆರ್ಥಿಕ ಸಮಾನತೆಗಳಂತಹ ಆಶಯಗಳನ್ನು ತಮ್ಮ ಕಾದಂಬರಿಗಳಲ್ಲಿ ಪ್ರತಿಪಾದಿಸಿದ್ದಾರೆ.

ಎಂ.ಕೆ.ಇಂದಿರಾ ಅವರು ಹೆಣ್ಣು-ಗಂಡಿನ ಸಂಬಂಧಗಳನ್ನು ಹಾಗೂ ಸ್ತ್ರೀ ಸಮಸ್ಯೆಗಳನ್ನು ಮಾನವೀಯ ನೆಲೆಯಲ್ಲಿ ಚರ್ಚಿಸಿದ್ದಾರೆ. ಇವರು ಪುರುಷ ಪ್ರಧಾನ ವ್ಯವಸ್ಥೆಯ ರೀತಿ-ನೀತಿಗಳನ್ನು ಸೈದ್ಧಾಂತಿಕವಾಗಿ ಆಲೋಚಿಸಿದ್ದಾರೆ. ಮಹಿಳಾ ಶೋಷಣೆಯ ಒಳನೋಟಗಳನ್ನು ಕೃತಿಗಳಲ್ಲಿ ಬಿಚ್ಚಿಟ್ಟಿದ್ದಾರೆ.

ನವೋದಯ ಮತ್ತು ಪ್ರಗತಿಶೀಲ ಕಾಲದ ಮಹಿಳಾ ಸಾಹಿತ್ಯ ಗದ್ಯದಿಂದಲೇ ಪ್ರಾರಂಭವಾಗಿದ್ದರೂ ಅಪರೂಪಕ್ಕೆ ಅಲ್ಲಲ್ಲಿ ಪದ್ಯರೂಪದ ಅಭಿವ್ಯಕ್ತಿಯನ್ನು ಕಾಣುತ್ತೇವೆ. ನವೋದಯದ ಜಾನಕಮ್ಮ 'ಚಂಡಾಶಾಸನ' ದಂತಹ ಕವನಗಳನ್ನು ರಚಿಸಿದ್ದಾರೆ.

ಅನುಪಮಾ ನಿರಂಜನ ಅವರು ಎಮಿತಯಮ್ತುಹ ಕವನಗಳನ್ನು ರಚಿಸಿದ್ದಾರೆ. ಈ ಎರಡು ಸಾಹಿತ್ಯಕ ಸಂದರ್ಭದ ಮಹಿಳಾ ನಿರಾಕರಣೆಯ ಸಾಮರಸ್ಯ ಹಂಬಲ, ಜೀವನ ಪ್ರೀತಿ, ಮಾನವೀಯತೆ ಇವರ ಕೃತಿಗಳ ಆಶಯವಾಗಿದೆ.

ನವ್ಯ ಲೇಖಕರಿಗೆ ಕಮೂ,ಕಪ್ಕಾ, ಫ್ರಾಯಿಡರಂತಹ ಚಿಂತಕರ ಹಾಗೂ ಸ್ಹಾರ್ತ್‌ರಂತಹ ತತ್ವ ಜ್ಞಾನಿಗಳ ವಿಚಾರಗಳು ಪ್ರೇರಣೆಯಾದರೆ,ನವ್ಯ ಸಂದರ್ಭದ ಲೇಖಕಿಯರಿಗೆ ನವ್ಯ ಲೇಖಕರ ಆಲೋಚನಾಕ್ರಮ ಪ್ರೇರಣೆಯಾಗಿದೆ, ನವ್ಯ ರಾಜಲಕ್ಷ್ಮಿಯವರು ಸ್ತ್ರೀ ಪಾತ್ರ ಚಿತ್ರಣವನ್ನು ನವ್ಯಲೇಖಕರಿಂದಲೂ ಭಿನ್ನವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ನವ್ಯ ಲೇಖಕರ ಸ್ತ್ರೀ ಪಾತ್ರಗಳು ಸ್ವಚ್ಚಂದ ಪ್ರವೃತಿಯಲ್ಲಿ ಚಿತ್ರತಗೊಂಡರೆ ನವ್ಯ ಲೇಖಕಿಯರ ಸ್ತ್ರೀ ಪಾತ್ರಗಳು ಆಧುನಿಕ ಮನೋಧರ್ಮದ ರೀತಿಯಲ್ಲಿ ಚಿತ್ರತಗೊಂಡಿವೆ. ನವ್ಯಸಂದರ್ಬದ ಲೇಖಕಿಯರು ಚಿತ್ರಸಿದ ಸ್ತ್ರೀ ಪಾತ್ರಗಳು ಮಾನಸಿಕ ದುರ್ಬಲತೆ, ದ್ವಂದ್ವತೆ, ಸಿನಿಕತನ, ಅಂತರ್ಮುಖತೆಗೆ ಬಳಗಾಗದೆ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡು ಸ್ವತಂತ್ರವಾಗಿ ಬದುಕಲು ಇಚ್ಚಿಸುತ್ತವೆ. ನವ್ಯದ ಲೇಖಕ ಲೇಕಕಿಯರಿಗೆ ಸಾಮಾಸಿಕ ಸಮಸ್ಯೆಗಳಿಗಿಂತಲೂ ವೈಯಕ್ತಿಕ ಸಮಸ್ಯೆಗಳೇ ಪ್ರಧಾನವಾಗಿ ಕಾಡಿದವು. ಇದರ ಕೃತಿಗಳಲ್ಲಿ ಮನ:ಶಾಸ್ತ್ರಕ್ಕೆ ಮತ್ತು ಅಸ್ತಿತ್ವವಾದಕ್ಕೆ ಸಂಬಂಧಿಸಿದ ಚಿತ್ರಣವನ್ನು ಕಾಣಬಹುದಾಗಿದೆ. ನವೋದಯ ಸಂದರ್ಬದ ಹಾಗೂ ಪ್ರಗತಿಶೀಲ ಚಳುವಳಿ ನಚಿತರದ ಲೇಖಕಿಯರು ಸ್ತ್ರೀ ಶೋಷಣೆಯನ್ನು ಸಾಮಾಜಿಕ ನೆಲೆಯಲ್ಲಿ ಚಿತ್ರಿಸಿದರೆ ನವ್ಯದ ಲೇಖಕಿಯರು ಲೈಂಗಿಕ ಸಂಬಂಧದ ನೆಲೆಯಲ್ಲಿ ಚಿತ್ರಿಸಿದ್ದಾರೆ. ಸಂಚಿಹೊನ್ನಾಮ್ಮನ ಹದಿಬದೆಯ ಧರ್ಮದ ಮುಂದುವರೆಯುವಿಕೆಯು ನವೋದಯು ಸಂದರ್ಬದ ಹಾಗೂ ಪ್ರಗತಿಶೀಲ ನಚಿತರದ ಮಹಿಳಾ ಸಾಹಿತ್ಯದಲ್ಲಿ ಕಂಡುಬಂದರೆ ಮುಕ್ತ ಬರವಣಿಗೆ ನವ್ಯದ ಲೇಖಕಿಯರ ಸಾಹಿತ್ಯದಲ್ಲಿ ಕಂಡುಬರುತ್ತದೆ. ಸ್ತ್ರೀ ಸ್ವಾತಂತ್ರತೆ ಸಮಾನತೆ ಕಾಳಜಿಯೊಂದಿಗೆ ಪುರುಷ ಪ್ರಧಾನ ವ್ಯವಸ್ಥೆಯ ಕಪಿಯುಷ್ಟಿಯಿಂದ ಬಿಡಿಸಿಕೊಳ್ಳವ ಪ್ರಯತ್ನ ಮಾನಸಿಕ ತೊಳಲಾಟ, ಅಸಹಾಯಕತೆಯ ವಸ್ತುಸ್ಥಿತಿಯನ್ನು ಚಿತ್ರಸುವುದೇ ಲೇಖಕಿಯರ ಸಾಹಿತ್ಯಕ ಬಲವಾಗಿತ್ತು.

ನವೋದಯ ಸಂದರ್ಬದಲ್ಲಿ ಇದ್ದ ಸ್ತ್ರೀಪರ -ಸಾಮಾಜಿಕ ಕಳಜಿ ಪ್ರಗತಿ ಶೀಲದಲ್ಲಿ ಇದ್ದ ಪ್ರಗತಿ ಪರತೆ, ನವ್ಯ ಸಂದರ್ಬದ ಮುಕ್ತಾಲೋಚನಾ ಅಭಿವ್ಯಕ್ತಿ ದಲಿತ ಬಂಡಾಯದ ಮಹಿಳಾ ಸಾಹಿತ್ಯದಲ್ಲಿ ಮೇಳೈಸಿರುವದನ್ನು ಕಾಣಬಹುದಾಗಿದೆ. ಹೀಗೆ ನವೋದಯ ಪ್ರಗತಿ ಶೀಲ ಮತ್ತು ನವ್ಯ ಘಟ್ಟಗಳ ಸಾಹಿತ್ಯದ ಆಶಯಗಳನ್ನು ಮೈಗೂಡಿಸಿಕೊಂಡು ಇಂದಿನ ದಲಿತ ಬಂಡಾಯ ಮಹಿಳಾ ಸಾಹಿತ್ಯ ಬೆಳೆಯುತ್ತಿರುವದು. ಚಾರಿತ್ರಿಕ ದೃಷ್ಟಿಯಿಂದ ತುಂಬ ಮುಖ್ಯವಾಗಿದೆ.

ನವೋದಯ ಪ್ರಗತಿಶೀಲ ನವ್ಯ ಸಂದರ್ಬದ ಮಹಿಳಾ ಸಾಹಿತ್ಯಕ್ಕಿಂತಲೂ ದಲಿತ-ಬಂಡಾಯದ ಮಹಿಳಾ ಸಾಹಿತ್ಯವು ಸಂಖ್ಯೆ ಮತ್ತು ಗುಣದ ದೃಷ್ಟಿಯಿಂದ ಗಮನರ್ಹವಾಗಿದೆ. ಈ ಸಂದರ್ಬದ ಮಹಿಳಾ ಸಾಹಿತ್ಯ ಪುರುಷ ಪ್ರಧಾನ ವ್ಯವಸ್ಥೆಯೊಂದಿಗೆ ರಾಜೀಯಾಗದೇ ಸ್ಥಾಪಿತ ಮೌಲ್ಯಗಳನ್ನು ಸುಧಾರಣ ಪರ ದೃಷ್ಟಿಯಿಂದ ಪರಿಗಣಿಸಿದೆ. ಸಂಪೂರ್ಣ ಬದಲಾವಣೆಯನ್ನು ಬಯಸುತ್ತದೆ. ಸ್ತ್ರೀ ಶೋಷಣೆಗೆ ಕಾರಣವಾದ ವ್ಯವಸ್ಥೆಯನ್ನೆ ಪ್ರತಿಭಟಿಸುವದು ತನ್ನಂತೆ ಶೋಷಣೆಗೋಳಗಾದ ಹಾಗೂ ಶೋಷಣೆಗೆ ಒಳಗಾಗುತ್ತಿರುವ ಕುರಿತು ಆಲೋಚಿಸುವದು ಸಾಂಪ್ರಾದಯಕ ಮೌಲ್ಯಗಳ ಬದಲಾಗಿ ಹೊಸ ಮೌಲ್ಯಗಳ ನಿರ್ಮಾಣಕ್ಕಾಗಿ ಸೈದ್ಧಾಂತಕಿಕವಾಗಿ ಹೋರಾಡುವದು ಸಾಮಾಜಿಕ ರಾಜೀಕಿಯ ಸಾಮಾನತೆ ಭ್ರಷ್ಟತೆಯನ್ನು ಚಿತ್ರಿಸುವದು ಶ್ರೀಮತರ ದ್ಬಾಳಿಕೆ, ಬಡವರ ಗೋಳು, ದಾಂಪತ್ಯ ವಿಫಲತೆ, ಪ್ರೀತಿ, ಪ್ರಣಯ-ವೀರಾಹ, ವರದಕ್ಷಣೆ ಜಾತಿ ಸಮಸ್ಯೆ ದುಡಿಯುವ ವರ್ಗದ ಹಾಗೂ ದಲಿತ ವರ್ಗದ ಶೋಷಣೆ ಜಿನ್ನ ಸಂಸ್ಕೃತಿಯ ಸಂವೇದನೆಗಳು ಈ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವದು. : ರಾಷ್ಟ್ರಿಯ ಅಂತರರಾಷ್ಟ್ರಿಯ ಆಗೂ ಹೋಗುಗಳಿಗೆ ಸ್ಪಂದಿಸುವದೇ ಇಂದಿನ ಮಹಿಳಾ ಸಾಹಿತ್ಯದ ಪ್ರಮುಖ ಆಶಯಗಳು ಆಗಿವೆ.

ದಲಿತ- ಬಂಡಾಯ ಸಾಹಿತ್ಯದ ಮನೋಧರ್ಮವೇ ಇಂದಿನ ಮಹಿಳಾ ಸಾಹಿತ್ಯದ ಮನೋಧರ್ಮವಾಗಿದ್ದರು, ಸ್ತ್ರೀ ವಾದಿನಲೆಯೇ ಪ್ರಧಾನವೇನಿಸುತ್ತದೆ, ದಲಿತ -ಬಂಡಾಯ

ಚಳುವಳಿಯ ಹೊರಗಿದ್ದುಕೊಂಡೆ ಅನೇಕ ಲೇಖಕಿಯರು ಕಥೆ-ಕಾದಂಬರಿ-ಕಾವ್ಯ - ನಾಟಕಗಳನ್ನು ಬರೆಯುತ್ತಿರುವದು ಗಮನರ್ಹವಾಗಿದೆ. ಇವರ ಸಾಹಿತ್ಯ ಸ್ತ್ರೀ ಸಂವೇದನೆಗಳ ಜೋತೆಗೆ ಬದುಕಿನ ಹಲವು ಮಗ್ಗಲುಗಳನ್ನು ಚಿತ್ರಿಸುತ್ತದೆ. ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯನ್ನು ಬಯಸುತ್ತದೆ. ಅಷ್ಟೇ ಅಲ್ಲದೇ ಸ್ತ್ರೀವಾದಿ ದೃಷ್ಟೀಕೋನ ತೀವ್ರವಾಗಿ ಬೆಳೆಯುತ್ತಿರುವದನ್ನು ನಾವು ಕಾಣಬಹುದಾಗಿದೆ.

ಈ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದಾಗ ಸ್ತ್ರೀವಾದಿ ವಿಮರ್ಶೆಯು ಇನ್ನೂ ಗಟ್ಟಿಯಾಗಿ ನೆಲೆಗೊಳ್ಳಬೇಕಾಗಿದೆ. ಸ್ತ್ರೀವಾದಿಗಳ ನಿಜವಾದ ವಿಚಾರಗಳು ಇನ್ನೂ ಸ್ಪಷ್ಟವಾಗಿ ಹೊರಹೊಮ್ಮಬೇಕಾಗಿದೆ.

ಇನ್ನೋದು ಮುಖವನ್ನು ಗಮನಿಸಿದಾಗ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯು ಆಸಕ್ತಿಯ ಕೇಂದ್ರಗಳಲ್ಲಿ ಹೊಸದಾಗಿ ಬೆಳೆಯುತ್ತಿದೆ "ಹೆಣ್ಣಿನ ನೆಲೆಯಿಂದ ಮಾನವ ಬದುಕಿನ ಸಮಕಾಲೀನ ಒಳ-ಹೊರಗುಗಳ ವಿಕ್ಷಿಪ್ತ ಅಂಶಗಳನ್ನು ಎಚ್ಚರಿಕೆಯಿಂದ ಪರೀಕ್ಷೆ ಒಳಪಡಿಸುತ್ತಾ ಬದುಕಿನ ಜೀವಂತಿಕೆಗಾಗಿ ಸಮತೆಯ ಸಾಧ್ಯತೆಗಳಿಗಾಗಿ ಹಂಬಲಿಸುವ" ಸಾಕಷ್ಟು ಕೃತಿಗಳು ಬೆಳಕು ಕಾಣುತ್ತಿವೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸ್ತ್ರೀ ನೆಲೆಯ ಸೈದ್ಧಾಂತಿಕ ತಿಳುವಳಿಕೆ ಇನ್ನೂ ಖಚಿತಗೊಳ್ಳಬೇಕಾಗಿದೆ.

ಇಂದಿನ ಕವಿಯತ್ರಿಯರು ಯಾವ ಸಂಕೋಚವಿಲ್ಲದೆ ನಿರ್ದಾಕ್ಷಿಣ್ಯವಾಗಿ ತಮ್ಮ ಅನುಭವಗಳನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಿಸಿದ್ದಾರೆ. ಹೆಣ್ಣಿನ ಆಳವಾದ ನೋವಿನ ಅನುಭವಗಳನ್ನು ವಸ್ತುನಿಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಪುರಾಣ ವ್ಯಕ್ತಿಗಳಾದ ಅಹಲ್ಯ, ಸೀತೆ, ಸಾವಿತ್ರಿ, ದ್ರೌಪದಿಯ ಕುರಿತು ಇತಿಹಾಸ ವ್ಯಕ್ತಿಗಳ ದೇಶದ ಹೋರಾಟಗಾರರು ಪ್ರತಿಯೊಬ್ಬರ ಕುರಿತು ಬರೆದಿದ್ದಾರೆ. ಇದರಿಂದ ಮಹಿಳಾ ಕಾವ್ಯ ಇನ್ನೂ ಗಟ್ಟಿಗೊಳ್ಳಬೇಕಾಗಿದೆ.

ಒಟ್ಟಿನಲ್ಲಿ ಮಹಿಳಾ ಕಾವ್ಯದಲ್ಲಿ ಭಾವನಿಷ್ಠತೆ, ವ್ಯಕ್ತಿನಿಷ್ಠೆತೆ, ವಸ್ತುನಿಷ್ಠತೆ, ವಸ್ತುನಿಷ್ಠತೆ ಮತ್ತು ಸಮಾಜ ನಿಷ್ಠತೆ ಕಂಡುಬಂದಷ್ಟು ಕಾವ್ಯ ನಿಷ್ಠತೆ ಕಂಡುಬರುವುದಿಲ್ಲ. ಈ ದೃಷ್ಠಿಯಿಂದ ಮಹಿಳಾ ಕಾವ್ಯ ಇನ್ನೂ ಗಟ್ಟಿಗೊಳ್ಳಬೇಕಾಗಿದೆ.

ಇತ್ತೀಚಿನ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ.

ದಲಿತ-ಬಂಡಾಯದ ಸಂದರ್ಭದಲ್ಲಿ ಅನೇಕ ಮಹಿಳೆಯರು ಕವನಗಳನ್ನು ರಚಿಸಿದ್ದಾರೆ. ಇವರಲಿ ಪ್ರಮುಖರಾದ ಆಯಾ ಭಾಗದ ಕವಿಯತ್ರಿಯರ ಕಾವ್ಯವನ್ನು ಅವಲೋಕಿಸಿದಾಗ ಅವರ ಕಾವ್ಯದ ಒಲವುಗಳನ್ನು ಮತ್ತು ಸ್ತ್ರೀ ಸಂವೇದನೆಯನ್ನೂ ಗುರುತಿಸಬಹುದು.

ಹೈದ್ರಾಬಾದ ಕರ್ನಾಟಕದ ಹಿರಿಯ ಕವಿಯತ್ರಿ ಶೈಲಾಜಾ-ಉಡಚಣ ಅವರ ಕಾವ್ಯ ನವೋದಯರ ಭಾವಗಿತಾತ್ಮಕತೆ, ನವ್ಯದ ಸಾಂಕೇತಿಕತೆ, ದಲಿತ-ಬಂಡಾಯದ ಬಂಡಾಯ ಮನೋಧರ್ಮ, ಸ್ತ್ರೀ ಸಂವೇದನೆಯ ಸೂಕ್ಷ್ಮತೆ ಹಾಗೂ ಸಾಮಾಜಿಕ ಕಾಳಜಿಯನ್ನು ಒಳಗೊಂಡಿದೆ. ಬದುಕಿನ ಸಂಕೀರ್ಣತೆಯನ್ನು ಗ್ರಹಿಸುವ ಭಾವ ಇವರ ವಚನಗಳಲ್ಲಿ ಕಾಣಬಹುದು.

ರಾಯಚೂರಿನ ಎಚ್.ಎಸ್.ಮುಕ್ತಾಯಕ್ಕ ಗಂಡು-ಹೆಣ್ಣಿನ ಲೈಂಗಿಕ ಸಂಬಂಧಗಳ ಕುರಿತಂತೆ, ಪ್ರೀತಿ-ಪ್ರೇಮ-ಪ್ರಣಯ-ವಿಹರಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಮಡಿವಂತಿಕೆಯನ್ನು ಮೀರಿ ಮುಕ್ತನಾದ ದಿಟ್ಟತನದಿಂದ ಅಭಿವ್ಯಕ್ತಿಸಿದ ರೀತಿ ವಿಶಿಷ್ಟವಾಗಿದೆ. ಇವರ ಕಾವ್ಯ ಮಾದರಿಯ ಗಜಲ್ ರೂಪಗಳು ಗಮನಾರ್ಹವಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯ ಅಸಮಾನತೆಯ ನಿಲುವನ್ನು ಪ್ರಶ್ನಿಸುವ ಇವರ ಕಾವ್ಯ ಸ್ತ್ರೀವಾದದ ಆಶಯದಿಂದ ಕೂಡಿದೆ.

ಬಿ.ಟಿ.ಲಲಿತಾ ನಾಯಕರ ಕಾವ್ಯದ ಪ್ರಧಾನ ಕಾಳಜಿ ಬಂಡಾಯದ ಮನೋಧರ್ಮವಾಗಿದೆ. ವ್ಯವಸ್ಥೆಯನ್ನು ವಿರೋಧಿಸುತ್ತಲೇ ಶೋಷಿತರ ಮನಸ್ಸನ್ನು

ಬಡಿದೆಬ್ಬಿಸುವ ಕಾವಿನೊಂದಿಗೆ ಮಾನವೀಯತೆಯನ್ನು ಮಿಡಿಯುವ, ಸ್ತ್ರೀ ಸಮಾನತೆಯನ್ನು ಬಯಸುವ ಇವರ ಕಾವ್ಯ ಸಾಮಾಜಿಕ ಕಾಳಜಿಯಿಂದ ಕೂಡಿದೆ.

ಬದುಕಿನ ನೋವು-ನಲಿವುಗಳನ್ನು ವಸ್ತುನಿಷ್ಟವಾಗಿ ಅಭಿವ್ಯಕ್ತಸುವ ಕವಿಯತ್ರಿ ಬೀದರಿನ ಪ್ರಮೀಳಾ ಸಿರ್ಸೆ, ಬದುಕು ಒಂದು ಮಹಾಭಾರತವೆಂದು ಪರಿಗಣಿಸಿದ ಇವರ ಕಾವ್ಯ ವಸ್ತು ನಿಷ್ಠವಾಗಿದೆ.

ಸರಸ್ವತಿ ಚಿಮ್ಮಲಗಿಯವರ ಕಾವ್ಯದಲ್ಲಿ ಶೋಷಕರ ದಬ್ಬಾಳಿಕೆ, ಅನ್ಯಾಯವನ್ನು ಪ್ರತಿಭಟಿಸುವ ಮನೋಭಾವವಿದೆ. ಆರೋಗ್ಯಕರ ಸಮಾಜದ ರಚನೆಗೆ ಕರೆಕೊಡುವ ಇವರ ಹೆಚ್ಚಿನ ಕವನಗಳು ಶ್ಲೇಷಾರ್ಥ, ಧ್ವನ್ಯಾರ್ಥಕ್ಕಿಂತಲೂ ವಾಚ್ಯಾರ್ಥದ ಕಡೆಗೆ ವಾಲಿರುವುದನ್ನು ಕಾಣಬಹುದಗಿದೆ. ಸಾಮಾಜಿಕ ಭ್ರಷ್ಟತೆಯನ್ನು ಮೊನಚಾದ ನುಡಿಗಳಿಂದ ಅಲ್ಲಗಳೆಯುವ ರೀತಿ ಮನಮುಟ್ಟುವಂತಿದೆ. ಸಾಮಾಜಿಕ ವಿಡಂಬನೆ ಇವರ ವಚನಗಳಲ್ಲಿ ಕಾಣಬಹುದು.ಚಂಪಾ ಅವರ ಪ್ರಕಾರ " 1979 ರಲ್ಲಿ 'ಜ್ವಲಂತ' ಕವನ ಸಂಕಲನ ಹೊರತಂದ ಡಾ.ವಿಜಯಶ್ರೀ ಸರಬದ ಅವರು ಜ್ವಲಂತವಾಗಿಯೇ ಬೆಳೆಯುತ್ತಾ ಒಂದು ದಶಕದ ನಂತರ 'ಲಕ್ಷಣರೇಖೆ ದಾಟಿದವರು' ಸಂಕಲನ ಹೊರತಂದಿದ್ದಾರೆ. ವಾಸ್ತವದ ಕ್ರೌರ್ಯವನ್ನು ಬಿಡುಗಣ್ಣಿನಿಂದ ದಾಖಲಿಸುತ್ತಲೇ ಅದರ ವಿರುದ್ಧ ಬಂಡೇಳುವ ಈ ಕಾವ್ಯ ಕೇವಲ ಬಹಿರಂಗದ ಸಾಮಾಜಿಕ ನೆಲೆಯಲ್ಲಿ ಕೆಲಸ ಮಾಡದ ತೀರ ಆತ್ಮೀಯವಾದ ವೈಯಕ್ತಿಕ ಸಂಬಂಧಗಳಲ್ಲಿಯೂ ಸೂಕ್ಷ್ಮವಾದ ದಟ್ಟವಾದ ವಿಷಾದದ ಎಳೆಗಳನ್ನು ಚಿತ್ರಿಸುತ್ತದೆ.

" (ಜ್ವಲಂತ ಕವನ ಸಂಕಲನದ ಬೆನ್ನುಡಿಯಿಂದ) ಕೆ.ನೀಲಾ ಅವರ ಕಾವ್ಯ ಸಮಾಜವಾದದ ಹಿನ್ನಲೆಯಲ್ಲಿ ಸ್ತ್ರೀ ಕೇಂದ್ರಿತ ಅನುಭವಗಳನ್ನು ಕಟ್ಟಿಕೊಡುತ್ತದೆ.

ಮುಂಬಯಿ ಕರ್ನಾಟಕದ ಕವಯತ್ರಿಯರಲ್ಲಿ ಪ್ರಮುಖರಾದ ಮಾಲತಿ ಪಟ್ಟಣ ಶೆಟ್ಟಿ, ಸುಕನ್ಯ ಮಾರುತಿ, ಕಮಾಲಾಹೆಮ್ಮಿಗೆ, ಹೇಮಾ ಪಟ್ಟಣಶೆಟ್ಟಿ, ಆಶಾಕಡಪಟ್ಟಿ ಈ ಮೊದಲಾದ

ಕವಯಿತ್ರಿಯರ ಕಾವ್ಯದಲ್ಲಿ ಸ್ತ್ರೀ ಸಂವೇದನೆಗಳ ತೀವ್ರತೆಯನ್ನು ಕಾಣಬಹುದಾಗಿದೆ, ಮಾಲತಿ ಪಟ್ಟಣ ಶೆಟ್ಟಿಯವರ ಕಾವ್ಯ ಅನುಭವದ ಪಾಲತಿಯಿಂದ ಪುಟಿದೆದ್ದು ತನ್ನ ಎಲ್ಲಾ ಲಕ್ಷಣಗಳಿಂದ ಪಕ್ವಗೊಂಡು ಸ್ಪಂದಿಸಿದೆ.

ದಕ್ಷಿಣಿ ಕರ್ನಾಟಕದ ಚ. ಸರ್ವಮಂಗಳಾ, ಪ್ರತಿಭಾ ನಂದಕುಮಾರ, ಎಂ.ಆರ್.ಕಮಲಾ,ಬಾ.ಹ ರಮಾಕುಮಾರಿ, ವಿಜಯಾ ಸುಬ್ಬರಾಜ್, ಶಶಿಕಲಾ, ವೀರಯ್ಯಾಸ್ವಾಮಿ, ಎಚ್.ಎಲ್.ಪುಷ್ಪ, ಸ.ಉಷಾ, ಸವಿತಾ, ನಾಗಭೂಷಣ, ಲತಾರಾಜಶೇಖರ, ಪದ್ಮಾಶೇಖರ, ಗುಡಿಬಂಡೆಪೂರ್ಣಿಮಾ, ಉತ್ತನೂರು ರಾಜಲಕ್ಷ್ಮಿ ಈ ಮೊದಲಾದ ಕವಯಿತ್ರಿಯರ ಕಾವ್ಯ ಗಮನಾರ್ಹವಾಗಿದೆ. ಇವರೆಲ್ಲರ ಕಾವ್ಯ ರಚನಾ ವಿಶಿಷ್ಟತೆಯಿಂದ ಹಾಗೂ ವಸ್ತು ಭಾವ ನಿಷ್ಟತೆಯಿಂದ ಕಾವ್ಯ ಕ್ಷೇತ್ರದಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡಿದೆ.

ಕಪ್ಪು ನಾಡಿನ ಕವಿತೆಗಳ ಅನುವಾದದ ಮೂಲಕ ವಿಮರ್ಶಕರ ಗಮನ ಸೆಳೆದ ಎಂ.ಆರ.ಕಮಲ ಅವರ ಕಾವ್ಯ ಶಕ್ತಿ ಅದ್ಭುತವಾಗಿದೆ. ಪುರುಷರಿಂದ ಕಡೆಗಣಿಸಿದ ಮಹಿಳೆಯ ಬದುಕಿನ ದುರಂತವನ್ನು ಪ್ರತಿಮೆ, ದೃಷ್ಟಾಂತಗಳಿಂದ ತಿಳಿಸುವ ವೈದೇಹಿಯವರು ಮಧ್ಯಮ ವರ್ಗದ ಸಾಮಾಜಿಕ ಬದುಕಿನ ಅನುಭವಗಳನ್ನು ನವ್ಯ ಮಾದರಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಸವಿತಾ ನಾಗಭೂಷಣ ಅವರು ತಮ್ಮ ಅನುಭವವನ್ನೇ ಕಾವ್ಯವನ್ನಾಗಿಸುವ ಇವರ ಅಭಿವ್ಯಕ್ತಿ ರೀತಿ ವಿಶಿಷ್ಟವಾಗಿದೆ. ಎಚ್.ಎಲ್.ಪುಷ್ಪ ಅವರು ತಮ್ಮ ಅನುಭವವನ್ನು ಸ್ವಗತ ಶೈಲಿಯಲ್ಲಿ ಹೇಳುವುದರಿಂದ ಉಳಿದ ಕವಿಯತ್ರಿಯಾಗಿಂತಲೂ ಭಿನ್ನವಾಗಿ ನಿಲ್ಲುತ್ತಾರೆ. ಚ.ಸವ೯ಮಂಗಳಾ ತಮ್ಮ ಸಮಕಾಲೀನ ಕವಿಯತ್ರಿಯರಲ್ಲೇ ಗಮನ ಸೆಳೆಯುವ ಕವನಗಳನ್ನು ರಚಿಸಿ ವಿಮಶ೯ಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ತನ್ನ ತಾಯಿ, ಅಜ್ಜಿಯ ಪರಂಪರಾಗತ ಸ್ಥಾಪಿತ ಮೌಲ್ಯಗಳಿಗೆ ಜೋತು ಬೀಳದೆ ಹೊಸ ಮೌಲ್ಯಗಳ ಹುಡುಕಾಟದ ಸ್ತ್ರೀ ಸಂವೇದನೆಗಳನ್ನು ಸ.ಉಷಾ ಅವರ ಕಾವ್ಯದಲ್ಲಿ ಕಾಣಬಹುದಾಗಿದೆ. ಸ್ತ್ರೀಯ ಸ್ಥಾನ-ಮಾನಗಳಲ್ಲಿ ಬದಲಾವಣೆಯನ್ನು ಬಯಸುವ ವಿಜಯಾದಬ್ಬೆಯವರ ಕಾವ್ಯ ಮನೋಧರ್ಮ-ಗಮನಾರ್ಹವಾಗಿದೆ. ಶಶಿಕಲಾ ವೀರಯ್ಯಸ್ವಾಮಿ ಅವರು ತಮ್ಮ ಕಾವ್ಯದಲ್ಲಿ ಸಮಾಜ ಹೆಣ್ಣನ್ನು ಪರಿಗಣಿಸಿದ ರೀತಿಯನ್ನು ಮುಚ್ಚು ಮರೆಯಿಲ್ಲದೆ ಸಹಜವಾದ ಮಾತಿನಲ್ಲಿ ಹೇಳಿದ್ದಾರೆ. ಪ್ರೀತಿ-ಸ್ನೇಹದಂತಹ ಮಾನವೀಯ ಮೌಲ್ಯಗಳ ಪ್ರತಿಪಾದನೆ ಲತಾರಾಜಶೇಖರ್ ಅವರ

ಕಾವ್ಯದಲ್ಲಿ ಕಾಣಬಹುದಾಗಿದೆ. ನವಿರಾದ ಪ್ರೇಮ ಭಾವನೆಗಳನ್ನು ತುಂಬಾ ಆತ್ಮೀಯವಾಗಿ. ಕಾವ್ಯಾತ್ಮಕವಾಗಿ ಅಭಿವ್ಯಕ್ತಿಸಿದ್ದಾರೆ.

ಹೀಗೆ ದಲಿತ ಬಂಡಾಯ ಸಂದರ್ಭದ ಕವಯತ್ರಿಯರು ಯಾವ ಸಂಕೋಚವಿಲ್ಲದೆ ನಿರ್ದಾಕ್ಷಿಣ್ಯವಾಗಿ ತಮ್ಮ ಅನುಭವಗಳನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಿಸಿದ್ದಾರೆ. ಹೆಣ್ಣಿನ ಆಳವಾದ ನೋವಿನ ಅನುಭವಗಳನ್ನು ವಸ್ತು ನಿಷ್ಠವಾಗಿ ವ್ಯಕ್ತಪಡಿಸಿದ್ದಾರೆ. ಕೆಲವೊಮ್ಮೆ ತಮ್ಮ ಅನುಭವಕ್ಕೆ ಮೀರಿದ ಸಂಗತಿಗಳನ್ನು ತಿಳಿಸಲು ಪ್ರಯತ್ನಿಸಿದ್ದಾರೆ. ಪುರಾಣ ವ್ಯಕ್ತಿಗಳಾದ ಅಹಲ್ಯ, ಸೀತೆ, ಸಾವಿತ್ರಿ, ದ್ರೌಪದಿಯ ಕುರಿತು. ಇತಿಹಾಸ ವ್ಯಕ್ತಿಗಳಾದ ಅಕ್ಕಮಹಾದೇವಿ ದಕ್ಷಿಣಾ ಆಫ್ರಿಕಾದ ವಿನ್ನಯ ಕುರಿತು ದೇಶದ ಹೋರಾಟಗಾರಾದ ಗಾಂಧೀ, ಅಂಬೇಡ್ಕರ, ಮಂಡೇಲಾ ಅವರ ಕುರಿತು ಅನೇಕ ಕವಿಯತ್ರಿಯರು ಕವಿತೆಯನ್ನು ಬರೆದಿದ್ದಾರೆ. ಇದರಿಂದ ಕವಯತ್ರಿಯರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ವ್ಯಕ್ತವಾಗುವುದು. ಒಟ್ಟಿನಲ್ಲಿ ಮಹಿಳಾ ಕಾವ್ಯದಲ್ಲಿ ಭಾವನಿಷ್ಠತೆ, ವ್ಯಕ್ತಿನಿಷ್ಠೆತೆ, ವಸ್ತು ನಿಷ್ಠತೆ ಮತ್ತು ಸಮಾಜ ನಿಷ್ಠತೆ ಕಂಡು ಬಂದಷ್ಟು ಕಾವ್ಯನಿಷ್ಠತೆ ಕಂಡುಬರುವದಿಲ್ಲಾ. ಈ ದೃಷ್ಟಿಯಿಂದ ಮಹಿಳಾಕಾವ್ಯ ಇನ್ನೂ ಗಟ್ಟಿಗೊಳ್ಳಬೇಕಾಗಿದೆ.

ನಾಟಕ ಕ್ಷೇತ್ರದಲ್ಲಿ ಒಬ್ಬಿಬ್ಬರು ಲೇಖಕಿಯರನ್ನು ಮಾತ್ರ ಕಾಣಬಹುದಾಗಿದೆ. ವಿಜಯ ಅವರು ನಾಟಕಕಾರರಾಗಿ ಗುರುತಿಸಲ್ಪಟ್ಟಿದ್ದಾರೆ. ವಿಜಯಾದಬ್ಬೆ ಸಮಿತ್ರಾಬಾಯಿ ಅವರು ವಿಮರ್ಶಿಕಿಯರೆಂದು ಗುರುತಿಸಲ್ಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ಮಹಿಳಾ ಸಾಹಿತ್ಯ ಇನ್ನೂ ಮುಂದುವರಿಯಬೇಕಾಗಿದೆ. ಕಮಲಾ, ಹಂಪನಾ, ಎನ್. ಗಾಯತ್ರಿ, ಚೆನ್ನಕ್ಕ ಪಾವಟೆ, ಶಾಲಿನಿ ರಘುನಾಥ, ಹನುಮಾಕ್ಷಿ ಗೋಗಿ, ಗಂಗಮ್ಮ ಸತ್ಯಂಪೇಟೆ, ಎಚ್.ಎಸ್. ಸುಜಾತ- ಮೊದಲಾದ ಲೇಖಕಿಯರು ವಿಮರ್ಶಾ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಆದರೂ ಇನ್ನಷ್ಟು ಭರವಸೆಯನ್ನು ಮೂಡಿಸುವಂತಹ ಕೃತಿಗಳು ಬರಬೇಕಾಗಿದೆ. ೮೦-೯೦ ರ ದಶಕಗಳು ಲೇಖಕಿಯರ ಬೆಳವಣಿಗೆಯ ದೃಷ್ಟಿಯಿಂದ ಗಮನಿಸುವಂತಹದಾಗಿದೆ.

ಅಧ್ಯಾಯ–೩

ಚಿತ್ತಾಲರ ಕತೆಗಳಲ್ಲಿ ಸ್ತ್ರೀಸಂವೇದನೆಯ ನೆಲೆಗಳು

ಕತೆಗಳ ವೈಶಿಷ್ಟ್ಯತೆಯನ್ನೂ ಅರ್ಥವನ್ನೂ ಹಳ್ಳಿಯ ಸಂಪ್ರದಾಯದ ಪ್ರೀತಿಯನ್ನೂ ಮುಂಬಯಿ ನೆಲವನ್ನೂ ಒಟ್ಟಿಗೇ ಮೂಡಿಸಿ ಆಸಕ್ತಿ ಮೂಡುವಂತೆ ಮಾಡುವಲ್ಲಿ ಚಿತ್ತಾಲರು ಸಿದ್ಧಹಸ್ತರು ಅವರ ಕತೆಗಳಲ್ಲಿ ಕಂಡು ಬರುವಂತಹ ಸ್ತ್ರೀ ಸಂವೇದನೆಯ ನೆಲೆಗಳನ್ನು ಅಧ್ಯಯನಮಾಡುವುದು ಈಗಿನ ಉದ್ದೇಶವಾಗಿದೆ.

ಸ್ತ್ರೀ ಸಂವೇದನೆಯ ನೆಲೆಗಳ ಕುರಿತು ಅಧ್ಯಯನ ಮಾಡುವ ಮುನ್ನ ಕೆಲವೊಂದು ಅಂಶಗಳನ್ನು ಗಮನವಿಟ್ಟು ಅರಿತುಕೊಳ್ಳಬೇಕಾದುದು ಅತ್ಯಂತ ಅವಶ್ಯಕವಾಗಿದೆ.

ಸಂವೇದನೆಯ ಮೂಲಸ್ವರೂಪವನ್ನು ಅರಿತುಕೊಂಡಂತೆ ಅದಕ್ಕೆ ಸರಿಯಾದ ರೀತಿಯಲ್ಲಿ ವಿಭಾಗಿಸಿ ಅಧ್ಯಯನ ಮಾಡುವುದರಿಂದ ಸಂವೇದನೆಯ ಸ್ಪಷ್ಟರೂಪ ಸಿಕ್ಕುತ್ತದೆ. ಆ ಭಾಗಗಳು ಈ ಕೆಳಗಿನಂತಿವೆ.

1) ಶೋಷಣೆ
2) ಮದುವೆ ಕುರಿತ ಸಮಸ್ಯೆಗಳು
3) ಅಸಹಾಯಕತೆ
4) ದುರಂತಗಳು
5) ಕತೆಗಳಲ್ಲಿ ಕಂಡೂ ಕಾಣದಂತಿರುವ ಸ್ತ್ರೀ ಪಾತ್ರಗಳು
6) ಸ್ತ್ರೀ ಸಮಸ್ಯೆಗಳ ಕಾರಣಗಳು ಮತ್ತು ಸ್ವರೂಪ

ಇವೆಲ್ಲವುಗಳನ್ನು ಕುರಿತು ಚಿತ್ತಾಲರು ಕತೆಗಳಲ್ಲಿ ಅಧ್ಯಯನ ಮಾಡುದಾಗಿದೆ. ಅರ್ಥಕ್ಕಿಂತಲೂ ಹೆಚ್ಚು ಕತೆಗಳು ಸ್ತ್ರೀಸಂವೇದನೆಯನ್ನು ಕುರಿತಾಗಿದ್ದು ಅದರಲ್ಲಿ ಸ್ತ್ರೀ ಸಂವೇದನೆಯು ಬೇರೆ ಬೇರೆ ನೆಲೆಗಳ ಕುರಿತು ಅಧ್ಯಯನ ಮಾಡವುದಾಗಿದೆ.

ಇಂದಿನ ಸ್ತ್ರೀ ಸಮಸ್ಯೆಯ ಕಾರಣಗಳು ಮತ್ತು ಸ್ವರೂಪ ಮುಖ್ಯವಾದ ವಿಷಯವಾಗಿದೆ ಬದುಕು ಬದಲಾಗುತ್ತಾ ಹೋದಂತೆ ಅದರಲ್ಲಿ ಮುಖ್ಯವಾದ ವಿಷಯಗಳನ್ನು ನಾವು ಅರಸುತ್ತಾ

ಸಾಗುತ್ತೇವೆ. ಹಿಂದೆ ನಡೆದ ಜೀವನದ ಅನುಭವಗಳಿಗಿಂತ ಈಗ ನಡೆವ ಮುಂದೆ ನಡೆಯಲಿರುವ ಜೀವನದ ಗತಿ-ಅನುಭವಗಳು ಅತ್ಯಂತ ಮುಖ್ಯವಾಗಿವೆ.

1) ಶೋಷಣೆ:-

ಶೋಷಣೆ ಎನ್ನುವುದು ಒಂದೇ ತೆರನಾದ ದೃಷ್ಟಿಯನ್ನು ಇಟ್ಟುಕೊಂಡು ಹೇಳುವ ಪದವಲ್ಲ ನೋಡಲು ಕಿರಿದೆನಿಸಿದರೂ ವಿಶಾಲಾರ್ಥ ಹೊಂದಿದೆ ನಾವು ಇನ್ನೊಬ್ಬರ ಮೇಲೆ ಮಾನಸಿಕವಾಗಿ ದೈಹಿಕವಾಗಿ ಒತ್ತಡ ಹೇರುವುದು ನಾವು ಹೇಳಿದಂತೆ ಅವರು ಕೇಳುವಂತೆ ಮಾಡುವುದಾಗಿದೆ. ಇಲ್ಲಿ ಶೋಷಿತರು ಅಸಹಾಯಕರಾಗಿರುತ್ತಾರೆ. ಅವರಿಗೆ ಅನಿವಾರ್ಯತೆ ಈ ದಾರಿಯಲ್ಲಿ ತಳ್ಳುತ್ತದೆ.

ಶೋಷಿಸುವರು ಶೋಷಣೆಗೆ ಒಳಗಾದವರ ಅಸಹಾಯಕತೆಯನ್ನು ತಿಳಿದಿರುತ್ತಾರೆ ಸಮಾಜದಲ್ಲಿ ಶ್ರಮ ವಿಭಜನೆಯ ಆಧಾರದಲ್ಲಿ ಹುಟ್ಟಿದ ಶ್ರೇಣಿಕರ ಜಾತಿ ಭಯಂಕರ ರೂಪ ತಾಳಿ ಮೇಲ್ಜಾತಿ-ಕೆಳಜಾತಿ ಎಂದು ಹೇಳುವಂತೆ ಮಾಡಿದೆ. ಅಂದಿನ ಕೆಳಜಾತಿ ಜನ ಅಲ್ಲದೆ ಬಡವರು ತಿಳಿಯದೆ ಇರುವಂತಹ ಧರ್ಮವನ್ನು ಒತ್ತಾಯದಿಂದ ಹೇರಿ ಅವರು ಅದರಿಂದ ಎಂದೂ ತಪ್ಪಿಸಿಕೊಳ್ಳದಂತೆ ಮಾಡಿದೆ. ಅಲ್ಲದೆ ತಮ್ಮನ್ನು ತಾವು ದೇವರಾಗಿಸಿಕೊಂಡು ಕ್ರೂರ ಬದುಕನ್ನು ಸಹಜವಾಗಿಯೇ ಒಪ್ಪಿಕೊಳ್ಳವಂತೆ ಮಾಡಿದೆ ದಿನಗಳೆದಂತೆ ಶೋಷಣೆಗೆ ಒಳಗಾದವರು ಸಹ ಇದನ್ನು ಮನಃ ಪೂರ್ವಕವಾಗಿ ಒಪ್ಪಿಕೊಂಡಿರುತ್ತಾರೆ. ಇಲ್ಲವೇ ಇಲ್ಲಿ ವಿರೋಧಿಸುವದನ್ನೇ ಮರೆಯುತ್ತಾರೆ. ಸಾಮಾಜಿಕ ಮೌಲ್ಯಗಳನ್ನು ಕುರಿತು ಯಾವ ಪ್ರಶ್ನೆಯನ್ನೂ ಹಾಕದೇ ಒಪ್ಪಿಕೊಳ್ಳುತ್ತಾರೆ.

ಶೋಷಣೆಯ ಒಳಗಾದವರ ಮನಃ ಸ್ಥಿತಿ ಬಗ್ಗೆ ಹೇಳುವದಾದರೆ ಅವರಿಗೆ ತಾವು ಶೋಷಣೆಗೆ ಒಳಗಾಗುತ್ತಿರುವ ಕಲ್ಪನೆಯಿಲ್ಲ ತಾವು ಅದಕ್ಕಾಗಿಯೇ ಹುಟ್ಟಿ ಬಂದೆವೆಂದು ತಿಳಿಯುತ್ತಾರೆ.

ಇಲ್ಲಿ ಬರುವಂತ ಶೋಷಣೆಗೆ ಒಳಗಾದವರು ಯಾರೇ ಆಗಿರಬಹುದು ಸ್ತ್ರೀ-ಪುರುಷ ಶೋಷಸುತ್ತಿರುವವರೂ ಸಹ ಇಲ್ಲಿ ಬರುವ ಸ್ತ್ರೀಯಲ್ಲಿಯೇ ಮೇಲ್ವರ್ಗದ, ಮೇಲ್ಜಾತಿಯ ಸ್ತ್ರೀ ಎಂದಾದರೆ ಪುರುಷ ವರ್ಗದಲ್ಲಿಯೂ ಈ ವಿಭಾಗಗಳಿವೆ ಗಂಡಸರ ಖುಷಿಗೆ, ಬದುಕಿನ ಅನ್ನಕ್ಕೆ ನೂರು ನೋವುಗಳನ್ನು ತಡೆದುಕೊಂಡು ತನಗೆ ಇರುವ ಕೆಟ್ಟ ರೀತಿಯ ಬದುಕನ್ನೇ ಬದುಕತ್ತಲಿರುವ 'ಉತ್ತಮಿ' ಯೂ ಸಹ ಶೋಷಿತಳೇ.

ಉತ್ತಮವಾದ ರೀತಿಯಲ್ಲಿ ಬದುಕಬೇಕೆಂದುಕೊಂಡರೂ ಅನಿವಾರ್ಯತೆಯಿಂದಾಗಿ ವೇಶ್ಯೆಯಾಗಿ ಬದುಕುತ್ತಿದ್ದಾಳೆ. ನೋವು ಅವಳಲ್ಲಿ ತುಂಬಿ ಅರಿವಿದ್ದರೂ ಸಹ ಅವುಗಳಿಗೆ ವಿರುದ್ಧ ನಡೆಯಲಿಚ್ಛಿಸಿದೆ ಮೌನವಾಗಿ ತಲೆಬಾಗಿದ್ದಾಳೆ ವೇಶ್ಯಯರ ಬದುಕಿಗೆ ಯಾವುದೇ ಅಥಿವು ಇಲ್ಲವೆಂದು ಕೇವಲ ತಮ್ಮಿಂದ ಸುಖವನ್ನು ಬಯಸಿ ತಮ್ಮನ್ನೇ ಕೀಳಾಗಿ ನೋಡುವ ಜನಾಂಗದ ವಿರುದ್ಧ ಯಾವುದೇ ದ್ವೇಷ ಅಸೂಯೆ ಇರದೇ ಅದನ್ನು ಮೌನವಾಗಿ ಒಪ್ಪಿಕೊಂಡಿದ್ದಾಳೆ.

ಉತ್ತುಮಿ ತನ್ನನ್ನು ತಿಳಿಯದೆ ರೇಗಿಸಲು, ದಿನವೂ ರೇಗಿಸುವ ಹುಡುಗರ ಜೊತೆಗೆ ಬಂದಂತಹ ಬಾಲಕನಿಗೆ ಬುದ್ಧಿ ಹೇಳುತ್ತಾ.

“ನೋಡು ನೀನು ಚೆಂದದ ಹುಡುಗ ಎಂತಹ ಜಾಣ ನೀನು ಎಂತಹ ಒಳ್ಳೆಯವರ ಮಗ ಎಂದು ಗೊತ್ತಿದೆಯೇ? ನಿಮ್ಮ ಅಪ್ಪ, ಅಜ್ಜ ಎಲ್ಲರೂ ದೇವರಂತಹ ವಂದಿ ನೀನು ಅವರಂತೆಯೇ ಆಗಬೇಕು ನಾವು ಕೀಳು ಜನ ಕೆಟ್ಟ ಜನ ನಮ್ಮಂತವರ ಮನೆಯ ಬಾಗಿಲಲ್ಲಿ ನೀನು ಕಾಲಿಡಕೂಡದು ತಿಳಿಯಿತೇ? ಆ ಬಸ್ತ್ಯಾಂವ ಅಂತೋನಿ ಇವರು ಕೆಟ್ಟ ಹುಡುಗರು ಅವರ ಜೊತೆ ಜಿದ್ದು ಹಾಳಾಗಬೇಡ ಇನ್ನೆಂದಿಗೂ ನಮ್ಮ ದಣಪೆಯ ನ್ಮಂದೆ ಹಾಯಬೇಡ ತಿಳಿಯಿತೆ?“

ಎಂದು ಏನೂ ಅರಿಯದ ಚಿಕ್ಕ ಬಾಲಕನ ಮುಂದೆ ಬರಿಯೇ ಅವಳ ಒಳಿತನ್ನು ಬಯಸಿ ತಾವು ಕೀಳು ಜನ ತಾನು ಕೆಟ್ಟವಳು ತನ್ನ ದಣಪೆಯಲ್ಲಿ ಅವನು ಕಾಲು

ಇಡಕೂಡದು ಎಂದು ತನ್ನನ್ನು ತಾನೇ ಹಳಿದುಕೊಂಡು ಆ ಬಡ ವೇಶ್ಯೆಯಲ್ಲೂ ತಾಯಿಯ ಹೃದಯವಿತ್ತು.
ಸಮಾಜ ತನಗೆ ಚೆನ್ನಾಗಿ ಬದುಕಲು ಅವಕಾಶ ಕೊಡದಿದ್ದರೂ ತಾನೂ ಮಾತ್ರ ಮಗುವಿಗೆ ಒಳ್ಳೆತನ್ನೇ ಬಯಸಿದಳು ಅವಳನ್ನು ಶೋಷಿದ ಸಮಾಜದ ವಿರುದ್ಧ ಅವಳಿಗೆ ಯಾವುದೇ ದ್ವೇಷವಿರಲಿಲ್ಲ ಅದನ್ನು ಮರು ಮಾತಿಲ್ಲದೆ ಒಪ್ಪಿಕೊಂಡಿದ್ದಳು. ಅದರಂತೆಯೇ ತನ್ನ ಬದುಕು ಎಂದೂ ಸಹ ನಿಶ್ಚಯಿಸಿದ್ದಳು.

ಬೊಮ್ಮಿ, ಉತ್ತಮಿ ಇವರೆಲ್ಲರೂ ಸಮಾಜವನ್ನು ದ್ವೇಷಿಸದೇ ತಮ್ಮ ಶೋಷಣೆಗೆ ಪ್ರತಿರೋಧವನ್ನೂ ನೀಡದೇ ಇದೇ ರೀತಿಯಾಗಿ ಬದುಕುತ್ತಾ ಬಂದರು ಹಾಗೆಯೇ ಮುಂದೆಯೂ ಸಾಗುವವರು. ಇವರೆಲ್ಲರಲ್ಲೂ ನಡೆದಿರುವ ಸಂಘರ್ಷ ಸಾಮಾಜಿಕ ದೃಷ್ಟಿಯಿಂದ ಸಾಂಕೇತಿಕ ಮಹತ್ವ ಬರುವುದಿಲ್ಲ ಯಾಕೆಂದರೆ ಚಿತ್ತಾಲರ ಈ ಸಮಾಜದ ವ್ಯಕ್ತಿಗಳಲ್ಲಿ ಇರುವುದು ಮಾನವೀಯ ಅಸ್ಥ ಸಹಾನೂಭೂತಿ ಮಾತ್ರ.

'ಬೊಮ್ಮಿಯ ಹುಲ್ಲು ಹೊರೆ' ಯಲ್ಲಿ ಬೊಮ್ಮಿಯನ್ನು ಆ ಮಾತು ಈ ಮಾತು ಎಂದು ಮಾತನಾಡಿ ಅತೀ ಕಡಿಮೆ ದರದಲ್ಲಿ ಹುಲ್ಲನ್ನು ಎತ್ತಿ ಹಾಕುವಲ್ಲಿ ಯಶಸ್ವಿಯಾಗುತ್ತಾಳೆ. ಪಾರ್ವತಮ್ಮ ಅವಳ ಮಾತಿನ ಎಳೆಗೆ ಸಿಕ್ಕು ಇಲ್ಲಾ-ಇದೆ ಎನ್ನಲಾಗದೇ ಬೊಮ್ಮಿ ತಂದ ಹುಲ್ಲನ್ನು ಅವಳಿಗೆ ಮಾರುತ್ತಾಳೆ.

"ಹೌದೇ ಅದು ದೇವರ ಕೆಲಸಕ್ಕೆ ನಿನ್ನ ಎಂಜಲ ಗಿಂಜಲ ಸಿಡಿಸಬೇಡ ಮತ್ತೆ ಇದ್ನೋಡು- ಹೇಳ್ತೇ ಅಂತ ಸಿಟ್ಟಾಗಬೇಡ ನಿನಗೆ ಬೇಕಾದರೆ ನುಚ್ಚು ಗಿಚ್ಚು ಕೊಡೋಣ ಆದರೆ ಅದ್ರಾಗಿಂದ ಮಾತ್ರ ಮಡಲಿಗೆ ಹಾಕ್ಕೋಬೇಡ ನೀನು ಕದಿತಿ ಅಂತ ಅಲ್ಲವೆ- ಆದರೂ ಅದ್ರಾಗಿಂದ ಮಾತ್ರ ಮಡಿಲಿಗೆ ಹಾಕ್ಕೋಬೇಡ ಆದರೂ ಮನುಷ್ಯರಿಗೆ ಆಶೆ ಅಂದರೆ ದೊಡ್ಡದು- ನಾವಾಗ್ಲೀ ನೀವಾಗ್ಲಿ, ಹೀಗೆ ಆದರೆ ಏನೂ ಹೇಳಿದ್ದಿಲ್ಲ. ದೇವರ ಕಾರ್ಯಕ್ಕೆಂದು -ಮೇಲಾಗಿ ನಿನ್ನದ್ಧಿಗೆ ಬೇರೆದೆವ್ವಾ ..."

ಕದಿಯುತ್ತಿರುವ ಅಕ್ಕಿಯನ್ನು ಕದಿಯಬಾರದು ಆ ರೀತಿಯಾಗಿ ವಾತಾಡಿದ ಪಾರ್ವತಮ್ಮ ತನ್ನ ಅಕ್ಕಿಯನ್ನು ಜೀಸಿಸಿಕೊಂಡಳು ಅವಳಿಗೆ ಕೊಟ್ಟ ಅನ್ನ ಎಂಜಲಾಗಿತ್ತು ಆದರೆ ಅದನ್ನು ಸ್ಪಷ್ಟಪಡಿಸಿದ ರೀತಿಯೇ ವಿಚಿತ್ರವಾದುದು ಅದನ್ನು ಪರಮೇಶ್ವರಿಯ ಮುಂದೆ ಹೇಳುತ್ತಾ .

"ನಿನ್ನೆ ಏನಾಯ್ತು ಗೊತ್ತದೆ? ಇದರ ಊಟ ಮಾಡಿ ಹೋದರೋ ಇಲ್ಲವೋ ಇವರ ಬಟ್ಟಲಲ್ಲೇ ಜಿಡಿಸಿ ಊಟಕ್ಕೆ ಕೊಡ್ತುವವಳು. ಅಷ್ಟರಲ್ಲಿ ನಾಣಿಗೆ ಒಂಲಿಯಲ್ಲಿ ಬೆಲ್ಲಗೆಂಡೆ ಸುಡಲಿಕ್ಕೆ ಹಾಕಿದ್ದು ನೆನಪಾಯ್ತು ಊಟಮಾಡಿ ಏಳುವ ತನ್ಕ ಪೂರಾ ಸುಟ್ಟೇ ಹೋದಾವು ಎಂದು ಹಾಗೇ ತಗೊಂಡೇ ಬರೋಣ ಅಂತ ಹೋದೆ ಸಾಯಲಿಕ್ಕೆ ಆ ಸಾಡೇಸಾತಿ ನಾಯಿ ಎಲ್ಲಿ ನೋಡ್ತಾ ಇತ್ತೋ ಬರುವುದರೊಳಗೆ ಒಟ್ಟಲಲ್ಲಿ ಬಾಯಿ ಹಾಕೇಜಿಟ್ಟಿತ್ತು ಕಣ್ಣಾರೆ ನೋಡಿದ ಮೇಲೆ ಉಣ್ಣಲಿಕ್ಕೆ ಬತಾದೆಯೇ? ಹೊಸತಾಗಿ ಅನ್ನ ಮಾಡಿ ಊಟ ಮಾಡಿದೆ ಚಲೋ ಅನ್ನ! ದನಕ್ಕೆ ಹಾಕಲಿಕ್ಕೂ ಮನಸ್ಸಾಗಲಿಲ್ಲ. ಏನೆಂದರೂ ಬೊಮ್ಮಿ ಒಕ್ಕಲು ಜಾತಿಯವಳು ಹೆಚ್ಚು ಕಡಿಮೆನೇ ಇಲ್ಲ ನಾನೇ ನಾಯಿ ಬಾಯಿಹಾಕಿದ್ದು ಎಂದರೂ ಬೇಡ ಅಂತಿದ್ದಿಲ್ಲ..."

ಇಲ್ಲಿ ಎಂಜಲು ಕೊಟ್ಟು ಪಾರ್ವತಮ್ಮನವರಿಗೆ ಅದರ ಬಗ್ಗೆ ಯಾವ ಪಶ್ಚಾತ್ತಾಪವೂ ಇಲ್ಲ ಇದೊಂದು ಶೋಷಣೆಯೆಂದು ಅನಿಸದು ಬೊಮ್ಮಿಗೂ ಇದರ ಬಗ್ಗೆ ಯಾವುದೇ ನೋವು-ಬೇಸರವಿಲ್ಲ.

2) ಮದುವೆ ಕುರಿತು ಸಮಸ್ಯೆಗಳು

ಆದಿಮಾನವನ ಯುಗದಿಂದಲೂ ಮಾನವ ನೆಮ್ಮದಿಗಾಗಿ ಬದುಕಿಗಾಗಿ ಹಂಬಲಿಸಿದ ಅದಕ್ಕಾಗಿ ಕೆಲವು ಕಟ್ಟು ಪಾಡುಗಳು ವ್ಯವಸ್ಥೆಗಳು, ನಿಯಮಗಳು ಹುಟ್ಟುತ್ತಾ ಅವಿಷ್ಕಾರಗೊಳ್ಳುತ್ತಾ ಬಂದುದನ್ನು ಕಾಣಬಹುದು ಮದುವೆ ಆಗುವುದು ಇದ್ದ ಹಾಗೆ ಮದುವೆ ಮಾಡುವುದು ಸಹ ತನ್ನ ನೆಮ್ಮದಿಗಾಗಿಯೇ ಎಂದುಕೊಂಡನು ಅಷ್ಟೇಅಲ್ಲ ಮಕ್ಕಳ ಮದುವೆ ಮಾಡುವುದು ಹೆತ್ತವರ ಕರ್ತವ್ಯವೂ ಆಗಿತ್ತು.

ಅಂದು ಬಾಲ್ಯವಿವಾಹ-ಶಿಶುವಿವಾಹ ಅತ್ಯಂತ ಅನಿವಾರ್ಯವಾಗಿತ್ತು ಆದರೆ ಇಂದಿನ ಅನೇಕ ಸಾಮಾಜಿಕ ಬದಲಾವಣೆಯೊಂದಿಗೆ ಮದುವೆಯ ರೀತಿಯೂ ಬದಲಾಗುತ್ತಾ ಹೋಯಿತು ಬಾಲ್ಯವಿವಾಹ-ಶಿಶುವಿವಾಹ ನಂತರ ಆದಂತಹ ಬದಲಾವಣೆಗಳು ಹೊಸ ಸಮಸ್ಯೆಗೆ ಹುಟ್ಟು ಹಾಕಿವೆ.

ಆ ದಿನಗಳಲ್ಲಿ ಮಗಳೊಂದಿಗೆ ಪ್ರೀತಿಯಿಂದ ಕೂಡುತ್ತಿರುವಂತ ಉಡುಗೊರೆಗಳು ಈಗ ವರದಕ್ಷಿಣೆ ಭೂತವಾಗಿ ಬೆಳೆದು ನಿಂತಿದೆ ಗಂಡು ಈ ಭೂತದ ಬೆನ್ನು ಹತ್ತಿದ್ದಾನೆ. ಅಲ್ಲದೇ ಜಾತಕ ಪರೀಕ್ಷಿಸುವ ಹುಚ್ಚು ಸಹ ಈಗೀಗ ಅತಿಯಾಗಿದೆ ಮದುವೆಯ ಮಾರುಕಟ್ಟೆಯಲ್ಲಿ ಉದ್ಯೋಗಸ್ಥೆ ಹೆಣ್ಣಿಗೆ ಬೇಡಿಕೆ ಹೆಚ್ಚಿರುವಂತೆ ನಿರುದ್ಯೋಗಿ ಶಿಕ್ಷಿತ ಹೆಣ್ಣುಗಳೆಷ್ಟೋ ಮನೆಯೊಳಗೆ ಮೌನವಾಗಿ ರೋದಿಸುವಂತಾಗಿದೆ. ಕೇಳಿದಷ್ಟು ಕೊಡಲು ಸಾಮರ್ಥವಿರುವ ಹೆತ್ತವರೂ ಪ್ರತಿಷ್ಠೆ, ಅಂತಸ್ತು, ಮನೆತನ ಭ್ರಮೆಗಳಿಂದ ಹೊರಬರಲಾಗದೆ ಹೆಣ್ಣುಮಕ್ಕಳನ್ನು ಮನೆಯಲ್ಲಿರಿಸಿಕೊಂಡು ಮರುಗುವವರಿದ್ದಾರೆ. ರೂಪ, ಚಿನ್ನ, ಹಣ,ಉದ್ಯೋಗ ಎಲ್ಲ ಇದ್ದೂ ವರನ್ವೇಷಣೆಯನ್ನೇ ಮಾಡದೆ ಕಂಕಣಬಲ ಯೋಗಕ್ಕಾಗಿ ಕಾಯುವವರೂ ಕಡಿಮೆ ಇಲ್ಲ.

ಸ್ತ್ರೀ ಶಿಕ್ಷಣದ ಒಲವು ಅವಳನ್ನು ಆಕರ್ಷಿಸಿದರೂ ಸಹ ತನ್ನ ಸಂಪ್ರದಾಯದ ಕೋಟೆಯಿಂದ ಹೊರಬರಲಿಲ್ಲ ಇಂದಿಗೂ ಹೆಚ್ಚಿನ ಹೆಣ್ಣುಗಳ ನಿಲುವು ಏನೆಂದರೆ ಆಕೆ ಶಿಕ್ಷಿತೆಯಾಗಿರಲಿ, ಅಶಿಕ್ಷಿತೆಯಾಗಿರಲಿ, ಉದ್ಯೋಗಸ್ಥೆಯಾಗಿರಲಿ, ನಿರುದ್ಯೋಗಿಯಾಗಿರಲಿ ಹೆತ್ತವರು ಮದುವೆ ಮಾಡುವುದೇ ಹೆಚ್ಚು ಪ್ರೀಯವೂ, ಸುಭದ್ರವೂ ಆಗಿದೆ ಎಂಬುದೇ ಆಗಿದೆ. ತನ್ನ ಓರಗೆಯವರು ವಿವಾಹಿತೆಯರಾಗಿ ಸುಖದಿಂದ ಇರುವುದನ್ನು ಕಂಡು ವಿದ್ಯಾವಂತೆಯಾದರೂ, ಉದ್ಯೋಗಸ್ಥೆಯಾದರೂ ಕೂಡಾ ನಾನು ನಿರ್ಭಾಗ್ಯೆ ಎಂದು ಹಳಹಳಿಸುವರು. ಹೆಣ್ಣು ತಿಳುವಳಿಕೆ ಹೆಚ್ಚಿದಂತೆ ವರನನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಕೆಲವರಾದರೂ ಪಡೆದಿದ್ದಾರೆ. ಇನ್ನು ಕೆಲವರು ಆಯ್ಕೆಯಲ್ಲಿ ಸೋತು ಅವಿವಾಹಿತೆಯರಾಗಿ ಉಳಿದಿದ್ದಾರೆ.

ಆರ್ಥಿಕ ಸ್ವಾವಲಂಬನೆ ಇಲ್ಲದ ಅವಿವಾಹಿತೆ ಕೊನೆಗೆ ಕುಟುಂಬದ ಸಂಬಳ ಇಲ್ಲದ ನೌಕರಳಾಗಿರುತ್ತಾಳೆ. ಇವರು ನನ್ನವರು ಎಂದು ಯಾರಾದರೂ ಬಂಧುಗಳನ್ನು ಅವಳು ನೆಚ್ಚಿಕೊಂಡಿರಬೇಕಾಗುತ್ತದೆ. ಅವಳು ಅವರಿಂದ ತುಂಬಾ ನಿರೀಕ್ಷಿಸುತ್ತಾಳೆ ಸಿಕ್ಕದಾಗ ತಾನೂ ಅಸುಖಿಯಾಗಿ ಇತರರನ್ನೂ ಸುಖಿಯಾಗಿರಿಸುವುದರಲ್ಲಿ ಸೋಲುತ್ತಾಳೆ. ಅವಿವಾಹಿತ ಹೆಣ್ಣುಮಕ್ಕಳು ತಮಗಿಂತ ಚಿಕ್ಕವರು, ಮದುವೆಯಾದವರು ಪುರುಷರು ಮುಂತಾದವರ ಬಗ್ಗೆ ನೇರ-ಪರೋಕ್ಷವಾಗಿ ಮಾತನಾಡಿ ಕಾಲ ಕಳೆಯುತ್ತಾರೆ.

'ಖಾಲಿಕೋಣೆ' ಯ ನಿರ್ಮಲೆಯ ಅಕ್ಕ .ಹೇಳುವಂತೆ " ಹುಚ್ಚು ಹುಡುಗಿಯರು! ಚಾಪಾಟಿಯ ಮೇಲೆ ಹೋಗಿ ಅಲ್ಲ ಮುತ್ತುವ ಆ ಗಂಡು ಹುಡುಗರ ಬಗ್ಗೆ ಮತನಾಡುತ್ತಾ ಅವರೆಡೆ ಮಿಕಿ ಮಿಕಿ ನೋಡುತ್ತ ಕೂಡುವುದರಲ್ಲಿ ಇವರಿಗೆ ಅದೆಂತಹ ಸುಖವೋ!"

ಅವಿವಾಹಿತೆಯರಿಗೆ ಕನಸು ಕಾಣುವ ಹುಚ್ಚು ಅದರಲ್ಲಿಯೂ ಸುಂದರ, ಉದ್ಯೋಗಸ್ಥ ತುಂಬಾ ಪ್ರೀತಿಸುವವನು ಅತ್ಯಂತ ರಸಿಕ ವ್ಯಕ್ತಿಗಳನ್ನೇ ಕಲ್ಪಿಸಿಕೊಳ್ಳುತ್ತಾರೆ.

" ಅನಂತ ಎಂದು___ ಹುಡುಗ ತುಂಬ ಚುರುಕು ಬುದ್ಧಿಯಿರುವ ಜಾಣ___ ಕಾಣಲು ಮನ್ಮಥಮೂರ್ತಿ___ ವಯಸ್ಸು ಬಲಿಯ 25 "

ನಿರ್ಮಲೆಯ ಹಾಗೆ ಕೇವಲ ಖಾಲಿ ಕೋಣೆಯಲ್ಲಿ ಬರುವ ಒರ್ವ ಹುಡುಗ (ಅನಂತ) ಅವಳ ಮನವನ್ನೇ ಆವರಿಸುತ್ತಾನೆ. ಖಾಲಿಕೋಣೆ ಅವಳ ಮನಸ್ಸಿನ ಸಂಕೇತವಾಗಿ ಬಿಟ್ಟು ಅನಂತನ ಪ್ರತೀಕವಾಗಿ ಅನಂಗ ತುಂಬಿಬಿಡುತ್ತಾನೆ. ಹಗಲುಗನಸುಗಳ ವಿಚಿತ್ರ ಸುಖವನ್ನು ಅನುಭವಿಸುವ ನಿರ್ಮಲೆ ಸತ್ಯ-ಜಗತ್ತಿನ ಸಂಪಕರ್ಆವನ್ನು ಕಡೆದುಕೊಳ್ಳುವಳು.
ಇಲ್ಲಿ ನಿರ್ಮಲೆಗೆ ಕನಸು ಕಾಣುವ ವಯಸ್ಸು ಕನಸಿನಲ್ಲಿಯೇ ಹೊಸದೊಂದು ಜಗತ್ತು ನಿರ್ಮಿಸಿದಳು ಆದರೆ ವಾತ ಪಾರಾಲಾಸಿಸ್‌ದಿಂದಾಗ ಮರಣ ಹೊಂದಿದ ಅನಂತನೊಂದಿಗೆ ತನ್ನ ಕೋಣೆಯೂ ಮರಳಿ ಖಾಲಿಯಾಯಿತೆನ್ನಿಸಿತು.

ಕನಸುಗಳು ಕೇವಲ ಅವಿವಾಹಿತೆಯರಿಗಷ್ಟೇ ಅಲ್ಲ ಅವರನ್ನು ಹೆತ್ತವರಿಗೂ ಇರುತ್ತದೆ. ಮದುವೆಯಾಗದ ಹುಡುಗಿಯರ ತಾಯಿ-ತಂದೆ ಮಕ್ಕಳು ಪತಿಯ ಕನಸನ್ನು ಕಾಣುವುದಕ್ಕೆ ಮೊದಲೇ ಅವರು ಅಳಿಯನ ಕನಸು ಕಾಣುತ್ತಿರುತ್ತಾರೆ. ಅಲ್ಲದೆ ಬೇರೆಯವರಿಂದ ನಿಂದನೆಗೆ ಒಳಗಾಗುವ ಮುನ್ನವೇ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವ ಆಸೆ ಆದರೆ ಆಸೆಗೆ ಅವಕಾಶಗಳೂ ಬೇಕಲ್ಲವೇ? ವರದಕ್ಷಿಣೆ ಕೊಡದ ಮನೆಗಂತೂ ಈ ಹೆಣ್ಣು ನೋಡಲು ಬಾರರು ಮಧ್ಯಮ ವರ್ಗದವರೂ ಹೆಣ್ಣು-ಹೆಣ್ಣಿದ್ದವರೂ ಇವರಲ್ಲಿ ಏನೂ ಸಿಕ್ಕದೆಂಬ ಭಾವನೆ ಗಂಡಿನ ಕಡೆಯವರಲ್ಲಿ ಹೆಣ್ಣು ಕೆಲ ಕೆಲವೊಮ್ಮೆ ರೂಪವಿಲ್ಲವೆಂದು ಕೊಂಕು ತೆಗೆಯುವ ಅವರು ರೂಪವಿದ್ದರೇನಾಯ್ತು? ಅರೆದು ಕುಡಿಯಲು ಬರುವುದೆ? ಹಣಕೊಡದಿದ್ದರೆ ಹೇಗೆ ಒಪ್ಪುವುದು? ಎನ್ನುವರು ಇವುಗಳೆಲ್ಲವುಗಳ ಮಧ್ಯೆ ತಂದೆ-ತಾಯಿಗೆ ಹುಚ್ಚು ಹಿಡಿದಂತಾಗುವುದು ನನ್ನ ಮಗಳಿಗೆ ಒಳ್ಳೆಯ ವರ ಸಿಗಲಿ ಎನ್ನುವುದಕ್ಕಾಗಿ ಕಂಡ-ಕಂಡ ವರಿಗೆ ಕೈ ಮುಗಿದು ಹೇಳುವರು.

ಮದುವೆಯಾಗದ ಅವಿವಾಹಿತೆಯರು ತಂದೆ-ತಾಯಿಗೊಂದು ಸಮಸ್ಯೆಯೇ ಸರಿ ಚಿತ್ತಾಲರ 'ತಪ್ಪಿದ ಗುರಿ' ರಾಧಕ್ಕನ ಮನೋರಥ ' ದಲ್ಲಿ ಇದು ಚೆನ್ನಾಗಿ ಮೂಡಿಬಂದಿದೆ.

ಬಂದವರು ಯಾರೆಂದೂ ಸಹ ತಿಳಿಯದ 'ಮುಕ್ತಾ'ಳ ತಾಯಿ ಮಗಳಿಗೆ ಗಂಡ ಇವನೇ ಎಂಬ ಭರದಲ್ಲಿ ಮಗಳನ್ನು ಹೊಗಳುತ್ತಾ ಹುಡುಗನ್ನು ಮೆಚ್ಚುತ್ತಾ ಹೋಗುತ್ತಾಳೆ, ಮಗಳಿಗೆ ಉತ್ತಮ ಪತಿ ಸಿಗಲಿ ಎಂಬ ಮುಸುಕಿನ ಮಧ್ಯೆ ಅವಳಿಗೆ ಮತ್ತೇನೂ ಕಾಣದು ಅವಳು ಕಸೂತಿಯನ್ನೂ, ಅಭ್ಯಾಸವನ್ನೂ, ಸರಳತೆಯನ್ನೂ ಅವನ ಮುಂದೆ ಹೇಳಿದ್ದೇ ಹೇಳಿದ್ದು ಅಷ್ಟೇ ಅಲ್ಲ ಅವನನ್ನು ಇದ್ದಕ್ಕಿಂತಲೂ ಅತಿಯಾಗಿಯೇ ಹೊಗಳಿದರು ನಂತರ ಅವನು ಹೊರಟು ಹೋಗುವುದನ್ನೇ ಕಾದಂತಹ ಮಗಳು ತಾಯಿ ಮೇಲೆ ಕೋಪಿಸಿಕೊಂಡಳು. ತಾಯಿ ಅದಕ್ಕೆಲ್ಲ ಸಮಜಾಷಿ ನೀಡುತ್ತಾ"

ನಿನಗೆ ಗೊತ್ತಿಲ್ಲ ಮಗೂ ಜಗದ ರೀತಿ ಹೆರವರಿಂದ ನಮ್ಮ ಕೆಲಸ ಆಗಬೇಕಾದರೆ ಅವರನ್ನೂ ಸ್ವಲ್ಪ ಹೊಗಳಬೇಕು ಇದ್ದುದರೊಡನೆ ಇಲ್ಲದನ್ನೂ ತುಸು ಹೇಳಬೇಕಾಗುತ್ತದೆ. ನಾನು ಎಷ್ಟು ಚಂದವಾಗಿ ಹೇಳಿದೆ ಅವನಿಗೆ ನಿನ್ನ ಬಗ್ಗೆ.

ಎಂದಾಗ ಮಗಳು ಅವನು ಮದುವೆಯಾಗುವ ಹುಡುಗನೇ ಅಲ್ಲ ಅವನ ಅಣ್ಣ ಎಂದು ಉತ್ತರಿಸುತ್ತಾಳೆ. ಕಕ್ಕಾಬಿಕ್ಕಿಯಾಗುವ ಸರದಿ ತಾಯಿಯದು; ಮಗಳು ಮದುವೆ ಮಾಡುವ ಭರದಲ್ಲಿ ಯಾವುದನ್ನು ವಿಚಾರಿಸದೆ ಮಾತನಾಡಿಬಿಡುವ ತಾಯಿಯ ಸ್ಥಿತಿ ಸಮಸ್ಯೆಯ ಸ್ಪಷ್ಟತೆಯನ್ನು ಚಿತ್ರಿಸುತ್ತದೆ.

ಇದಕ್ಕಿಂತಲೂ ವಿಚಿತ್ರವಾದ ಸನ್ನಿವೇಶ ರಾಧಕ್ಕನದು ರಾಧಕ್ಕನ ಮನೋರಥೆ ದಲ್ಲಿ ತನ್ನ ಮಲತಂಗಿಯ ಸಂಬಂಧಿ ಗೋಪಾಲ ನೆಂಬವನು ತನ್ನ ಮಲತಂಗಿಯ ಮನೆಗೆ ಬಂದಿರುವುದನ್ನು ತಿಳಿದು ಅವನನ್ನು ಭೇಟಿಯಾಗಲು ಬೀದಿಗೆ ಬರುತ್ತಾಳೆ. ಮುಲ್ಕಿಯವರೆಗೆ ಶಾಲೆ ಕಲಿತ ಸುಮತಿ ಇದನ್ನೆಲ್ಲ ವಿರೋಧಿಸುತ್ತಿದ್ದರೂ ರಾಧಕ್ಕನಿಗೆ ಮಗಳು ಮದುವೆ ಬಿಟ್ಟು ಬೇರೆ ಕನಸುಗಳೇ ಇಲ್ಲ ಕೇಳಿದಷ್ಟು ವರದಕ್ಷಣಿ ಕೊಡಲಾಗದ ಅಡಿಗೆಯವಳ ಮಗಳಾದ ಸುಮತಿಗೆ ಮದುವೆಯು ಎಷ್ಟೊಂದು ಸಮಸ್ಯೆದಾಯಕ ಎಂದು ಅರಿವಾದರೂ ಸಹ ತಾಯಿ ಅದನ್ನು ಒಪ್ಪುತ್ತಿಲ್ಲ ಈಗ ಮಲತಂಗಿ ಯಮುನೆಯ ಮನೆಗೆ ಬಂದ ಗೋಪಾಲನಿಗಾಗಿ ಕಾಯುತ್ತಿದ್ದಾಳೆ. ಅವನು ಅವಳನ್ನು ನೋಡುತ್ತಾ ವಿಪರೀತ ಸ್ಥಿತಿಯಲ್ಲಿ ಅವನು ತನ್ನನ್ನು ಗುರುತಿಸಿದಂತೇ ಅವನಿಗೆ ವೇಳೆ ಸಿಗದ ಕಾರಣದಿಂದಾಗಿ ಪತ್ರ ಬರೆದರಾಯ್ತು ಎಂಬಂತೆ ಅವಳಿಗೆ ತಿಳಿಯುವದು ಇದು ಕಲ್ಪನೆಯೋ ವಾಸ್ತವವೋ ಅವಳು ಅದನ್ನು ತಲೆ ಕೆಡೆಸಿಕೊಳ್ಳಲು ಹೋಗುವದೇ ಇಲ್ಲ ಮಗಳ ಸಮಸ್ಯೆಯನ್ನು ಚಿಂತಿಸಿ-ಚಿಂತಿಸಿ ಬಂದು ರೀತಿಯ ಮನೋವಿಕಲ್ಪದ ಕಡೆಗೆ ಸಾಗುತ್ತಿರುವ ರಾಧಕ್ಕ ಪ್ರತಿ ಹೆಣ್ಣುಮಗಳು ತಾಯಿಯಾಗಿ ಕಣ್ಮುಂದೆ ನಿಲ್ಲುತ್ತಾಳೆ.

3) ಅಸಹಾಯಕತೆ:-

ಅಸಹಾಯಕತೆ ಬೆನ್ನು ಹತ್ತಿದಾಗ ಮನುಷ್ಯ ತನಗೆ ಗೊತ್ತಿಲ್ಲದಂತೆ ಸೋಲುತ್ತಾನೆ.

ಈ ಅಸಹಾಯಕತೆಯ ಮೂಲವನ್ನು ಹುಡುಕುತ್ತಾ ಹೋದಾಗ ನಮಗೆ ಶೋಷಣೆಯ ಪದ ಹೊರಹೊಮ್ಮುತ್ತದೆ. ಮೊದಲಿನಿಂದಲೂ ಬಂದಂತ ಶೋಷಣೆ ಕೆಲವು ವರ್ಗದವರನ್ನು ಶೋಷಣೆಗೆ ಒಳಗಾಗಲು ದಾರಿ ಮಾಡಿ ಕೊಡುತ್ತದೆ. ಅಬೋಲಿನನ ಅವಳ ತಂದೆ ಕೈತಾನನ ಅಸಹಾಯಕರ ಅವಳ ದುರಂತಕ್ಕೆ ಕಾರಣವಾದರೆ ಮಂಯಶೆಟ್ಟಿ ಶ್ರೀಮಂತ ಸುಶೀಲಕ್ಕನ ಕೈಯಲ್ಲಿ ಸಿಕ್ಕು ನಲಗುವಂತಾಯಿತು.

ಸಮಾಜವನ್ನು ಎದುರಿಸಲಾಗದೆ ತಮ್ಮನ್ನು ತಾವೇ ಶೋಷಣೆಗೆ ಒಳಪಡಿಸಿಕೊಳ್ಳುತ್ತಾರೆ. ಆ ಸಮಾಜದ ಸಿದ್ಧಾಂತಕ್ಕೆ ತಮ್ಮನ್ನು ಒಪ್ಪಿಸಿ ಕೊಳ್ಳುತ್ತಾರೆ ಅದರ ಮೌಲ್ಯಗಳಿಗೆ ಪ್ರಶ್ನಿಸದೆ ತಲೆಬಾಗುತ್ತಾರೆ ಬೊಮ್ಮಿಯ ಬಡತನ ತುಂಬದ ಬದುಕು ಪಾರ್ವತಮ್ಮ ಅವಳನ್ನು ಶೋಷಿಸುವಂತೆ ಮಾಡಿತು ಯಾವ ಪಾಪವೂ ತನಗೆ ತಟ್ಟಿದು ಎಂಬಂತೆಯೇ ಪಾರ್ವತಮ್ಮ ಬೊಮ್ಮಿಗೆ ಯಂಜಲು (ನಾಯಿಯ) ಆಹಾರವನ್ನು ಕೊಟ್ಟರು ಇವತ್ತಿಗೆ ಸಿಕ್ಕರೆ ಸಾಕು ಎನ್ನುವ ಬೊಮ್ಮಿ ತಿಳಿಯದೆಯೆ ಅದನ್ನು ಸ್ವೀಕರಿಸಿದಳು ಅದೇ ಊರಿನಲ್ಲಿ ವಾಸವಾಗಿರುವ ವೇಶ್ಯೆ ಉತ್ತುಮಿ ಯದು ಅದೇ ಕಥೆ. ತಾಯಮನದ, ಉತ್ತಮಗುಣದ ಉತ್ತುಮಿ ಈ ಪುರುಷರಿಂದಾಗಿ, ಹೊಟ್ಟೆಹಸಿವಿನಿಂದಾಗಿ ಪರಿಸ್ಥಿತಿಯ ಕೈಗೊಂಬೆಯಾಗಿ ವೇಶ್ಯಯಾದಳು ಉತ್ತುಮಿ ತಾನು ವೇಶ್ಯ ಎನ್ನುವದನ್ನು ಒಪ್ಪಿಕೊಂಡಿದ್ದಾಳೆ. ತಾನು ಎಲ್ಲರಂತೆ ಬದುಕುವ ಆಸೆ ಇದ್ದರೂ ಸಮಾಜದ ಮೌಲ್ಯಗಳನ್ನು ಎದುರಿಸುವ ಧೈಯಿವಿಲ್ಲ ಅಸಹಾಯಕತೆ ಅವಳ ಕೈ ಹಿಡಿದು ನಿಲ್ಲಿಸಿದೆ.

ಅಸಹಾಯಕತೆ ನೋವಿನ ದಾರಿಯೂ ಹೌದು ನಮ್ಮ ಅಸಹಾಯಕತೆ ನಮಗೆ ಕೋಪ ತರುವುದಾದರೂ ಬಡವನ ಸಿಟ್ಟು ದವಡೆಗೆ ಮೂಲ ಎಂಬಂತೆ ನಮಗೆ ಅದು ನೋವೇ ತರುವುದು ಮದುವೆಯು ಮೊದಲರಾತ್ರಿ ಓಡಿಹೋದ ಪತಿಯ ನೆನಪಿನಲ್ಲಿಯೇ

ಬಾಳಿದ ಅಹಲ್ಯೆ ಬೈರಾಗಿಯೊಡನೆ ಒಂದಾಗುತ್ತಾಳೆ. ಆದರೆ ತಾನು ಮಾಡಿದ ತಪ್ಪಿನ ಅರಿವಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ್ದೂ ಸಹ ಈ ಅಸಹಾಯಕತೆಯೇ!

ಹೆಣ್ಣಿನ ಅಸಹಾಯಕತೆ ಬೇರೆ ಬೇರೆ ಮಗ್ಗುಲಲ್ಲಿ ಬೇರೆ ಬೇರೆ ರೀತಿಯಲ್ಲಿ ಬರುವುದಲ್ಲದೇ ಅದು ಅವಳಿಗೆ ತರುವುದು ಕೊನೆಗೆ ದುರಂತವೇ ಎಂಬುದನ್ನು ಲೇಖಕ ಇಲ್ಲಿ ಚಿತ್ರಿಸಿದ್ದಾರೆ. ಇದರಲ್ಲಿ ಬರುವ ಆಬೋಲಿನ ಅಹಲ್ಯೆ ಬೊಮ್ಮಿ ಉತ್ತಮ ಇವರೆಲ್ಲ ಬೇರೆ ಬೇರೆಯಾದ ವರಾದರೂ ಒಂದು ಹಂತದಲ್ಲಿ ಅಸಹಾಯಕತೆಯಿಂದ ನರಳಿದವರು ಬದುಕನ್ನು ಇದ್ದರೀತಿಯಲ್ಲಿಯೇ ಒಪ್ಪಿಕೊಂಡವರು. ಸಾವು ತಂದುಕೊಂಡು ದಂತಕಥೆಯಾದೆವರು.

4) ದುರಂತಗಳು:-

ಅಸಹಾಯಕ ನೋವಿನ ಕೊನೆಯ ಹಂತವೇ 'ದುರಂತ' ತಪ್ಪು ಮಾಡದೆ ತಾನು ಸರಿ ಎಂಬುದನ್ನು ಸಮಾಜಕ್ಕೆ ತೋರಿಸಲಾಗದೆ ಅಸಹಾಯಕತೆಯಿಂದ ಬದುಕಿದ್ದು ಸಾಯುವದು ಒಂದು ರೀತಿಯಾದರೆ, ವಿಧಿ ತನ್ನ ಅಟ್ಟಹಾಸದಲಿ ಅರಳ ಬೇಕಾದ ಅರಳಿದ-ತಾನಾಗಿಯೇ ಬಾಡಬಹುದಾದ ಹೂವುಗಳನ್ನು ಕ್ರೂರವಾಗಿ ಹಿಚುಕುವದು ದುರಂತವೇ ಸರಿ;

ಕಥೆ ಯಾವುದೇ ಇರಲಿ ಸುಖಾಂತ ಬಯಸುವದು ನಮ್ಮ ಮನಸ್ಸು ಆದರೆ ದುರಂತ ಕತೆಗಳು ನಮ್ಮ ಮನದಾಳದಲ್ಲಿ ಉಳಿದು ಬಿಡುತ್ತವೆ ರಾತ್ರಿಯಲ್ಲಿಯೂ ಬೆಚ್ಚಿ ಬೀಳುವಂತೆ ಮಾಡುತ್ತವೆ ಆದ್ದರಿಂದಲೇ ಷೇಕ್ ಸ್ಪೀಯರ್ ನಾಟಕಗಳಲ್ಲಿ ದುರಂತ ನಾಟಕಗಳೇ ಹೆಚ್ಚು ಮನದಲ್ಲಿ ಅಚ್ಚೊತ್ತಿವೆ.

ದುರುಂತ ಸಹಜ ಬದುಕಿನಲ್ಲಿ ಭಯಂಕರ ಕ್ರೂರತೆಯನ್ನು ತೋರಿಸುತ್ತದೆ. ಅವು ಅಸಹಜವಾಗಿರುವುದರಿಂದಲೇ ನಮ್ಮಲ್ಲಿ ರೋಮ ಎದ್ದು ನಿಲ್ಲುತ್ತವೆ ದುರಂತ ಯಾವ ರೀತಿಯಾದರೂ ಸರಿ ಅದು ದುರಂತವೇ ಪತಿಯ ಕೈಯಿಂದ ಕ್ರೂರತೆಯಿಂದ ನಲುಗಿದ ಸತಿಯರು ದಂತಕತೆಯಾಗುತ್ತಾರೆ. ಅತ್ಯಾಚಾರಕ್ಕೆ ಒಳಗಾದ ಸ್ತ್ರೀ ತನ್ನ ಸುಂದರ

ಜೀವನವನ್ನು ತಾನೇ ಅಂತ್ಯಗೊಳಿಸಿಕೊಂಡರೆ ತಪ್ಪು ಎಂದು ತಿಳಿದ ದಾರಿಯನ್ನು ತಾನೇ ಬಳಸಿ ಅನಂತರ ಪಾಪ ಪ್ರಜ್ಞೆಗೆ ಬಳಗಾದ ತಮ್ಮ ಬದುಕನ್ನು ತಾವೇ ದುರಂತಕ್ಕೆಳೆಸುತ್ತಾರೆ.

ದುರಂತ ಕತೆಗಳಲ್ಲಿ ಬಂದು ನಿಲ್ಲುವ ಚಿತ್ತಾಲರ ಮೊದಲ ಚಿತ್ರಣವೆಂದರೆ ಅಬೋಲಿನ ಸುಂದರವಾದ ಹುಡುಗಿ ತನ್ನ ಅಜ್ಞಾನದಿಂದ ಮನವೇಲು ಮಾಡಿದ ಮೋಸದಿಂದ ತನ್ನ ಬದುಕನ್ನೇ ದುರಂತವಾಗಿಸಿಕೊಂಡವಳು.

ಆಬೋಲಿನ ನನ್ನು ವಶಪಡಿಸಿಕೊಳ್ಳಲು ಮನವೇಲು ತಾನುಮುತ್ತಿಟ್ಟ ಅವಳಿಗೆ ಎರಡು ತಿಂಗಳಾಗಿದೆ ಎಂದು ಹೇಳಿದ. ಸರಿಯಾದ ಜ್ಞಾನವಿಲ್ಲದ ಅವಳು ಅದನ್ನು ನಂಬಿದಳು, ಚರ್ಚಪಾದ್ರಿಯ ಸಹಾಯದಿಂದ ಅವಳ ಮದುವೆ ಮಾಡಿಕೊಂಡ ನಂತರ ಅವಳು ಗರ್ಭಿಣಿಯಲ್ಲವೆಂಬುದನ್ನು ಅರಿತು ಮೋಸ ಮಾಡಿದಳೆಂದು ತಪ್ಪನ್ನು ಅವಳ ಮೇಲಿಯೇ ಹೊರಿಸಿದ ನೊಂದ ಅಬೋಲಿನ ಆತ್ಮಹತ್ಯೆ ಮಾಡಿಕೊಂಡಳು.

ಅಬೋಲಿನ್ನಳ ಜೀವನದಲ್ಲಿ ದುರಂತ ನಡೆಯುವುದಕ್ಕೆ ಅವಳ ಮುಗ್ಧತೆ ಕಾರಣವಿದ್ದಂತೆ, ಮನಲಿನ ದುಷ್ಟತನ ಅವನು ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸುವ ಚರ್ಚಿನ ಮೌಢ್ಯ, ತಂದೆ ಕೈತಾನನ ಅಸಹಾಯಕತೆ ಒಂದಿಲ್ಲೊಂದು ರೀತಿಯಿಂದ ಕಾರಣವಾಗುತ್ತವೆ ಆದರೆ ಇಲ್ಲಿ ಅಬೋಲಿನ ಆತ್ಮಹತ್ಯೆ ಮಾಡಿಕೊಳ್ಳುವುದು ಪಾಪಭಾವನೆಯ ಒತ್ತಡದಲ್ಲಿ ಅಲ್ಲ; ಸಮಾಜದ ನಿಂದೆಗೆ ಬಳಪಟ್ಟ ದಿನವೂ ತಪ್ಪು ಮಾಡದೆ ನಿಂದೆ ಕೇಳಿ ಕೇಳಿ ಬದುಕಿರುವುದಕ್ಕಿಂತ ಸಾಯುವುದೇ ಲೇಸೆನ್ನಿಸಿತು.

ಅಬೋಲಿನ ತನ್ನ ಮುಗ್ಧತೆಯಿಂದ ದುರಂತ ಕಂಡರೆ ಮುಂಯಶೆಟ್ಟಿ ಶ್ರೀಮಂತಿಕೆಯಲ್ಲಿ ಹುಟ್ಟಿ ಬೆಳೆದ ಸುಶೀಲಕ್ಕನಿಂದ ದುರಂತ ಕತೆಯಾದರು ಜೀವನದಲ್ಲಿ ಅತಿ ಸುಖ-ಸಂತೋಷ ಕಂಡು ಈಗ ಏನೂ ಕಾಣದೆ ಬರಿಗೈಯಲಿರುವ ಮಂಯಶೆಟ್ಟಿಯನ್ನು ಕಂಡಾಗ ಜನ " ಹೇಗಿದ್ದವರು ಹೇಗಾಗುತ್ತಾರೆ ಎಂದು ಹೇಳುವದು ಕಷ್ಟ ಬ್ರಹ್ಮ ಆಟಿತ ಹೇಗಿರುತ್ತದೆಯೇ ಯಾರು ಬಲ್ಲರು? ಎಂದು ಹೇಳುವರು.

ಲೇಖಕರ ಅಕ್ಕನ ಮದುವೆಗೆ ಮದುವೆ ಮಂಟಪ ಕಟ್ಟಲು ಬಂದಂತಹ ಮುಯಂಶೆಟ್ಟಿ ಲೇಖಕರ ತಂದೆಯ ತಂಗಿಯ ಮಗುವನ್ನು ತನ್ನ ಕಳೆದುಕೊಂಡ ಮಗನೆಂದೇ ಭಾವಿಸಿ ಅಪರೂಪವಾಗಿ ಆಡಿಸುವರು ತಪ್ಪು ತಿಳಿದ ಸುಶೀಲಕ್ಕ ಅವರು ಮಗುವಿಗೆ ನೇವಾಳ ಕೊಟ್ಟಾಗ ಶಾಂತರಾಗುತ್ತಾರಾದರೂ ಅದನ್ನು ಮತ್ತೆ ಪಡೆಯಲು ಯತ್ನಿಸಿದಾಗ ಅವಳಿಗೆ ಕಳ್ಳತನದ ಆರೋಪ ಹೊರೆಸುತ್ತಾರೆ.

ಮಂಜುನಾಥ ಶೆಟ್ಟಿಯವರು ತನ್ನ ಮಗನ ಮೇಲೆ ತೋರಿಸುತ್ತಾ ಇರುವ ಪ್ರೀತಿಗೆ ಸುಶೀಲಕ್ಕೆ ಬೇರೆಯೇ ಅರ್ಥ ಕಲ್ಪಿಸಿದರು. ಆಗ ಮಂಜುನಾಥ ಶೆಟ್ಟಿಯವರು ಅವಳೊಂದಿಗೆ ಮಾತನಾಡಿ ನನ್ನ ಮಗ ರಾಮಕೃಷ್ಣ ನನ್ನೇ ಕಂಡಂತಾಗಿ ಅವನನ್ನು ಹೆಚ್ಚು ಪ್ರೀತಿಸಿದೆನೆಂದೂ ತಿಳಿಸಿದರು ಬದಲಾಗಿ ಮಗನಿಗೆಂದು ತಂದು ಅವನಿಗೆ ಹಾಕದೇ ಇಟ್ಟುಕೊಂಡಿದ್ದು ನೇವಾಳವನ್ನು ಕೊಟ್ಟರು ಆದರೆ ಸುಶೀಲಕ್ಕೆ ಅದನ್ನು ತನ್ನದೇ ಎಂದು ಸಾಧಿಸಿದಳಲ್ಲದೆ ಅದನ್ನು ಅವ ಕದಿಯಲು ಬಂದಿದ್ದನೆಂದೂ ಸಾರಿಬಂದಳು. ಹೊಸದಾಗಿ ಬಂದ ಐಶ್ವರ್ಯ, ಸ್ವಭಾವದಲ್ಲಿ ತುಂಬಿವ ಆಸೆ ಇವು ಸುಶೀಲಕ್ಕ.. ನನ್ನು ಕುರುಡು.. ಗೊಳಿಸಿದ್ದವು ಆವಳಲ್ಲಿ ಮಂಜುನಾಥಶೆಟ್ಟಿಯ ಹೃದಯವಂತಿಕೆಯನ್ನು ಗುರುತಿಸುವ ಶಕ್ತಿಯಿಲ್ಲ ಅಷ್ಟೇ ಅಲ್ಲ ಅವನ ಒಳ್ಳೆಯತನದ ಲಾಭ ಪಡೆದು ಅವನನ್ನು ಅಪವಾದಕ್ಕೆ ಗುರಿಪಡಿಸುವ ಕುಹಕತನವೂ ಇದೆ.

ಅಪವಾದ ಹೊತ್ತು ನೊಂದ ಮಂಯಶೆಟ್ಟಿಯನ್ನು ಜನ ಮುದಿಹುಚ್ಚು ಎಂದು ಕ್ಷಮಿಸಿದರಾದರೂ ಅವನು ತಪ್ಪುಮಾಡಿಲ್ಲ ಎಂದು ಒಪ್ಪಿಕೊಳ್ಳಲಿಲ್ಲ

ಆದರೆ ಒಂದು ದಿನ ಲೇಖಕರ ತಂದೆ ತಾತನಿಗೆ ಈ ವಿಷಯಗೊತ್ತಾದರೂ ಸಹ ಅನ್ಯಾಯಕ್ಕೆ ಗುರಿಯಾದವ ಬದುಕಿಲ್ಲವೆಂದೋ ಅಥವಾ ಅನ್ಯಾಯಕ್ಕೆ ಕಾರಣವಾದವರು ತಮ್ಮ ಸಂಬಂಧಿಕರೂ ಎಂಬ ಕಾರಣದಿಂದ ಆ ವಿಷಯ ಹೊರಬರಲಿಲ್ಲ.

ಇಲ್ಲಿ ಮೇಲುವರ್ಗದ ಶ್ರೀಮಂತ ಹೆಣ್ಣು ತನ್ನ ಚಾಲಾಕಿತನದಿಂದ ಬಡವನ

ದುರುಪಯೋಗ ಪಡಿಸಿಕೊಂಡು ಕೊನೆವರೆಗೆ ಅವನಿಗೆ ಅಪವಾದ ಬರುವಂತೆ ಮಾಡಿದ್ದಳು ಎಂಬುವಂತ ದುರಂತನಾಯಕನಾಗಿದ್ದೆ.

ಚಿತ್ತಾಲರ ಕತೆಯಾದ ಉದ್ದಾರದಲ್ಲಿ ಬರುವಂತಹ ಅಹಲ್ಯೆ ಆಗಿನ ಋಷಿಪತ್ನಿಯಲ್ಲ ಆದರೆ ಮದುವೆಯಾದ ಮೊದಲ ರಾತ್ರಿಯೇ ಪತಿ ಓಡಿಹೋಗಿ ಅವಳು ಸುಖವಂಚಿತಳು ಸುಂದರ ಕನಸುಗಳನ್ನು ಅಲ್ಲೇ ಹೊಸಕಿದವಳು ಅಹಲ್ಯೆ ದುರಂತದ ಹಿಂದೆ ಅವಳ ಬದುಕಿನ ಎರಡು ಅನಾಹುತಗಳಿವೆ ಒಂದು ಮದುವೆಯಾದ ಮೊದಲ ರಾತ್ರಿಯಲ್ಲಿಯೇ ಗಂಡ ಮಲಗುವ ಮನೆಯಿಂದ ಓಡಿಹೋದುದು ಎರಡನೆಯದು ನಂತರದ ಘಟನೆ, ತರುಣ ಕೀರ್ತನಕಾರ ನೊಬ್ಬ ಹಳ್ಳಿಗೆ ಬಂದವನು ಇವಳ ಮನೆಯಲ್ಲಿಯೇ ರಾತ್ರಿ ಕಳೆಯುತ್ತಾನೆ. ಆ ರಾತ್ರಿಯೂ ಇವಳು ಒಬ್ಬಳೇ ಈ ಕೀರ್ತನಕಾರನ ಕಣ್ಣುಗಳಲ್ಲಿ ತಾನು ಮದುವೆಯಾದವನ ಕಣ್ಣುಗಳಲ್ಲಿ ಕಂಡ ಬೈರಾಗಿಯ ದೃಷ್ಟಿಯನ್ನು ಅಹಲ್ಯೆಕಾಣುತ್ತಾಳೆ ಇಬ್ಬರೂ ಜಾರುತ್ತಾರೆ ಬೆಳಗಾಗುವ ಮೊದಲೇ ಕೀರ್ತನಕಾರ ಓಡಿಹೋಗುತ್ತಾನೆ. ಈ ಎರಡು ಅನಾಹುತಗಳನ್ನು ಕೊಡಿಸುವ ಕೊಂಡಿ ಎರಡು ಸಲವೂ ಅಹಲ್ಯೆಗೆ ಕನಸಿನಲ್ಲಿ ಕಾಣಿಸಿಕೊಳ್ಳುವ ಭಯಾನಕ ಕಪ್ಪುನಾಯಿ ಕತೆಯ ವರ್ತಮಾನದಲ್ಲಿ ಈ ಕಪ್ಪುನಾಯಿ ಅಹಲ್ಯೆಯ ಸಾವಿನ ಮುನ್ಸೂಚನೆಯಾಗಿ ವಾಸ್ತವಿಕವಾಗಿ ಅವತರಿಸುವತ್ತದೆ.

ಈ ಕತೆಯಲ್ಲಿ ಚಿತ್ತಾಲರು ಅಹಲ್ಯೆಯ ಕೀರ್ತನಕಾರನ ಪಾಪ ಪ್ರಜ್ಞೆಯನ್ನು ಗುರುತಿಸುತ್ತಾರಾದರೂ ಅದರ ಕ್ರಿಯೆಯನ್ನು ಅಭಿನಯಿಸುವುದರಲ್ಲಿ ಅವರಿಗೆ ಆಸ್ಥೆಯಿಲ್ಲ ಅವರ ಲಕ್ಷವೆಲ್ಲ ಪಾಪ, ಶಾಪ, ಸಾವು ಇವುಗಳ ಗೂಢದ ಮೇಲೇಯೇ?.

5) ಕತೆಗಳಲ್ಲಿ ಕಂಡೂ ಕಾಣದಂತಿರುವ ಸ್ತ್ರೀ ಪಾತ್ರಗಳು:-

ಸ್ತ್ರೀ ಸಂವೇದನೆಯನ್ನು ಕುರಿತು ಅಧ್ಯಯನ ಮಾಡುವಾಗ ಕೆಲವೊಂದು ಮುಖ್ಯ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳವದು ಅತ್ಯಂತ ಅವಶ್ಯಕ.

ಚಿತ್ತಾಲರ ಕೆಲವೊಂದು ಕತೆಗಳಲ್ಲಿ ಸ್ತ್ರೀ ನಾಯಕಿಯ ಸ್ಥಾನವನ್ನು

ಹೊಂದಿದ್ದರೆ ಇನ್ನು ಕೆಲವು ಕತೆಗಳಲ್ಲಿ ಮರದ ಹಿಂದೆ ನಿಂತ ನೆರಳಿನಂತಿದ್ದಾಳೆ. ಕಂಡೂ ಕಾಣದಂತಿದ್ದಾಳೆ. ಈ ಕೆಲವು ಕತೆಗಳಲ್ಲಿ ಅವಳನ್ನು ಆ ಕಥೆಯ ಓರೆ-ಕೋರೆಗಳಿಂದ ಬೇರ್ಪಡಿಸುವದು ಅಸಾಧ್ಯ ಏಕೆಂದರೆ ಅಲ್ಲಿ ಅವಳ ಸ್ವಂತಿಕೆಯೇ ಇಲ್ಲ ಅವಳನ್ನು ನಾವು ಯಾವ ರೀತಿಯಿಂದಲೂ ಗುರುತಿಸಲಾಗದು.

ಇನ್ನೂ ಕೆಲವು ಪಾತ್ರಗಳಲ್ಲಿ ಕೆಲವೇ ಕ್ಷಣಗಳು ಬಂದು ಹೋದರೂ ಮುಖ್ಯವಾಹಿನಿಯಾಗುತ್ತಾಳೆ ಚಿತ್ತಾಲರ ಕಳ್ಳ ಗಿರಿಯಣ್ಣ ಕತೆಯಲ್ಲಿ ನೋಡಿದಾಗ ಲೇಖಕರ ತಾಯಿಯ ಪಾತ್ರ ಕಿರಿದಾದರೂ ಹಿರಿತನದ ತತ್ವವಿದೆ, ಗಿರಿಯಣ್ಣ ನನ್ನು ಕರೆದು "ಆಕಾಯಿಯ ಸಲುವಾಗಿ ನಮಗೆ ಕಡಕೆನಿಸಲಿಲ್ಲ ಅದು ದೇವರಿಗೆ ಬಿಟ್ಟಕಾಯಿ ಯಾರಿಗೂ ಮಾರಬೇಡ ನೀನೇ ಮುರ್ಕಂಡಿ ದೇವರಿಗೆ ಕೊಟ್ಟು ಕ್ಷಮೆ ಬೇಡಿಬಾ " ಎಂದಾಗ ನಿಜಕ್ಕೂ ಗಿರಿಯಣ್ಣ ಬದಲಾದದ್ದೇನು ವಿಶೇಷವಲ್ಲ.

ಆದರೆ ಗುಂಡಾಭಟ್ಟರ ಮಡಿ'ಯಲ್ಲಿ ತಾಯಿಯಾಗಿ ಮಡಿ ಮೈಲಿಗೆ ಖಟ್ಟಾ ರೀತಿಯಿಂದ ಆಚರಿಸುವಲ್ಲಿ ಮಗನು ಆದರ್ಶವಾಗಿ ಪಡೆದುಕೊಂಡದ್ದು. ಅದುಮುಂದೆ ಹೆಂಡತಿಯ ವೇಳೆಗೆ ಸರಳೀಕರಣ ಗೊಳಿಸಿದ್ದು ಬಿಟ್ಟರೆ ಯಾವ ಸ್ತ್ರೀ ಪಾತ್ರದವೂ ಇಲ್ಲಿ ಮುಖ್ಯವಾಗಿಯೇ ಇಲ್ಲ.

ಮುಕುಂದನ ದಾಕ್ಷಿಣ್ಯದಲ್ಲಿ ಸ್ತ್ರೀಪಾತ್ರ ಕೇವಲ ಒಂದೆರಡು ನಗೆಚಾಟಿಕೆ ಮಾಡುವ ಮಗ್ಧ ಹುಡುಗಿ ರೂಪದಲ್ಲಿದ್ದರೆ "ಪೀಜ'ಯಲ್ಲಿ ಕೈ ಹಿಡಿದ ಜೊತೆಯಲ್ಲಿ ಮಾತನಾಡುವ ತನ್ನ ಆಸೆ ತಿಳಿಸುವ ಮರೆಯ ಹೆಣ್ಣಾಗಿದ್ದಾಳೆ.

'ಸಂದರ್ಶನ' ದಲ್ಲಿ ಕೇವಲ ಅತ್ತಿಗೆ ಪಾತ್ರದಲ್ಲಿ ದೂರದಲ್ಲಿ ನಿಂತರೆ ಅಪರಿಚಿತರು, ದಲ್ಲಿ ಪತ್ನಿಯಾಗಿ ಪತಿಯ ಜೊತೆ ಜೊತೆಗೆ ಅತಿಥಿಸತ್ಕಾರ ಮಾಡುವದನ್ನೇ ಒಂದು ಗುರಿಯಾಗಿಸಿ ಕೊಂಡವಳು.

ಆದರೆ ಮಲ್ಲಿನಾಥ ಕತೆಯಲ್ಲಿ ನಿವೃತ್ತ ಮಿಲಟರಿ ಕ್ಯಾಪ್ಟನ ಪತ್ನಿಯಾಗಿ ಪತಿಯಷ್ಟೇ ಸ್ವಾತಂತ್ರ್ಯ ತನ್ನದಾಗಿಸಿಕೊಂಡಿದ್ದಾಳೆ.

ಗಾನ ಪ್ರೀಯ ಶಂಭುಶಾಸ್ತ್ರಿ'ಯಲ್ಲಿ ಸಂಗೀತಗಾರ್ತಿಯೂ ತೋರಿರುವ ಸ್ತ್ರೀ ಪಾತ್ರ 'ಅದೃಷ್ಟ' ದಲ್ಲಿ ತಾಯಿಯೂ 'ಪಯಣ' ಕತೆಯಲ್ಲಿ ಸ್ತ್ರೀ ಪಾತ್ರವೇ ಸಿಕ್ಕದು ಆಫಿಸಿನ 'ಸ್ಟೇನೋಗ್ರಾಫರ' ಹೆಸರು ಅದೂ ಒಂದು ಸಲ ಮಿಂಚಿ ಹೋಗಿದ್ದು ಬಿಟ್ಟರೆ ಇನ್ನೊಂದು ಕಡೆ ನಾಯಕನನ್ನು ಅವನ ತಂದೆ ಹೊಡೆಯುತ್ತಿದ್ದಾಗ ಅವನ ತಾಯಿ ಸೋದರತ್ತೆ ಬಿಡಿಸಿಕೊಳ್ಳಲು ಯತ್ನಿಸಿದರು ಎಂಬುದೊಂದು ಬಿಟ್ಟರೆ ಮತ್ತೆ ಕಾಣಸಿಗದು 'ಆಟ' ದಲ್ಲಿಯೂ ಬಾಗಿಲು ಹಾಕುವುದು-ತೆಗೆಯುವುದು ನರಸಿಂಹನ ಅಜ್ಜಿ-ತಾಯಿ ಅಲ್ಲೊಂದು-ಇಲ್ಲೊಂದು . ಮಾತನಾಡುವುದು ಹೊರತಾಗಿ ಉಳಿದೆಲ್ಲಾ ಪಾತ್ರ ಪುರುಷರದೇ.

' ಕತೆಯಲ್ಲಿ ಬಂದಾತ ' ತ್ರಯೋದಶ ತ್ರಯೋದಶ ಪುರಾಣಗಳಲ್ಲಿ ಸ್ತ್ರೀ ಇವನ ಪತ್ನಿ- ಇವನ ಮಗಳು ಇವನ ತಾಯಿ ಮಾತ್ರವೇ ಉಳಿದೆಲ್ಲಾ ಗೌಣ ' ಸಾವಿತ್ರಿ'ಯಲ್ಲಿ ಓದಿರುವ ಹೋರಾಡುವ ನೌಕರಿ ಹಿಡಿಯಲಿಚ್ಚಿಸುವ ಸ್ತ್ರೀ ಒಂದೆರಡು ನಿಮಿಷ ಕಣ್ಣಿಗೆ ಬೀಳುತ್ತಾಳೆ.

' ಚಕ್ರವ್ಯೂಹ ' ಕೃತಿಯಲ್ಲಿ ಮಾತ್ರ ಅಭಿಮನ್ಯು ಪಾತ್ರ ಚಿತ್ರಿಸಿದ ಲೇಖಕರು ತಮ್ಮ ನಲವತ್ತೈದನೇ ವಯಸ್ಸಿನಲ್ಲಿ ನ್ಯೂಯಾರ್ಕನಲ್ಲಿ ಪ್ರೇಮಸಂಬಂಧವನ್ನು ನಿರ್ಮಿಸಿದ್ದಾರೆ. ಅದರಲ್ಲಿ ಬರುವಂತಹ ಲೇಖಕರ ಪತ್ನಿ ನಾಯಕಿಯಾದರೂ ವಿಶಿಷ್ಟ ಪಾತ್ರವಿರುವುದು ಮಾತ್ರ ' ಲೂಯಿಸಾ' ಆಗೆ.

ಆದರೆ ' ತಮ್ಮನ ಕತೆಗೆ ಹೊಸ ಜೀವ ಬಂದಾಗ' ಇದರಲ್ಲಿ ತಮ್ಮನ ಕತೆ ಮುಖ್ಯವಾದರೂ ಎಲ್ಲ ಪಾತ್ರಗಳನ್ನೂ ಸಮರ್ಥವಾಗಿಯೇ ಬಳಸಲಾಗಿದೆ. ಪಾತ್ರಗಳಿಗೆ ಜೀವಂತಿಕೆಯಿದೆ ವಿಶಿಷ್ಟತೆಯಿದೆ.

ಈ ಎಲ್ಲಾ ಮೇಲಿನ ಕತೆಗಳಲ್ಲಿ ಕತೆಗಳ ಸ್ತ್ರೀ ಸಂವೇದನಾ ನೆಲೆ-ಪಾತ್ರಗಳು ಕ್ಷಣಿಕವಾಗಿದ್ದರೂ ಸಹ ಪಾತ್ರಗಳೇ ಇಲ್ಲಾ ಎನ್ನುವಂತಿಲ್ಲ ವಿಶಿಷ್ಟವಾದಂತಹ ನೆಲೆಯಲ್ಲಿ ತಮ್ಮ ವಿಶಿಷ್ಟತೆಯನ್ನು ಸಾರುವಂತಹ ಪಾತ್ರಗಳು ಇವೆ. ಮರದ ನೆರಳಿನಲ್ಲಿ ಮೆರೆಯಾದಂತೆ ಧೀರ್ಘ ಕತೆಯ ವೃಕ್ಷಕ್ಕೆ ಮರೆಯಾದಂತೆ ಕಂಡರೂ ಸಹ ಅವು ಅಲ್ಲಿ ' ಮಿಣುಕು ' ಹುಳುವಿನಂತೆ ವಿಶಿಷ್ಟತೆಯನ್ನು ಬೀರುತ್ತವೆ. ತಾಯಿ-ಮಡದಿ-ಮಗಳು ಪಾತ್ರಗಳಲ್ಲಿ ಅನಿವಾರ್ಯತೆಯ ಸ್ಪಷ್ಟ ರೂಪವನ್ನು ತಂದುಕೊಡುತ್ತವೆ.

6) ಸ್ತ್ರೀ ಸಮಸ್ಯೆಗಳ ಕಾರಣಗಳು ಮತ್ತು ಅದರ ಸ್ವರೂಪ

ಹೆಣ್ಣಿನ ಜೀವನ ಮೊದಲಿಂದಲೂ ಗಂಡಿನ ನೆರಳಾಗಿಯೇ ಇದೆ. ಇತ್ತೀಚೆಗೆ ಅವಳ ಚೇತರಿಸಿಕೊಳ್ಳುತ್ತಿದ್ದರೂ ಸಹ ಹೊಸ ಸಮಸ್ಯೆಗಳು ಅವಳ ಅಸ್ಥಿತ್ವವನ್ನು ಕದಡಿವೆ.

ಬಾಲ್ಯ-ವಿವಾಹ-ಶಿಶುವಿವಾಹ ಈಗಿಲ್ಲವಾದರೂ ವಿವಾಹವೇ ಹೆಣ್ಣಿಗೊಂದು ಸಮಸ್ಯೆಯಾಗಿದೆ. ವರದಕ್ಷಿಣೆಗೆ ಬಾಯ್ಬಿಡುವ ಗಂಡು ಅವಳನ್ನು ಕೊಂದು ಹಾಕಲೂ ಹೇಸುತ್ತಿಲ್ಲ ಹೀಗಾಗಿ ಅವಿವಾಹಿತೆಯರ ಸಂಖ್ಯೆ ಹೆಚ್ಚುತ್ತಿದೆ. ಉದ್ಯೋಗದಲ್ಲಿರುವ ಮಹಿಳೆಯರೂ ನೂರಾರು ತೆರೆನಾದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ.

ಮದುವೆ ಹೆಣ್ಣು ಹೆತ್ತ ತಂದೆ-ತಾಯಿಯರನ್ನು ತುಂಬಾ ಅಧೀರನಾಗಿಸಿದೆ. ಹಣವಿಲ್ಲದ ಮಧ್ಯಮ ವರ್ಗದ ಸ್ತ್ರೀಯರಿಗಂತಲೂ ಒಳ್ಳೆಯ ಪತಿಯ ಕುರಿತು ಕನಸು ಕಾಣುವುದೂ ಕಷ್ಟವೇ ತಂದೆ-ತಾಯಿಗಳು ದಿನದಿನಕ್ಕೆ ಹುಚ್ಚರಾಗುತ್ತಿರುವರು ಇಲ್ಲಿರುವದ ಸರ್ವೆಯಾಪಿ ಸಮಸ್ಯೆಯಾಗಿದೆ. 'ಖಾಲಿಕೋಣೆ'ಯ ನಿರ್ಮಲೆಯಲ್ಲಿ ಬರುವಂತಹ ' ರಾಧಕ್ಕನ ಮನೋರಥ' ಮತ್ತು ' ತಪ್ಪಿದ ಗುರಿ' ಯಲ್ಲಿ ಬರುವಂತಹ ತಾಯಂದಿರ ಬದುಕು ಪ್ರತಿ ಮಧ್ಯಮ ವರ್ಗದಲ್ಲಿ ಇರುವಂತಹದೇ ಆಗಿದೆ.

ಶೋಷಣೆ ಸ್ತ್ರೀ ಜೀವನದ ಮತ್ತೊಂದು ಮುಖ ನಿಜ ಹೇಳಬೇಕೆಂದರೆ ಹೆಣ್ಣು ಅದಕ್ಕಾಗಿಯೇ ಹುಟ್ಟಿದ್ದಾಳೆಂದೂ ಹೇಳಬಹುದು. ಶೋಷಣೆ ಇಂಥವರಿಂದಲೇ ಎಂದು ಹೇಳಲಾಗದು ಪತಿ ಅವರ ಮನೆವರು ಮೆಲ್ವರ್ಗ ಕೆಳವರ್ಗ ದ ಮಹಿಳೆ ಕೆಳಜಾತಿ ಮೇಲ್ಜಾತಿಯ ಮಹಿಳೆ ಹೀಗೆ ಶೋಷಣೆಯಲ್ಲಿಯೂ ವಿವಿಧತೆಯಿದೆ ಎಲ್ಲರಂತೆ ಬಾಳಬೇಕಾಅದಂತಹ ಹೆಣ್ಣೇ ಈ ಗಂಡಸರ ಆಸೆಗೆ ಬಲಿಯಾಗಿ ಅವರ ಸುಖಕ್ಕಾಗಿ ತಾನು ಬದುಕುವುದಕ್ಕಾಗಿ ವೇಶ್ಯೆಯಾಗುತ್ತಾಳೆ. ಆ ವೇಶ್ಯ ಮಾತೃಹೃದಯ ಇದ್ದವಳಾದರೂ ಸಹ ಅವಳಲ್ಲಿ ಮುಖ್ಯವಾಗಿ ಕಂಡು ಬರುವದು 'ಸುಖ ಕೊಡುವ ಸೂಳೆ' ಎಂಬುದೇ ಆಗಿದೆ. ಈ ಶೋಷಣೆಯನ್ನು ಮೌನವಾಗಿ ಸ್ವೀಕರಿಸಿದ್ದಾಳೆ.

ನೋವು-ಅಸಹಾಯಕತೆಯಿಂದ ಬಲಿಗೆ ಸಿಕ್ಕ ದುರಂತ ನಾಯಕಿಯಾದ ಅಬೋಲಿನ ಮನದಂಗಿತಕ್ಕೆ ಸರಿಯಾದ ಮಾಗ೯ವಿಲ್ಲದೆ ಕೊನೆಗೆ ದುರಂತ ಕಂಡ ಅಹಲ್ಯೆ ಇವರೆಲ್ಲ ಪುರುಷ ಶೋಷಿತರೇ ಈ ನೋವು ಅಸಹಾಯತೆಯಿಂದ ಬಳಲಿದ ಕೆಲವರು ಬದುಕನ್ನು ಬಂದ ರೀತಿಯಲ್ಲೇ ಅಪ್ಪಿಕೊಂಡರೆ ಅಬೋಲಿನ ಅಹಲ್ಯೆಯಂತವರು ದಾರುಣವಾದ ಅಂತ್ಯವನ್ನು ಕಂಡಿದ್ದಾರೆ.

ಅಂತರ್ಜಾತಿಯ ವಿವಾಹವೂ ಸಹ ಕತೆಯಲ್ಲಿ ಅತ್ಯುತ್ತಮವಾಗಿ ಮೂಡಿ ಬಂದಿದೆಯಲ್ಲದೆ ಇನ್ನೊಂದು ಮುಖ್ಯವಾದ ಸಮಸ್ಯೆಯೂ ಆಗಿದೆ.

ನಾವಷ್ಟೇ ಮುಂದುವರೆದವರಾದರೂ ನಮ್ಮಲ್ಲಿ ಅಧಿನಿಕತೆ ತುಂಬಿ ತುಳುಕುತ್ತದೆಯಾದರೂ ಇನ್ನೂ ಅಂತರ ಜಾತೀಯ ವಿವಾಹಕ್ಕೆ ಮನಸ್ಸು ಮಾಡಿಲ್ಲ ಅಂತರಜಾತೀಯ ವಿವಾಹ ಅದೊಂದು ರೀತಿಯ ಸಮಾಜ ಬಾಹಿರ ವಿಷಯವೇ ಈಗಿರುವ ಜ್ವಲಂತ ಸಮಸ್ಯೆಯೂ ಆಗಿದೆ ನಿರ್ಮಲೆ 'ಅಡ್ಡಬಿದ್ದ ಮರ' ದಲ್ಲಿ ಉತ್ತಮ ಹುಡುಗನಾದರೂ ಅವನನ್ನು ಮದುವೆಯಾಗಲು ತನ್ನ ಅಜ್ಜಿಯ ಒಪ್ಪಿಗೆ ಸಿಗುವವರೆಗೆ ಕಾಯಬೇಕಾಗು ಬಂದುದು ಅಂದಿನ ಸಂಪ್ರದಾಯದ ಅಜ್ಜಿ ಇದನ್ನು ಒಪ್ಪಿಕೊಳ್ಳಲು ಸಿದ್ಧಳಿರಲಿಲ್ಲ ವೆಂಬುದನ್ನು ತೋರಿಸಿಕೊಡುತ್ತದೆ. ಇಲ್ಲಿ ನಿರ್ಮಲೆಯ ಪ್ರೇಮಿಗೆ 'ಅಡ್ಡ ಬಿದ್ದ

ಮರ' ವೊಂದು ನಮ್ಮಿಬ್ಬರ ನಡುವೆ ಕಂದಕವಾಗಿರುವ ಈ ಅಡ್ಡ ಬಿದ್ದ ಮರ ದಂತಿರುವ ಆ ಅಜ್ಜಿಯೇ ಕಾರಣವೆಂದು ಯೋಚಿಸುತ್ತಾನೆ ಆ ಅಜ್ಜಿಯ ಮರಾಣಾನಂತರ ತಾನು ಸಂತೋಷವಾಗಿದ್ದನ್ನು ಕಂಡು ತನಗೆ ತಾನೇ ಅಚ್ಚರಿಯನ್ನು ಪಡುತ್ತಾನೆ.

ಅಶ್ವತ್ತಾಮ ಕತೆಯಲ್ಲಿಯೂ ಸಹ ಅಂತರ ಜಾತೀಯ ವಿವಾಹಕ್ಕೆ ಹೆದರಿ ಲೇಖಕ ಪಾವಿತಿಯ ಕೈ ಬಿಡುತ್ತಾನೆ. ಪಾರ್ವತಿ ಆ ಬಿಸಿರನ್ನು ಹೊತ್ತೆ ಬಾವಿಯಲ್ಲಿ ಹಾರುತ್ತಾಳೆ. ಲೇಖಕಿ ಆಮೇಲೆ ಸಾಕಷ್ಟು ಹೆಸರು ಹಣ ಮಾಡಿದರು ಮರಳಿ ಪಾರ್ವತಿಯನ್ನು ಪಡೆಯಲಾಗುವುದಿಲ್ಲ. ಪಾರ್ವತಿ ಈಗ ಮರೆಯಲಾರದ ದುರಂತದಲ್ಲಿ ಸೇರಿಹೋಗಿದ್ದಾಳೆ ನಾಯಕ ರಾಮಚಂದ್ರ ಹೇಳುವಂತೆ.

"... ನಿನ್ನನ್ನು ಪ್ರೀತಿಸಿ ಮದುವೆಯಾಗುತ್ತೇನೆಂದು ಭರವಸೆ ಕೊಟ್ಟ ಈ ಎಂಟೆದೆಯ ಎಂಬ ನಿನಗೆ ದಿನ ಹೋಗಿವೆ ಎಂದು ತಿಳಿದ ಕ್ಷಣವೇ ಹೆದರಬೇಡ, ಹೆದರಬೇಡ...ಊರಿಗೆ ಹೋದದ್ದೇ ಅಪ್ಪ ಅಮ್ಮಂದಿರನ್ನು ಒಪ್ಪಿಸಿ ನಿನಗೆ ಪತ್ರ ಹಾಕುತ್ತೇನೆ. ಇಲ್ಲ ಖುದ್ದು ನಾನೇ ಬಂದು ಕಾಣುತ್ತೇನೆ...ಕೈ ಮೇಲೆ ಕೈಯಿಟ್ಟು ಭಾಷ ಕೊಟ್ಟ ಊರಿಗೆ ಬಂದವನು...ಎಂಟಂಟು ದಿನಕ್ಕೆ ಒಂದಿಲ್ಲ ಒಂದು ನೆಪ ಮಾಡಿ ನಿನ್ನ ಊರಿಗೆ ಬರುತ್ತಿದ್ದವನು ಒಮ್ಮಿಂದೊಮ್ಮೆಲೇ ತನ್ನ ಪ್ರೇಮ ಸಂಚಾರವನ್ನು ನಿಲ್ಲಿಸಿ ಆಯತ ವೇಳಗೆ ಪುಸ್ತಕ ಓದುವ ಹುಚ್ಚು ಹಿಡಿಸಿಕೊಂಡು ಮೂಲೆಗುಂಪಾದೆನಲ್ಲವೇ..."

ರಾಮಚಂದ್ರನ ಮಾತು ನಂಬಿದ್ದ ಪಾರ್ವತಿ ಕೊನೆಗೆ ಮರಳಿ ಬರದ ಅವನನ್ನು ಕಾದು ಕಾದು ಆತ್ಮ ಹತ್ಯೆ ಮಾಡಿಕೊಟ್ಟತ್ತಾಳೆ. ಅಚಿತರ ಜಾತೀಯ ವಿವಾಹದಲ್ಲಿ ಬ್ರಾಹ್ಮಣರ ಮಡಿವಂತಿಕೆ ಹೆದರಿ ನಾಯಕ ಶೂದ್ರ ಕನ್ಯೆಯನ್ನು ನಡು ನೀರಿನಲ್ಲಿ ಕೈಬಿಡುತ್ತಾನೆ.

ಮುಖ್ಯವಾಗಿ ಸ್ತ್ರೀ ಸಮಸ್ಯೆಗಳನ್ನು ಕುರಿತು ಚರ್ಚಿಸುವಾಗ ಮೊದಲು ಬರುವುದೇ ಶೋಷಣೆ ಈ ಶೋಷಣೆ ಇವರಿಂದ ಅವರಿಂದ ಎನ್ನದೇ ಎಲ್ಲರಿಂದಲೂ

ಅನುಭವಿಸುತ್ತಾಳೆ ತಿಳಿದೋ-ತಿಳಿಯದೆಯೇ ತಂದೆ ತಾಯಿಗಳು ಗಂಡು ಮಕ್ಕಳಿಗೆ ಹೆಚ್ಚಿನ ಮಹತ್ವವನ್ನು ನೀಡಿ ಗರ್ಭದಲ್ಲಿರುವ ಸ್ತ್ರೀಯನ್ನು ನಾಶಮಾಡಲು ಹೊರಟಿದ್ದಾರೆ. ಅದಕ್ಕೂ ಕಾರಣವಿದೆ ಅದೇಂದರೆ ವರದಕ್ಷಿಣೆ, ಲೈಂಗಿಕ ಅತ್ಯಾಚಾರ.

ಸ್ತ್ರೀಯನ್ನು ಬೇರೆಯವರಿಂದ ಮದುವೆಯಾಗುವವರೆಗೆ ಪವಿತ್ರವಾಗಿಡುವದು ಅತೀಮುಖ್ಯ ಆದರೆ ಇದು ಪುರುಷರಿಗೆ ಅನ್ವಯಿಸಲಾಗದು ಏಕೆಂದರೆ ಏನಾದರೂ ಆದರೆ ಅವರು ಕಳೆದು ಕೊಳ್ಳುವಜಿತದು ಏನೂ ಇರುವುದಿಲ್ಲ.

ಇನ್ನು ವರದಕ್ಷಿಣೆ ಇದಂತೂ ಸ್ತ್ರೀಯರ ಪಾಲಿಗೆ ಶತ್ರುವಾಗಿ ಪೇಡಂಭೂತವಾಗಿ ಪರಿಣಮಿಸಿದೆ ಭಾರತದ ಮುಕ್ಕಾಲು ಸ್ತ್ರೀಯರು ಈ ವರದಕ್ಷಿಣೆಯ ಕಾರಣದಿಂದಲೇ ನರಳುತ್ತಿದ್ದಾರೆ. ತಂದೆ-ತಾಯಿ ಕೈತುಂಬ ಸಾಲ ಮಾಡಿ ಹಣಕೊಟ್ಟಿರು ಪತಿ ಮನೆಯವರು ದಿನವೂ ಹಿಂಸೆ -ಹತ್ಯೆ ತಪ್ಪಿಸಿಲ್ಲ. ಇದರಿಂದಾಗಿಯೋ ಮದುವೆಯೇ ಬೇಡ ಎಂಬ ನಿರ್ಧಾರಕ್ಕೆ ಸ್ತ್ರೀಯರು ಬರುತ್ತೆ ದ್ದಾರೆ ಆದರೆ ಇದಂತೂ ಒಳ್ಳೆಯ ಬೆಳವಣಿಗೆಯಲ್ಲ.

ನಂತರ ಬರುವುದು 'ಬಂಜೆತನ' ತಾಯ್ತನ ಹೆಣ್ಣಿಗೆ ಹೊಸ ಬದುಕನ್ನು ನೀಡಿದರೆ ಬಂಜೆ ಎಂಬ ಶಬ್ದವು ಅವಳನ್ನು ಮರಣ ಕೈಳೆಸುತ್ತಿದೆ ಗಂಡು ತನ್ನ ದೋಷವನ್ನು ಮುಚ್ಚಿಟ್ಟುಕೊಂಡು ಬೀಜಕ್ಕಿಂತ ಮಣ್ಣಿನ ದೋಷವೇ ಪ್ರಧಾನವಾಗಿರುತ್ತಿದ್ದಾನೆ, ಅದಕ್ಕೆ ಸಮಾಜವೂ ನಂಜಿಕೆಯುಳ್ಳವರು ಆದರಿಂದ ವಂಚಿತಳಾಗುವ ಭಯದಲ್ಲಿ ಆತ್ಮಹತ್ಯೆಗೂ ಎಡೆಮಾಡಿಕೊಡುತ್ತಾಳೆ.

ನಾಗರೀಕತೆ ಬೆಳೆದಂತೆ ಸಮಾಜ ವೇಶ್ಯೆಯರನ್ನು ಸೃಷ್ಟಿಸುತ್ತಾ ಬಂದಿತ್ತು ಆದರದು ಈಗ ಅನಿವಾರ್ಯವಾಗಿ ನಿಂತಿದೆ ಹೆಣ್ಣು ಕೇವಲ ಭೋಗ ವಸ್ತುವಾಗಿಸದಲ್ಲದೆ ಅದನ್ನು ಆತ್ಯವಶ್ಯಕವಾಗಿಸಿದ್ದರೆ ಇತ್ತ ಹೆಂಡತಿಯನ್ನು ವೇಶ್ಯಯಂತಾಗಲೂ ವೇಶ್ಯೆಯಲ್ಲಿ ಹೆಂಡತಿಯನ್ನಾಗಲೀ ಕಾಣಲಾಗದ ಪುರುಷ ವೇಶ್ಯ ಸಮಾಜವನ್ನು ಸೃಷ್ಟಿಸಿದನು.

ಮದುವೆಯಾದ ಸ್ತ್ರೀಯರು ವಿಧವೆಯಾದರೆ ಅದಕ್ಕಿಂತಲೂ ಭಯಾನಕವಾದಂತಹ ಪರಿಸ್ಥಿತಿ ಇನ್ನೊಂದಿಲ್ಲ. ಬಹು:ಶ ಹಿಂದಿನ ಸ್ತ್ರೀ ಈ ಕಾರಣಕ್ಕೆ ಪತಿಯ ಮೇಲಿನ ಪ್ರಮಕ್ಕಿಂದಲೂ ಸಮಾಜದ ಭಯ. ಸತಿ ಹೋಗಲು ಪ್ರೇರೇಪಿಸುತ್ತಿದ್ದು ಹಣೆಗೆ ಕುಂಕುಮ, ಮಲ್ಲಿಗೆ, ಸೇವಂತಿಗೆ ದಂಡ ದೊಡ್ಡ ಸೀರೆಯುಡುತ್ತಿದ್ದ ಸ್ತ್ರೀ ಒಮ್ಮೇಲಿ ಬೋಳು ಹಣೆ ಬೋಳು ತಲೆ ಕೆಂಪುಸೀರೆಗೆ ಬಂದು ನಿಲ್ಲುತ್ತಾರೆ ಸ್ತ್ರೀಯರು ಮರುಮದುವೆಯ ಯೋಚನೆಯಂತೂ ಮಾಡುವ ಹಾಗೇ ಇಲ್ಲ ಇದ್ದದರಲ್ಲಿಯೇ ಸ್ವಲ್ಪವೇ ಅಲಂಕಾರವೂ ಸಮಾಜದ ಜನ ಕೆಕ್ಕರಿಸಿ ನೋಡುವಂತೆ ಮಾಡುತ್ತವೆ.

ಇಂಧಿನ ಸ್ತ್ರೀಯರು ಸುಶಿಕ್ಷಿತರು ಅವರು ಬಯಸುವ ಜೀವನ ಅವರಿಗೆ ಸಿಗದೇ ಹೋದದ್ದು ಒಂದು ರೀತಿಯ ಸಮಸ್ಯೆಯೇ ಆಗಿದೆ. ಇಂದು ಕಲಿತ ಹುಡುಗಿಯರು ತಮ್ಮ ಪತಿಯ ಬಗ್ಗೆ ತಮ್ಮದೇ ಆದಂತಹ ಕಲ್ಪನೆ ಹೊಂದಿದ್ದಾರೆ ಒಂದು ನಿರ್ಧಿಷ್ಟವಾದಂತಹ ರೂಪ-ರೇಷಗಳಿವೆ ಇಂತಹ ಪತಿಯೇ ಬೇಕು ಈ ರಿತಿಯ ಸುಖಸೌಲಭ್ಯಗಳು ನನ್ನವು ಆಗಬೇಕು ಅದರಂತೆ ಜೀವನದ ಯಾವುದೇ ಜವಾಬ್ದಾರಿಯನ್ನು ಅವರು ಹೊರಲು ಸಿದ್ದರಿಲ್ಲ ಒಂದು ಸುಂದರ ಕುಟುಂಬ ತಾಯಿ-ತಂದೆ ಭಾರದಿಂದ ದೂರವಾಗಿ ಸ್ವತಂತ್ರ ಜೀವನ ಸಾಗಿಸಲು ಇಚ್ಚಿಸುತ್ತಾರೆ.ಪ್ರತಿಯೊಂದು ವಿಷಯಕ್ಕೂ ಪತಿಯ ಅಡಿಯಾಳಾಗಿರುವದು ಅವಳಿಗೆ ರುಚಿಸದು ಈ ಕಾರಣಕ್ಕಾಗಿಯೋ ವಿವಾಹ ವಿಚ್ಛೇದನೆ ಕಾಲಿಟ್ಟಿದೆ ಅಂದಿನ ಕಾಲದಲ್ಲಿ ಇರುವ ಹೊಂದಾಣಿಕೆಯ ಮಂತ್ರ ಇಂದು ಅರ್ಥಹೀನವಾಗಿದೆ ವಿಧವೆಯರೂ ಹೊಸ ಜೀವನಕ್ಕೆ ಅಡಿಯಿಡುತ್ತಿರುವದು ಅವರು ಎಲ್ಲರಂತೆ ಬದುಕುತ್ತಿರುವದು ಶುಭ ಸೂಚನೆಯಾದರೂ ಅವರು ಹಿಡಿಯುವ ಅಡ್ಡದಾರಿ ಸಾಮಾಜಿಕ ಸನಸ್ಯೆಗಳಿಗೆ ಹೊಸಗಾಳಿ ಬೀಸಿದಂತಾಗುತ್ತಿದೆ.

ತುಂಬಿದ ಐಶ್ವರ್ಯ,ಸ್ವಭಾವದಲ್ಲಿ ತುಂಬಿಕೊಂಡಿರುವ ಆಸೆ ಇವು ಇಂದಿನ ಸ್ತ್ರೀಯರನ್ನು ಕುರುಡಾಗಿಸುತ್ತಿವೆ ಅವರು ಹಣವಂಚಿತರಾಗಿ ಆರ್ಥಿಕ ಭದ್ರತೆ ನಮ್ಮಲ್ಲಿದೆ ನಮ್ಮನ್ನು ಯಾರೂ ಏನೂ ಮಾಡಲಾರರೆಂಬ ಸ್ಥಿತಿಯನ್ನು ತಲುಪುತ್ತಿದ್ದಾರೆ. ತನ್ನ ಇಚ್ಚೆಯಂತೆ ಜೀವನವನ್ನು ಮಾಡಲು ಇಚ್ಚಿಸುತ್ತಾರೆ ದಾರಿಯಾವುದೇ ಇರಲಿ ವೈಭಯೋಪಿತ ಜೀವನ

ನಡೆಸುವದು ಅವರ ಗುರಿಯಾಗಿದೆ. ಆದರೆ ತಪ್ಪು -ಸರಿ ಬಗ್ಗೆ ಹೆಚ್ಚು ಪ್ರಶ್ನಿಸಿಕೊಳ್ಳಲು ಆಗದೆ ತಮ್ಮ ಜೀವನವನ್ನು ನಡೆಸಲು ಹೆಣಗುತ್ತಿದ್ದಾರೆ.

ವಿವಾಹಪೂರ್ವ-ವಿವಾಹದ ನಂತರದ ಲೈಂಗಿಕ ಸಮಸ್ಯೆಗಳನ್ನು ಕುರಿತು ಇಲ್ಲಿ ಚರ್ಚಿಸಬೇಕಾದಂತಹ ಅವಶ್ಯ.

ವಿವಾಹ ನಂತರ ಲೈಂಗಿಕ ಸಮಸ್ಯೆ ಉದ್ಭವವಾಗುವದು ಕಡಿಮೆ ಅದೊಂದು ಸಮಾಜ ಕೊಟ್ಟಂತ ಒಪ್ಪಿಗೆಯಾದರೂ ಸಹ ಯಾವುದಾದರೊಂದು ಕಾರಣದಲ್ಲಿ ಸ್ತ್ರೀ ಅಥವಾ ಪುರುಷ ಲೈಂಗಿಕ ಸಂಬಂಧವನ್ನು ನಡೆಸುವುದರಲ್ಲಿ ಅನರ್ಹರಾಗಿದ್ದಾರೆ. ಅಲ್ಲಿಂದ ಸಮಸ್ಯೆ ಉದ್ಭವವಾಗುತ್ತದೆ. ಇಲ್ಲಿರುವಂತ ರೀತಿಯಲ್ಲಿ ಚಿತ್ತಾಲರ 'ಹಾವು' ಕಥೆಯಲ್ಲಿ ಮೂಡಿಬಂದಂತಹದು ಅಲ್ಲಿ ಲೇಖಕರ ಚಿಕ್ಕಮ್ಮ ತನ್ನ ತಾಳಲಾರದ ಹೊಟ್ಟೆನೋವಿನಿಂದಿಗಾಗಿ ಪತಿಯ ಸಂಗಡ ಬೆರೆಯಲು ಆಗದೆ ಅವನನ್ನು ಬೇರೆ ಮದುವೆಯಾಗಲು ಪ್ರೇರೆಪಿಸುತ್ತಾಳೆ. ನಾನು ನಿನಗೆ ಒತ್ತಾಯ ಮಾಡುವದಿಲ್ಲ ಎಂದ ಪತಿ-ಕೇವಲ ಎಂಟೇದಿನಕ್ಕೆ ಆಮಾತನ್ನು ಮರೆತು ಬಿಟ್ಟಿರುತ್ತಾನೆ. ಈ ಸಂದರ್ಭದಲ್ಲಿ ದೇವಿಯ ಆಗಮನವಾಗುತ್ತದೆ.

ಇಲ್ಲಿ ಬರುವ ಚಿಕ್ಕಮ್ಮ ಚಿಕ್ಕಪ್ಪರದು ವಿವಾಹ ನಂತರ ಲೈಂಗಿಕ ಸಮಸ್ಯೆಯಾದರೆ ಇಲ್ಲಿರುವ ದೇವಿ ಕಾಮದ ಸಂಕೇತವಾಗಿಯೇ ಸುಳಿಯುತ್ತಾಳೆ ಅವಳ ಗುರಿ ಲೇಖಕರ ಕಡೆಗಿದೆ ಹೊರತು ಲೇಖಕರ ಚಿಕ್ಕಪ್ಪನ ಕಡೆಗಲ್ಲ ಮದುವೆಯಾದ ಗಂಡ ಓಡಿಹೋದ ಎಂಬ ಕಾರಣಕ್ಕೆ ದೇವಿ ತನ್ನ ಆಸೆಯನ್ನು ಪೂರೈಸಿಕೊಳ್ಳಲು ಬೇರೆ ದಾರಿ ಹಿಡಿಯುತ್ತಾಳೆ.

'ಸೆರೆ' ಎಂಬಲ್ಲಿಯು ಸಹಿತ ಈ ದೇವಿ ಸುಳಿದಾಡಿ ಕಾಮದ ಕಣ್ಣುಗಳಿಂದ ಒಲಿಸಿಕೊಳ್ಳುವ ಹಟದಿಂದ ಜಿಡೇರು ಎನ್ನುವಂತೇ ಅವನು ಹಾಕಿದ 'ಸೆರೆ'ಯೊಳಗೆ ಅವನೇ ಬಂದಿಯಾಗುವಂತೆ ಮಾಡುವಳು.

ಇಲ್ಲಿ ಬರುವಂತಹ ದೇವಿಯ ಲೈಂಗಿಕ ಇಚ್ಚೇ ಪಾಪದ್ದೊ ಕೆಟ್ಟದ್ದೊ ನ್ಯಾಯ-ನೀತಿ ಒಳಗೊಂಡದ್ದೇ ಎಂದು ವಿಭಾಗಿಸಲಾಗದು ಪತಿ ಓಡಿಹೋದ ಕಾರಣ ಅವಳು ಅದನ್ನು ಪಡೆಯುವ ಆತುರದಲ್ಲಿದ್ದಾಳೆ. ಅವಳಲ್ಲಿ ಯಾವುದೇ ಅಪರಾಧಿ ಪ್ರಜ್ಞೆಯೂ ಇಲ್ಲ ಆದರೆ ಇಂದಿನ ಸಮಾಜದಲ್ಲಿ ವಿವಾಹಪೂರ್ವ ಲೈಂಗಿಕ ಅಥವಾ ವಿವಾಹ ನಂತರ ಇರುವಂತ ಸಮಸ್ಯೆಗೆ ದೇವಿಯಂತೆ ದಾರಿ ತಪ್ಪಿದರೆ ಅಥವಾ ತಪ್ಪುತ್ತಲೇ ನಡೆದರೆ ಮುಂದೊಂದು ದಿನ ಸಮಾಜ ಅಡ್ಡ ದಾರಿ ಹಿಡಿರುತ್ತವೆ. ಆದ್ದರಿಂದ ಸಮಸ್ಯೆ ಸ್ವರೂಪವನ್ನು ಅರ್ಥೈಸಿಕೊಂಡು ಇದಕ್ಕೆ ಪರಿಹಾರವನ್ನು ಸಹ ಕಂಡು ಹಿಡಿರುವದು ಯೋಚಿತವಾಗಿದೆ.

'ಅಹಲ್ಯೆ'ಯನ್ನು ಗಮನಿಸಿದಾಗ ಮದುವೆಯಾದ ಮೊದಲ .ರಾತ್ರಿ. ಮನೆ ತೊರೆದ ಪತಿ ನಂತರ ಬೈರಾಗಿಯೊಡನೆ ಲೈಂಗಿಕ ಸಂಬಂಧವನ್ನು ಬೆಳೆಸಿದ ಅಹಲ್ಯೆ ಪಾಪ-ಪ್ರಜ್ಞೆಗೆ ಒಳಗಾಗಿ ಆತ್ಮಹತ್ಯೆಯಂತಹ ದುರಂತ ಕಾರ್ಯಕ್ಕೆ ಕೈ ಹಾಕುತ್ತಾಳೆ.

ಇನ್ನೂ ಒಂದು ಮುಖ್ಯವಾದ ಸಂಗತಿ ಎಂದರೆ ಇಂದಿನ ಯುವತಿಯರೂ ಎಷ್ಟೇ ಸುಶಿಕ್ಷಿತರಾಗಿದ್ದರೂ ಲೈಂಗಿಕ ಜ್ಞಾನದ ಕುರಿತು ಇರುವಂತಹ ಜ್ಞಾನ ತುಂಬಾ ಕಡಿಮೆ ಆ ವಿಷಯವನ್ನು ಚರ್ಚಿಸಲೂ ಆಗದೆ ತಾವು ನೋಡಿದ್ದು ಕೇಳಿದ್ದು ಮಾತ್ರ ಸರಿ ಎಂಬ ಸೂತ್ರಕ್ಕೆ ಬಂದು ಮುಟ್ಟುತ್ತಾರೆ. ತಿಳಿಯದೇ ಮದುವೆಗಿಂತಲೂ ಮೊದಲು ಲೈಂಗಿಕ ಸಂಬಂಧ ಬೆಳೆಯಿಸಿಕೊಂಡು 'ಗರ್ಭಿಣಿ'ಯಂದರೇನು ಎಂದು ಅರ್ಥೈಸಿಕೊಳ್ಳುವ ಮುನ್ನವೇ ತಾಯಿಯಾಗುತ್ತಾರೆ ಆದ್ದರಿಂದ ಇಂದಿನ ಕಾಲಕ್ಕೆ ಲೈಂಗಿಕ ಜ್ಞಾನದ ಕೊರತೆಯೂ ಸಹ ಒಂದು ಸಮಸ್ಯೆಯಾಗಿದೆ.

ಇಂದಿನ ಮುಖ್ಯ ಸ್ತ್ರೀ ಸಮಸ್ಯೆಗಳು ಮುಖ್ಯವಾಗಿ ಶೋಷಣೆ ವಿವಾಹದ ಸಮಸ್ಯೆಗಳು ಲೈಂಗಿಕ ಜ್ಞಾನದ ಕೊರತೆ ಮತ್ತು ವಿವಾಹ ಪೂರ್ವ ಮತ್ತು ನಂತರ ಲೈಂಗಿಕ ಸಮಸ್ಯೆಗಳು ಅತಿಯಾದ ಶಿಕ್ಷಣದಿಂದ ಮೌಲ್ಯಗಳ ಕೊರತೆ, ಶಿಕ್ಷಣವಿಲ್ಲದೇ ಸಾಮಾಜಿಕ ಜ್ಞಾನವೂ ಇಲ್ಲದೇ ಬದುಕುತ್ತಿರುವ ಸ್ತ್ರೀಯರು ಮೂಢ ನಂಬಿಕೆ ಮತ್ತು ಸಾಮಾಜಿಕ ಕಟ್ಟು ಪಾಡುಗಳು ವಿವಾಹದ ಬಗ್ಗೆ ಇರುವ ಅಜ್ಞಾನ.

ಈ ಎಲ್ಲಾ ಸಮಸ್ಯೆಗಳು ತನ್ನದೇ ಆದಂತಹ ವಿಸ್ತರತೆ ಒಳಗೊಂಡಿದ್ದು ಇವುಗಳನ್ನು ತಡೆಯಲು ಒಂದು ಉತ್ತಮ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಸ್ತ್ರೀಯರಿಗೆ ಇರುವ ಶಿಕ್ಷಣದ ಕೊರತೆ ಸಾಕಷ್ಟು ಸಮಸ್ಯೆಗಳನ್ನು ಪರಿಹರಿಸುತ್ತವಾದರೂ ಅವರಲ್ಲಿ ಇರುವಂತಹ ಸಮಸ್ಯೆಗಳು ಸಮಾಜವನ್ನು ತಪ್ಪು ದಾರಿಯಲ್ಲಿ ಒಯ್ಯುವಂತಾಗಬಾರದು.

ಛಲ :-

ಛಲದ ಬಗ್ಗೆ ಹೇಳಬೇಕಾದರೆ ಒಂದು ಮಾತು ನೆನಪಾಗುವುದು 'ಹೆಣ್ಣಿನಷ್ಟು ಛಲ ಕೂಡು ಇರುವೆಯಷ್ಟು ಬಲ ಕೂಡು' ಎಂಬುದು ಛಲವೆಂದಾಕ್ಷಣ ನಮ್ಮ ನೆನಪಿಗೆ ಬರುವುದು ಮಹಾಭಾರತದ ಖಳನಾಯಕನೆನಿಸಿಕೊಂಡ 'ದುರ್ಯೋಧನ'

'ಛಲ'ವು ಮನುಷ್ಯನ ಆಸೆ ಅತಿಯಾದಾಗಲೇ ಮೂಡುವಂತಹದಾಗಿದೆ 'ಛಲ'ಕ್ಕೆ ಆಸೆಯೇ ತಾಯಿ 'ಮೋಹವೇ' ತಂದೆ ಛಲ ಮನುಷ್ಯನನ್ನು ಆ ದಾರಿಗೆ ಎಳೆದುಕೊಂಡು ಹೋಗಲು ಹಚ್ಚುತ್ತದೆ ಹಗಲಿರುಳು ಅದನ್ನೇ ಯೋಚಿಸುವಂತೆ ಮಾಡುತ್ತದೆ ಮನದಲ್ಲಿ ಉಸಿರಲ್ಲಿ ಛಲದ ಚಿಂತೆಯೇ ಚಿಂತೆಯಾಗಿರುತ್ತದೆ.

ಛಲ ಎನ್ನುವುದು ನಮಗಂಟಿರುವ ಬಂಧನದ ವಿಮುಕ್ತಿಗೆ ಹೋರಾಟ ಅದು ಸಮಾಜದ ವಿರುದ್ಧ ಮನೆಯವರ ವಿರುದ್ಧ ಸಾಂಪ್ರದಾಯಗಳ ವಿರುದ್ಧ ಒಂದು ರೀತಿಯ ಹೋರಾಟ.

ಚಿತ್ತಾಲರ 'ಛಲ' ದಲ್ಲಿರುವಳು ಒಬ್ಬ ವಿಶಿಷ್ಟ ಹೆಣ್ಣು ಪದ್ದಕ್ಕ, ಈ ಪದ್ದಕ್ಕ ಳಿಗಿರುವುದು ಅತಿಯಾದ ಅಭಿಮಾನ ಅದೂ ತನ್ನ ಹಿರಿಯರ ನೆಲದ ಮೇಲೆ ಪತಿಯು ತನ್ನ ದಾಯಾದಿಗಳಿಗೆ ಹಿರಿಯರ ಆಸ್ತಿಯನ್ನು ಮಾರಿದರೆಂದು ಪದ್ದಕ್ಕ ಬೆಂಕಿಯನ್ನು ಹಚ್ಚಿ ಒಲೆ ಉರಿಯುವಂತೆ ಮಾಡಿ ಉರಿಯುತ್ತಿರುವ ಬೆಂಕಿಯ ಮೇಲೆ ಎರಡೂ ಹಸ್ತಗಳನ್ನು ಹಿಡಿದು "ಇದೋ ಈ ಬೆಂಕಿಯ ಸಾಕ್ಷಿಯಾಗಿ ಹೇಳುತ್ತೇನೆ ಕೇಳಿ ನೀವು ಈಗ ಮಾರಿದ ನೆಲವನ್ನು

ತಿರುಗಿ ಕೊಂಡು ಅದು ಸಾಧ್ಯವಾಗದಿದ್ದಲ್ಲಿ ಅದರ ಮಗ್ಗುಲಲ್ಲಿಯ ಜಾಗ ಕೊಂಡು ನಮ್ಮದೇ ಆದ ಮನೆ ಕಟ್ಟುವ ತನಕ ಈ ಬೆಂಕಿಯ ಮೇಲಿ ಬೇಯಿಸಿದ ಅನ್ನ ಉಣ್ಣಲಾರೇ" ಎಂದು ನೆಲಕ್ಕೆ ಅಪ್ಪಳಿಸಿದ್ದಳು.

ಹೆಂಡತಿಯ ಪ್ರತಿಜ್ಞೆ ಗಂಡನನ್ನೂ ವಿಕೋಪಕ್ಕೆ ತಳ್ಳಿತು ದಾಯಾದಿಗಳ ಮನೆ ಏರಿದಂತೆ ಹುಚ್ಚಿಯಂತಾದಳು ಮಗ ಸತ್ತ ಗಂಡ ಆತ್ಮಹತ್ಯೆ ಮಾಡಿಕೊಂಡ ಇನ್ನೊಬ್ಬ ಮಗ ಮುಂಬಯಿಗೆ ಹೋಗಿ ಹಣ ಕಳಿಸಿ ಅವಳಿಗೆ ಮನೆ ಕಟ್ಟಿಸಿಕೊಟ್ಟ ಅದರಿಂದ ಸಂತೋಷವಾದರೂ ಬಹಳ ದಿನ ಇರಲಿಲ್ಲ ತನ್ನ ದಾಯಾದಿಗಳ ಬಳಿಯೇ ಕೆಲಸ ಅವರೇ ಹಣ ಕೊಟ್ಟಿದ್ದು ಎಂದು ತಿಳಿದ ಮೇಲಿ ಅವರ ಸಾಲ ತೀರಿಸೆಂದು ಗಂಟು ಬಿದ್ದಳು ಇಲ್ಲದಿದ್ದರೆ ಈ ಮನೆಯಲ್ಲಿಯೇ ಬೆಂಕಿ ಹಚ್ಚಿಕೊಂಡು ಸಾಯುತ್ತೇನೆ. ಎನ್ನುವಾಗ ದಾಯಾದಿಗಳಿಗಾಗಿ ಜೀವ ಕೊಡಲು ಸಿದ್ಧ ಎಂಬಂತಿತ್ತು ಅವಳ ಛಲ.

ದಾಯಾದಿಗಳ ಹಣದಿಂದ ತಂದು ಕಟ್ಟಿದ್ದ ಮನೆಯಲ್ಲಿ ಪ್ರವೇಶವಿಲ್ಲದೆ ಅನ್ನ ಬೇಯಿಸದೇ ಹಾಗೇ ಕಾಲ ಕಳೆಯುತ್ತಿದ್ದು ಆ ಹಣ ತೀರಿಸದಿದ್ದರೆ ಮಗನಿಗೆ ಸುಡುವ ಅಧಿಕಾರವನ್ನೂ ಕೊಡದೆ ಈ ಮನೆಯಲ್ಲಿ ನಾನೇ ಬೆಂಕಿ ಹಚ್ಚಿಕೊಂಡು ಸಾಯುವೆ ಎಂದು ಸುದ್ದಿ ಕಳಿಸಿದ್ದಳು.

ಕಾಮ :

ಚಿತ್ತಾಲರ ಕಥೆಗಳಲ್ಲಿ ಕಾಮವು ಎದ್ದು ಕಾಣದಿದ್ದರೂ ಅಲ್ಲಲ್ಲಿ ಸುಳಿಯುತ್ತಾ ಬಂದಿದೆ ಮೌಲ್ಯವನ್ನು ಒಪ್ಪಿಕೊಂಡು ಸಮಾಜದೊಂದಿಗೇ ಬದುಕುತ್ತಿರುವ ಉತ್ತುಮಿ ವೇಶ್ಯೆಯಾದರೂ ಶ ಇಲ್ಲಿ ಅದಕ್ಕೆ ಹೆಚ್ಚಿನ ಮಹತ್ವವಿಲ್ಲ. ಆದರೆ ಇಲ್ಲಿ ಕಾಮ ಎಂದಾಕ್ಷಣ ನೆನಪಿಗೆ ಬಂದು ನಿಲ್ಲುವವಳ್ಳು 'ದೇವಿ' ಹಾವು, ಸೆರೆ ಮುಂತಾದ ಕತೆಗಳಲ್ಲಿ ಹಾವಿನಂತೆಯ ಸರಸರನೆ ಹರಿಯುತ್ತಾ ಕತೆಯ ತುಂಬೆಲ್ಲಾ ಸುಳಿದಿದ್ದಾಳೆ.

ಹಾವು, 'ಸೆರೆ' ಕತೆಗಳಲ್ಲಿ ಬರುವಂತಹ ದೇವಿ ಒಬ್ಬ ಕೆಲಸದ ಹುಡುಗಿ ಇವಳನ್ನು ಬದುವೆಯಾದ ಸ್ವಲ್ಪ ದಿನಗಳಲ್ಲಿ ಗಂಡ ಇವಳನ್ನು ತೊರೆದು ಹೊರಟು ಹೋದ ಆದರೆ ಇದರ ಬಗ್ಗೆ ದೇವಿಗೆ ಯಾವುದೇ ಭಾವನೆಗಳಿಲ್ಲ. ಒಂದು ವೇಳೆ ಇದ್ದರೂ ಸಹ ಅದನ್ನು ಸ್ಪಷ್ಟ ಪಡಿಸುವುದಿಲ್ಲ, ಕೇವಲ ತನ್ನ ಒಡೆಯನನ್ನು ಕೀಟಲೆ ಮಾಡುತ್ತಾ ಅವನನ್ನು ಪ್ರಚೋದಿಸುತ್ತಾಳೆ. ಇಲ್ಲಿ ಅವಳಿಗೆ ತಾನು ತಪ್ಪು ಮಾಡುತ್ತಿರುವೆ ಇಲ್ಲವೆ ತಾನು ಮಾಡುತ್ತಿರುವದು ಸರಿಯಲ್ಲ ಎಂಬ ಬಗ್ಗೆ ಯಾವ ರೀತಿಯ ಕೀಳುರಮೆಯೂ ಕಾಡುವುದಿಲ್ಲ ಅಥವಾ ಆ ವಿಷಯದಲ್ಲಿ ಅವಳು ತಲೆ ಕೆಡಸಿಕೊಳ್ಳುವದಿಲ್ಲ.

'ಸೆರೆ' ಕತೆಯ ನಾಯಕ 'ಬರ್ಮಚಾರಿ' ಇವನೊಬ್ಬ ವಿಶಿಷ್ಟಕಾಲ ಸ್ಥಳ, ಸಂಸ್ಕೃತಿ ಸಂಬಂಧವುಳ್ಳ ವ್ಯಕ್ತಿಯಾಗಿದ್ದರೂ ವ್ಯಕ್ತ್ಯಾತೀತವಾದ ಇಚ್ಛಾಶಕ್ತಿ ಪುರುಷತ್ವಗಳ ಸಂಕೇತವಾಗಿದ್ದಾನೆ. ದೇವಿಗೂ ತನ್ನದೇ ಆದ ಇತಿಹಾಸವಿದೆ ಆದರೆ ಇವಳು ಕತೆಗಳಲ್ಲಿ ಕಾಣಿಸಿಕೊಳ್ಳುವದು ಸ್ತ್ರೀತ್ವದ ಪ್ರಕೃತಿಯ ಸಂಕೇತವಾಗಿದೆ.

ಬರ್ಮಚಾರಿ ತನ್ನ ತಾಯಿ ಜಿಜ್ಜಿದ ಮದುವೆಯ ಪುರಾಣ ಕೇಳಿ ಕಿಡಿಕಿಡಿಯಾಗುತ್ತಾನೆ. ಆದರೆ ಅವನ ಬ್ರಹ್ಮಚರ್ಯದ ಗಂಟು ಈ ಮೊದಲೇ ಸಡಿಲಾಗಿರುತ್ತದೆ. ದೇವಿಯ ಬತ್ತಲೆ ತೊಡೆಗಳು ಅವನ ಸುಪ್ತಕಾಮವನ್ನು ಈಗಾಗಲೇ ಕೆರಳಿಸಿರುತ್ತವೆ. ಹಳೆಯ ಮನೆಗೆ ಬಂದು ದೇವಿಯನ್ನು (ಅವಳ ಬತ್ತಲೆ ಮೊಲೆಗಳನ್ನು) ನೋಡಿದಾಗ ಅವಳನ್ನು ಮಾತನಾಡಿಸುವ ಧೈರ್ಯ ಕೂಡ ಅವನಲ್ಲಿ ಉಳಿದಿರುವುದಿಲ್ಲ. ಆದರೆ ದೇವಿ ಮಾತ್ರ " ಇದೇ! ಹೊನ್ನಪ್ಪಚಾರಿಯ ಕೆಲಸ ಇವರೇ ಮಾಡ್ತಾರೋ ನೋಡ್ತೆ. ಕದಕ್ಕೆ ಮೊಳೆ ಹೊಡೆಯುವುದೇ ಇದ್ರೆ ಹೊರಗಿನಿಂದ ಹೊಡೆಯಲು ಆಗುತ್ತಿರಲಿಲ್ಲವೆ? ಹೀಗೆ ಕತ್ತಲೆಯ ಹೊತ್ತಿಗೆ ಜಿಟ್ಟಮನೆಯನ್ನು ಹೊಕ್ಕಬೇಕಿತ್ತೆ?" ಎಂದು ಮತನಾಡಿಸುತ್ತಲೇ ಇರುತ್ತಾಳೆ ಮನೆಯ ಒಳ ಹೊಕ್ಕು ಅಲ್ಲಿನ ಕತ್ತಲೆಯಲ್ಲಿ ಮಂಗನನ್ನು ಸೋದರತ್ತೆಯ ಭೂತವೆಂದು ಭಾವಿಸಿ ತನಗೇ ಗೊತ್ತಿಲ್ಲದಂತೆ ದೇವಿಯ ಹೆಸರನ್ನು ಕೂಗಿದಾಗಲೇ ಅವನ ಸೋಲು ಖಂಡಿತವಾಗಿರುತ್ತದೆ. ದೇವಿ ಮೊದಲಿನಿಂದಲೂ ತನ್ನ ಗೆಲುವಿನ ತಯ್ಯಾರಿಯಲ್ಲಿಯೇ ಇರುತ್ತಾಳೆ. ಪೊಳ್ಳು ಇಚ್ಛಾಶಕ್ತಿಯನ್ನು ನಂಬಿ ಬಾಗಿಲಿಗೆ ಪಟ್ಟಿ ಹೊಡೆದು

ತನ್ನನ್ನೇ ಸೆರೆಯಲ್ಲಿಟ್ಟುಕೊಂಡ ಅವನಿಗೆ ದೇವಿ ಮೂಲಕ ಬಿಡುಗಡೆ ದೊರೆಯುತ್ತದೆ.

ಆಗಿನಿಂದಲೂ ಭದ್ರವಾಗಿ ಮುಚ್ಚಿಕೊಂಡ ಕದಗಳು ಮೆಲ್ಲನೆ ತೆರೆದಿದ್ದವು ಗಾಳಿಯಾಡದೇ ಉಸಿರುಕಟ್ಟುವ ಕತ್ತಲೆ ತುಂಬಿದ ಅಡುಗೆ ಮನೆಯಲ್ಲಿ ಹೊರಗಿನ ತಂಪು, ಸ್ವಚ್ಛಗಾಳಿಯ ಸುಳಿ ಬಂದಿತು. ಅದರ ಹಿಂದೆಯೇ ದೇವಿ ಒಳಗೆ ಬಂದಲು.

" ಆಗ ನೀವು ಕಿಡಿಕಿಯೊಳಗಿಂದ ಕರೆದಾಗಲೇ ನನಗೆ ತಿಳಿದಿತ್ತು ಒಡೆಯಾ" ಎನ್ನುತ್ತಾ ತನ್ನ ಹಿಂದೆಯೆ ಕದ ಮುಚ್ಚಿಕೊಂಡಳು.

ಇನ್ನು ' ಹಾವು' ಕತೆಯಲ್ಲಿಯೂ ದೇವಿ ಸುಳಿದಾಡಿದ್ದಾಳೆ ಇಲ್ಲಿ ಕಾಮದ ಸಂಕೇತವಾದ ಹಾವು ಕೇಂದ್ರ ಪ್ರತೀಕ ಅದಕ್ಕೆ ಹೆದರುವ ' ಸಣ್ಣ ಒಡೆದೀರು; ಚಿಕ್ಕಮ್ಮ ಎಲ್ಲರೂ ಕಾಮದ ಬಗ್ಗೆ ಭಯದ ನಕಾರದ ಧೋರಣೆಗಳನ್ನು ಹೊಂದಿರುತ್ತಾರೆ. ದೇವಿಯೊಬ್ಬಳು ಮಾತ್ರ ಅದನ್ನು ಸಹಜಮೆಯ ಒಪ್ಪಿಕೊಳ್ಳುತ್ತಾಳೆ.

ಇಲ್ಲಿ ಎಲ್ಲರೂ ಕಾಮಕ್ಕೆ ತಮ್ಮದೇ ಆದಂತಹ ಅರ್ಥವನ್ನು ಹೊಂದಿದ್ದಾರೆ. ಕಾಮದಲ್ಲಿ ಜೀವಂತಿಕೆ ಇದೆ. ಲೇಖಕರ ಚಿಕ್ಕಪ್ಪ ಪತ್ನಿಯನ್ನು ಬಿಡಲಾಗದೆ ಬೇರೆ ಒಪ್ಪಲಾರದೆ ಅವಳೊಂದಿಗೇ ಸುಖ ಅನುಭವಿಸಲು ಹಾತೊರೆಯುತ್ತಿದ್ದರೆ ಚಿಕ್ಕಮ್ಮನ ವಿಷಯದಲ್ಲಿ ಕಾಮವೊಂದು ಅತೀ ನೋವು ಕೊಡುವ ದುರಂತವೇ ಆಗಿದೆ. ಹೊಕ್ಕಳ ಸುತ್ತ ಏಳುತ್ತಿರುವ ಅಸಾಧ್ಯ ನೋವಿನ ಕಾರಣದಿಂದ ಅತ್ಯಂತ ನೋವು ಅನಿಭವಿಸುತ್ತಿದ್ದಾಳೆ. ತನ್ನೊಂದಿಗೆ ಸುಖಪಡೆಯಲು ಹವಣಿಸುತ್ತಿರುವ ಪತಿಯನ್ನು ಹೇಗಾದರೂ ಮಾಡಿ ದೇವಿಯೊಂದಿಗೆ ಒಪ್ಪಿಸಲು ಹೋಗುತ್ತಾಳೆ. ತನ್ನ ಪತಿಯ ಆಸೆ ಪೂರೈಕೆಗಾಗಿ ತನ್ನ ಸಹಿಸಲಸಾಧ್ಯವಾದ ನೋವಿನ ಕಾರಣದಿಂದಾಗಿ ತನ್ನೆಲ್ಲಭಾವನೆಗಳನ್ನು ಒತ್ತಿಯಿಟ್ಟು-ಬಲಿಕೊಟ್ಟ ದೇವಿಯನ್ನು ಕರೆತಂದಿದ್ದಾಳೆ. ಆದರೆ ದೇವಿಯ ಮನಸ್ಸಿನಲ್ಲಿರುವುದು ಬೇರೆಯ ಅವಳಿಗೆ ಊರಿಂದ ಬಂದಿದ್ದ 'ಸಣ್ಣ ಒಡದೀರು' ಮನ ತುಂಬಿದ್ದ ಅವನನ್ನು ಪಡೆಯಲು ಹಾತೊರೆಯುತ್ತಿದ್ದಳು ಅವಳ ಹಾವ-ಭಾವ ಗಮನಿಸಿದ ಸಣ್ಣ ಒಡೆದೀರು ತಪ್ಪಿಸಿಕೊಳ್ಳಲು ಹವಣಿಸುತ್ತಿದ್ದರು.

ಇಲ್ಲಿ ಹಾವು ಎನ್ನುವುದು ಕಾಮದ ಸಂಕೇತ ಅದು ಎಲ್ಲರನ್ನೂ ಎಲ್ಲ ರೀತಿಯಲ್ಲೂ ಸುತ್ತುತ್ತಾ ಹೋಗುತ್ತದೆ.

ಮುಖಾಮುಖಿ :

ಪುರುಷ-ಸ್ತ್ರೀಯ ಮುಖಾಮುಖಿ ಬದುಕಿನುದ್ದಕ್ಕೂ ಅತ್ಯಂತ ಸಾಮಾನ್ಯವಾಗಿರುವಂತಹದು. ನೋವು-ಶೋಷಣೆ, ಪ್ರತಿರೋಧ ಇವುಗಳ ನಡುವೆಯೂ ಸ್ತ್ರೀ ಪುರುಷರ ಮುಖಾಮುಖಿಯಾಗುತ್ತದೆ.

ಪ್ರೇಮ, ಕಾಮ, ದ್ವೇಷ, ಛಲ, ಇವೆಲ್ಲಗಳನ್ನು ಲೇಖಕರು ನವಿರಾಗಿ ಎಳೆದು ಪುರುಷ-ಸ್ತ್ರೀ ಮುಖಾಮುಖಿ ಮಾಡಿದ್ದಾರೆ.

ಛಲ, ಕತೆಯಲ್ಲಿ ಬರುವಂತಹ ಪದ್ದಕ್ಕ ತಂದೆಯ ದಿವಸಕ್ಕೆಂದು ಬಂದಂತಹ ಲೇಖಕರನ್ನು ಭೇಟಿಯಾಗುತ್ತಾಳೆ. ಮೊದಲು ಪದ್ದಕ್ಕರ ಭೇಟಿಯಾದ ನೆನಪುಗಳನ್ನು ಮಾಡಿಕೊಂಡ ಲೇಖಕರು ಅವಳ ಬೆಂಕಿಯ ಮೇಲೆ ಕೈಯಿಟ್ಟು ತನಗೆ ಬೇಕಾದ ನೆಲ ಪಡೆಯುವವರೆಗೆ ತಾನು ಬೇಯಿಸಿದ ಆಹಾರ ಉಣುವದಿಲ್ಲವೆಂಬ ಪ್ರತಿಜ್ಞೆ ಮಾಡಿರುತ್ತಾಳೆ.

ಎರಡನೆಯ ಸಲ ಮುಖಾಮುಖಿಯಾದಾಗ ಒಬ್ಬ ಮಗನನ್ನು, ಪತಿಯನ್ನು ಕಳೆದುಕೊಂಡು ಪದ್ದಕ್ಕ ವಿಧವೆಯಾಗಿದ್ದಾಳೆ, ಆದರೆ ಅವಳು ತನ್ನ ಛಲವನ್ನು ಗುರಿಯನ್ನು ಮುಟ್ಟಿದ್ದಾಳೆ ಆದರೂ ಅವಳಲ್ಲಿ ತನ್ನ ಮಗ ದಾಯಾದಿಗಳ ಹಣ ಪಡೆದನೆಂಬ ಸಂಶಯ ಬಂದಿದೆ ಆದ್ದರಿಂದಲೇ ಅವಳು ಲೇಖಕರನ್ನು ಮನೆಗೆ ಬರ ಹೇಳಿದ್ದಾಳೆ.

ಲೇಖಕರನ್ನು ಸ್ವಾಗತಿಸುತ್ತ ಪದ್ದಕ್ಕ ಹಿಂದಿನ ಘಟನೆಗಳಿಗೆ ಒತ್ತು ಕೊಡುತ್ತಾಳೆ. ತಾನು ಪತಿ-ಮಗ-ಆಹಾರ(ಬೇಯಿಸಿದ) ಎಲ್ಲವನ್ನು ಕಳದುಕೊಂಡು

ಮನೆಯನ್ನು ಛಲದಿಂದ ಪಡೆದಿದ್ದಾಳೆ ಆದರೆ ಮಗ ದಾಯಾದಿಗಳಿಂದ ಹಣ ಪಡೆದು ಇವಳಿಗೆ ಕಳುಹಿಸಿದ್ದಾನೆ. ಆದ್ದರಿಂದ ಮಗನಿಗೆ ಆ ಹಣವನ್ನು ಮರಳಿ ಕೊಡುವಂತೆ ಹೇಳೆಂದು ಲೇಖಕರಿಗೆ ಹೇಳುತ್ತಾಳೆ. ಸಾಲ ತೀರುವ ತನಕ ಗೃಹಪ್ರವೇಶ, ಬೆಲೆಹಚ್ಚುವದು ಎರಡೂ ನಿಷೇಧಿಸಿದ್ದಾಳೆ ಮಗನೂ ಲೇಖಕರೂ ಒಂದೇ ಊರಿನಲ್ಲಿರುವವರು ಎಂದರಿತ ಪದ್ದಕ್ಕ ಯಾವುದರ ಮೇಲೆ ಅಟ್ಟ ಅನ್ನಕ್ಕೆ ನಾನು ಈ ವರೆಗೆ ಎರವಾದೆನೋ ಅದೇ ಬೆಂಕಿಯಲ್ಲಿ ಈ ಮನೆಯನ್ನು ಸುಡುತ್ತ ನನ್ನನ್ನೂ ಸುಟ್ಟುಕೊಳ್ಳುತ್ತೇನೆ ನನ್ನ ಹಣ ಸುಡುವ ಅಧಿಕಾರ ಸಹ ಅವನಿಗಿಲ್ಲ.

ಎಂದ ಮಾತು ಕೇಳಿದ ಮೇಲೆ ಲೇಖಕರಿಗೆ ರಾತ್ರಿಯಲ್ಲ ಮುಖಾಮುಖಿ ಕತೆಯಲ್ಲಿ ಇಂದಿರಕ್ಕೆ ಮತ್ತು ಲೇಖಕರ ಸಂಬಂಧ ಕೇವಲ ಎರಡು ಸಲದ ಭೇಟಿಯಲ್ಲಿ ಮುಗಿದರೂ ಆದ ವಿಷಯಗಳ ಅಂತರ ಬಹಳಷ್ಟು ಲೇಖಕರು ಹಳ್ಳಿಬಿಟ್ಟು ನಗರಸೇರಿದವರು ಅವರು ತಮ್ಮ ಬಾಲ್ಯದಲ್ಲಿ ಮುಡಿದ ಒಂದು ಪಾಪಪ್ರಜ್ಞೆಯ ಬಗ್ಗೆ ಚಡಪಡಿಸುತ್ತಿದ್ದಾರೆ.

ಇಂದಿರಕ್ಕ ಇಲ್ಲಿ ಮದುವೆಯಾದದ್ದು ಒಬ್ಬ ಷಂಡ ಪತಿಯನ್ನು ಆ ಕಾರಣ ಮದುವೆಗೆ ಮೊದಲೇ ಪ್ರೀತಿಸಿದ ಪ್ರಿಯಕರನನ್ನು ಸೇರಲಿಚ್ಛಿಸುತ್ತಾಳೆ ಪ್ರಿಯಕರನೂ ಅವಳನ್ನು ಕರೆದುಕೊಂಡು ಹೋಗುವೆ ಎಂದೂ ಹೇಳಿರುತ್ತಾನೆ. ಆದರೆ ಕರೆದು ಬರುವುದೇ ಇಲ್ಲ ಇಲ್ಲಿ ಮೋಸಗಾರನೆಂದು ನೊಂದು ಮೌನವಾಗುತ್ತಾಳೆ. ಆದರೆ ಅವನು ಬಂದು ಪತ್ರ ನೀಡಿದ್ದು ಬಾಲಕರಾಗಿದ್ದ ಲೇಖಕರು ಅದನ್ನು ಹರಿದು ಹಾಕಿದ್ದು ಇವಳಿಗೆ ತಿಳಿಯದು ಆದರೆ ಲೇಖಕರು ಅವಳ ಮೇಲೆ ಬರೆದ ಕತೆಯನ್ನು ಓದಿದ ಮೇಲೆ ಇಂದಿರಕ್ಕ ಮೊದಲ ಬಾರಿ ಭೇಟಿಯಾಗುತ್ತಾರೆ.

ಇಂದಿರಕ್ಕ ನೊಡನೆ ಅನಿರೀಕ್ಷಿತವಾಗಿ ಜರುಗುವ ಎರಡು ಭೇಟಿಗಳಲ್ಲಿ ಅವಳ ಜೀವನ ಬಂಜರವಾಗುವುದಕ್ಕೆ ಅವಳಲ್ಲಾದ ಭಯಾನಕ ಬದಲಾವಣೆಗೆ ತಾನು ಸಣ್ಣವನಿದ್ದಾಗ ಇಂದಿರಕ್ಕನ ಪ್ರೇಮಿ ಅವಳಿಗೆ ಮುಟ್ಟಿಸಲು ಕೊಟ್ಟ ಪತ್ರವನ್ನು ಹರಿದು ಹಾಕಿದುದೇ ಕಾರಣ ಎಂದು ಅವನಿಗೆ ಖಾತ್ರಿಯಗುತ್ತದೆ.

ಆದರೆ ಇಂದಿರಕ್ಕನೊಡನೆ ಮುಖಾಮುಖಿ ಮುಗಿಯುವದಿಲ್ಲ ಅವಳ ಸಾವಿನ ಹಿಂದೆಯೇ ಎಷ್ಟೋ ವರ್ಷಗಳಿಂದ ಬೇಪತ್ತೆಯಾದ ಬಹುಶಃ ಆತ್ಮಹತ್ಯೆ ಮಾಡಿಕೊಂಡ ಅವಳ ಪ್ರೇಮಿ, ಪೊತ್ತೆ ಮೀಸೆಯ ಮನುಷ್ಯನೊಂದಿಗೆ ಮತ್ತೊಂದು ಮುಖಾಮುಖಿ ಆರಂಭವಾಗುತ್ತದೆ.

ಇಲ್ಲಿ ಬರುವ ಘಟನೆಗಳು ಪುರುಷ-ಸ್ತ್ರೀಯರ ಮುಖಾಮುಖಿಯಾಗುತ್ತದೆ ಇದು ಗತಕಾಲದ ಘಟನೆಗಳನ್ನು ವರ್ತಮಾನದೊಂದಿಗೆ ಸಮೀಕರಿಸಿ ಭವಿಷ್ಯವನ್ನು ನೋಡುವುದಾಗಿದೆ.

ಕಥಾವಸ್ತುವಿನ ಪರಿಸರ ಮತ್ತು 'ಸ್ತ್ರೀಸಂವೇದನೆ'

ಚಿತ್ತಾಲರ ಕತೆಗಳನ್ನು ಓದುವಾಗ, ವಿಮರ್ಶಿಸುವಾಗ ಈ ಹಿನ್ನಲೆಯ ಅರಿವಿರುವುದು ಅತ್ಯಂತ ಅವಶ್ಯಕವಾಗಿದೆ. ಅವರಿಗೆ ಸ್ವಂತದ ಭಾವಪ್ರಪಂಚವಿದ್ದಂತೆ ವೈಚಾರಿಕ ಪ್ರಪಂಚವೂ ಇದೆ. ಆದರೆ, ಅವರ ಬೌದ್ಧಿಕ ಅಥವಾ ತಾತ್ವಿಕ ಕಾಳಜಿಗಳು ಕತೆಯ ಚೌಕಟ್ಟನು ಬಿಟ್ಟು ಎಂದೂ ಹೊರಚೆಲ್ಲುವುದಿಲ್ಲ.

'ಬೊಮ್ಮಿಯ ಹುಲ್ಲು ಹೊರೆ' ಉತ್ತುಮಿ, ಅಬೋಲೀನ ಮುದಿ ಹುಚ್ಚು 'ಕಳ್ಳ ಗಿರಿಯಣ್ಣ' ಮೊದಲಾದ ಕತೆಗಳಲ್ಲಿ ಚಿತ್ತಾಲರು ತೋರಿಸುವ ಸಮಾಜ ಸಂಪ್ರದಾಯಬದ್ಧವಾದ ಸಾವಯವ ಸಮಾಜ. ಈ ಸಮಾಜವನ್ನು ಅತ್ಯಂತ ಕಾಳಜಿಯಿಂದ ಸತ್ಯನಿಷ್ಠೆಯಿಂದ ತಿಳುವಳಿಕೆಯಿಂದ ಅವರು ಸೃಷ್ಟಿಸುತ್ತಾರೆ. ಆದರೆ ಈ ಸಮಾಜದ ಮೌಲ್ಯ ವ್ಯವಸ್ಥೆಯನ್ನಾಗಲಿ ವರ್ಗವ್ಯವಸ್ಥೆಯನ್ನಾಗಲಿ ಗಂಭಿರವಾಗಿ ಪ್ರಶ್ನಿಸುವ ಯಾವ ಕ್ರಿಯೆಯೂ ಇಲ್ಲಿ ನಡೆಯುವುದಿಲ್ಲ. ಉತ್ತುಮಿ ಸೂಳೆಯಾದರೂ ಬಹಿಷ್ಕೃತೆಯಲ್ಲ. 'ನಾವು ಕೀಳು ಜನ, ಕೆಟ್ಟ ಜನ ನಮ್ಮಂತವರ ಬಾಗಿಲಲ್ಲಿ ನೀನು ಕಾಲಿಡಕೂಡದು!' ಎಂದು ಹೇಳುವಾಗ ಉತ್ತುಮಿ ತಾನು ಹೊಂದಿಕೊಂಡ ಸಮಾಜದ ಮಾನದಂಡಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುತ್ತಾಳೆ. ಗಿರಿಯಣ್ಣ ಕಳ್ಳ ಕುಂಬಳ ಕಾಯಿ ಕಳವು ಮಾಡುತ್ತಾನೆ ಆದರೆ ' ಅದು ದೇವರಿಗೆ ಬಿಟ್ಟ ಕಾಯಿ ಯಾರಿಗೂ ಮಾರಬೇಡ' ಎಂದು 'ತಾಯಿ' ಉಪದೇಶ ಮಾಡಿದಾಗ ಕಳುವಿನಲ್ಲಿ ಕಾಯನ್ನು ವಾಪಸ್ಸು ಮಾಡುತ್ತಾನೆ.

'ಅಬೋಲಿನ' ಕತೆಯ ಮನವೇಲ ಮೋಸಗಾರ ಒಂದು ಮುಗ್ಧ, ನಿಷ್ಪಾಪೀ ಜೀವದ ದುರಂತಕ್ಕೆ ಕಾರಣನಾಗುತ್ತಾನೆ. ಆದರೆ ಅವನ ದುಷ್ಟತನ ವೈಯಕ್ತಿಕವಾಗಿದೆಯೇ ಹೊರತು ಸಾಮಾಜಿಕ ವ್ಯವಸ್ಥೆಗೆ ಸಂಬಂಧಪಟ್ಟದಲ್ಲ. ಸಮಾಜ ಅವನನ್ನು ಶಿಕ್ಷಿಸುವುದಿಲ್ಲ. ಅಬೋಲೀನಳು ಆತ್ಮಹತ್ಯೆ ಮಾಡಿಕೊಳ್ಳುವುದು ಪಾಪಭಾವನೆಯ ಒತ್ತಡದಲ್ಲಿ ಅಲ್ಲ; ಸಮಾಜದ ನಿಂದನೆಗೆ ಭಯಪಟ್ಟು ಎನ್ನುವುದನ್ನು ನಾವು ಗಮನಿಸಬಹುದು ಸಮಾಜದಲ್ಲಿ ತಲೆದೋರುವ ಒತ್ತಡಗಳು, ತಾಕಲಾಟಗಗಳು ಮಹಿಳೆಯನ್ನು ದುರಂತಕ್ಕೆಳೆಸಿವೆ.

ಆದರೆ 'ಬೊಮ್ಮಿಯ ಹುಲ್ಲು ಹೊರೆ'ಯಲ್ಲ ಪಾರ್ವತಮ್ಮ ಮತ್ತು ಬೊಮ್ಮಿ ಇವರಲ್ಲಿ ನಡೆಯುವ ಸಂಘರ್ಷ ಗುಂಡಾಭಟ್ಟರ ಮಡಿಯಲ್ಲಿ ಗುಂಡಾಭಟ್ಟರು ಮತ್ತು ಆಗೇರ ಕೂತ ಇವರ ನಡುವೆ ತಲೆದೋರುವ ಬಿಕ್ಕಟ್ಟು, ಮೇಲುವರ್ಗದ ಸುಶೀಲಕ್ಕ ಕೆಳವರ್ಗದ ಮಂಜುನಾಥಶೆಟ್ಟಿಯನ್ನು ಶೋಷಿಸುವ ಪ್ರಕಾರ ಇವುಗಳಿಗೆ ವರ್ಗೀಯ ಹಿನ್ನಲೆ ಇದ್ದರೂ ಪಾರ್ವತಮ್ಮನ ಗೆಲುವಿಗಾಗಲಿ. ಭಟ್ಟರ ಮತ್ತು ಶೆಟ್ಟಿಯ ಸೋಲಿಗಾಗಲಿ ಸಾಮಾಜಿಕ ದೃಷ್ಟಿಯಿಂದ ಸಾಂಕೇತಿಕ ಮಹತ್ವ ಬರುವುದಿಲ್ಲ. ಯಾಕೆಂದರೆ ಚಿತ್ತಾಲರಿಗೆ ಈ ಸಮಾಜದ ವ್ಯಕ್ತಿಯಲ್ಲಿ ಇರುವುದು ಮಾನವೀಯ ಆಸ್ಥೆ, ಸಹಾನುಭೂತಿ ಮಾತ್ರ, ಉತ್ತುಮಿಸೂಳೆ ಆದರೆ ಅವಳು ಕೂಡ ತಾಯ ಹೃದಯವನ್ನು ಹೊಂದಿದ ಹೆಣ್ಣು.

ಈ ಕತೆಗಳ ನಿವೇದಕರ ತಾತ್ವಿಕ ದೃಷ್ಟಿಕೋನ ಅವರು ಒಪ್ಪಿಕೊಳ್ಳುವ ಮೌಲ್ಯಗಳು ಸಾಂಪ್ರದಾಯಕವಾಗಿದ್ದು ಬಹಳ ಸರಳ ರೀತಿಯಲ್ಲಿ ಇಲ್ಲಿನ ಪ್ರಶ್ನೆಗಳು ಬಿಡಿಸಲ್ಪಡುತ್ತವೆ.

'ಮುದಿಹುಚ್ಚು' ಕತೆಯಲ್ಲಿ- ಹೊಸದಾಗಿ ಬಂದ ಐಶ್ವರ್ಯ ಸ್ವಭಾವದಲ್ಲಿ ತುಂಬಿದ ಆಸೆ ಇವು ಸುಶೀಲಕ್ಕನನ್ನು ಕುರುಡುಗೊಳಿಸುತ್ತವೆ. ಅವಳಲ್ಲಿ ಮಂಜುನಾಥಶೆಟ್ಟಿಯ ಹೃದಯವಂತಿಕೆಯನ್ನು ಗುರುತಿಸುವ ಶಕ್ತಿಯಿಲ್ಲ. ಅಷ್ಟೇ ಅಲ್ಲ ಅವನ ಒಳ್ಳೆತನದ ಲಾಭ ಪಡೆದು ಅವನನ್ನೇ ಅಪವಾದಕ್ಕೆ ಗುರಿಪಡಿಸುವ ಕುಹಕತನವೂ ಇದೆ.

ಆದರೆ 'ಅಬೋಲಿನ' ಕತೆಯಲ್ಲಿ ಈ ಕತೆಗಿಂತ ಹೆಚ್ಚಿನ ಸಂಕೀರ್ಣತೆ ಇದೆ. ಕತೆಯ ಸಾಮಾಜಿಕ ಆವರಣ ಕೂಡ ಸಾಂಪ್ರದಾಯಕವೇ ಅದರಲ್ಲಿಯೂ ಹೆಚ್ಚಿನ ಮುಖ್ಯ ಪಾತ್ರಗಳೆಲ್ಲ ಕ್ರಿಶ್ಚಿಯನ್ ಪಾತ್ರಗಳಾದ್ದರಿಂದ, ಅವುಗಳಲ್ಲಿ ಹೆಚ್ಚಿನ ನಿರ್ದಿಷ್ಟತೆ ಮತ್ತು ಏಕರೂಪತೆ ಕಂಡಬರುತ್ತದೆ. ಇಲ್ಲಿಬರುವಂತಹ ನಿರಪರಾಧೀ ಜೀವದ ದುರಂತ ಕೇವಲ ವಯಕ್ತಿಕ ಸ್ವರೂಪದ್ದಿರದೆ, ಸಮಾಜಿಕ ಮುಖವನ್ನು ಹೊಂದಿದೆ. ಅಬೋಲೀನಳ ಜೀವನದಲ್ಲಿ ದುರಂತ ನಡೆಯುವುದಕ್ಕೆ ಅವಳ ಮುಗ್ಧತೆ ಕಾರಣವಿದ್ದಂತೆ, ಮನವೇಲನ ದುಷ್ಟತನ, ಅವನು ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸುವ ಚರ್ಚಿನ ಮೌಢ್ಯ, ತಂದೆ ಕೌತಾನನ ಅಸಹಾಯಕತೆ ಎಲ್ಲವೂ ಒಂದಿಲ್ಲೊಂದು ರೀತಿಯಿಂದ ಕಾರಣವಾಗುತ್ತವೆ. ಇದು ಅಲ್ಲದೆ ಇದು ಅಬೋಲೀನಳ ದುರಂತದ ಕತೆ ಇದ್ದಂತೆ. ಅವಳ ಪ್ರೀತಿಯ ಗೆಳತಿ ಸುಮತಿ ಮತ್ತು ಈ ದುರಂತವನ್ನು ತೆರೆತೆರೆಯಾಗಿ ಅನುಭವಿಸುವ ಮಾನಸಿಕ ಕ್ರಿಯೆಯ ದಾಖಲೆಯೂ ಆಗಿದೆ. ಕತೆಯ ಹತ್ತು ಭಾಗಗಳಲ್ಲಿ ಅರ್ಧದಷ್ಟು ಸುಮತಿಯ ಅನುಭವವಾಗಿ ಬಂದರೆ ಉಳಿದದ್ದು ನೇರವಾದ ಕತೆಯ ರೂಪದಲ್ಲಿದೆ. ಇದರಿಂದಾಗಿ ಕತೆಯಲ್ಲಿ ತೀವ್ರತೆಯೊಡನೆ ವಾಸ್ತವಿಕತೆಯನ್ನು ಸಾಧಿಸುವುದು ಕತೆಗಾರರಿಗೆ ಸಾಧ್ಯವಾಗುತ್ತದೆ.

ಆದರೆ ಈ ಕತೆಯಲ್ಲಿ ಕೂಡ ಚಿತ್ತಾಲರ ಸಮಾಜ ಪ್ರಜ್ಞೆ ಸಾಂಪ್ರದಾಹಿಕವಾಗಿಯೇ ಕೆಲಸ ಮಾಡುತ್ತದೆ ಅಬೋಲೀನಳನ್ನು ಬಲಿ ತೆಗೆದುಕೊಂಡ ವ್ಯಕ್ತಿಯ ಬಗ್ಗೆ, ಸಮಾಜದ ಬಗ್ಗೆ ಅವರು ತಳೆಯುವ ದೃಷ್ಟಿಯಲ್ಲಿ ಅವರನ್ನು ತೀವ್ರ ವಿಮರ್ಶೆಗೆ ಗುರಿ ಮಾಡುವ ಉದ್ದೇಶವಿಲ್ಲ.

ಇನ್ನು 'ಖಾಲಿಕೋಣೆ' ಕತೆಗೆ ಬಂದಾಗ ಇಲ್ಲಿ ಕೇಂದ್ರ ಪ್ರಜ್ಞೆಯ ಪರಿಸರದಲ್ಲಿ ನಡೆಯುವ ಕ್ರಿಯೆಯ ತೀವ್ರತೆಯೊಂದಿಗೆ ಕೇಂದ್ರ ಪ್ರತೀಕದ ಧ್ವನಿಪೂರ್ಣತೆ ಸಮರ್ಥವಾದ ಭಾಷೆ ಸೇರಿ ಕತೆಯ ಸಾಮಗ್ರಿ ವಾಸ್ತವತೆಯ ವಿವಿಧ ಮಟ್ಟಗಳಲ್ಲಿ ದುಡಿಯುತ್ತದೆ. 'ಖಾಲಿಕೋಣೆ' ಯ ಕತೆಯೂ ನಾಗರಿಕ ಸಂದರ್ಭದಲ್ಲಿಯೇ ಹುಟ್ಟಿಕೊಂಡಿದ್ದು. ಅಪೇಕ್ಷಗಳನ್ನು ಹೊತ್ತುಕೊಂಡು ಮುಂಬೈಯಲ್ಲಿ ತನ್ನ ಅಕ್ಕನ ಮನೆಗೆ ಬಂದ ನಿರ್ಮಲೆಯ ಮಾಂತ್ರಿಕ ಜೀವನದಲ್ಲಿ ಅದೇ ಚಾಳಿನಲ್ಲಿ ಖಾಲಿಯಾದ ಕೋಣೆಯೊಂದರಲ್ಲಿ ಅನಂತನೆಂಬ

ತರುಣ ಇರಲು ಬರುವನೆಂದು ಕೇಳಿ ನಾಟ್ಯಮಯವಾದ ಬದಲಾವಣೆಯಾಗುತ್ತದೆ. ಖಾಲಿಕೋಣೆ ಅವಳ ಮನಸ್ಸಿನ ಸಂಕೇತವಾಗಿ ಬಿಟ್ಟು ಅನಂತನ ಪ್ರತೀಕವಾಗಿ ಅನಂಗ ಅದನ್ನು ತುಂಬಿಬಿಡುತ್ತಾನೆ. ಹಗಲುಗನಸುಗಳ ವಿಚಿತ್ರ ಸುಖವನ್ನನುಭವಿಸುವ ನಿರ್ಮಲೆ ಸತ್ಯ ಜಗತ್ತಿನ ಸಂಪರ್ಕವನ್ನೇ ಕಳೆದುಕೊಳ್ಳುವ ಹಾದಿಯಲ್ಲಿದ್ದಾಗ ಅವಳ ಗೆಳತಿ ಕುಮುದಳ ಮುಖಾಂತರ ಅನಂತನ ಮೇಲಾದ (ಅಜಿಡಿಜಿಟಳು ಜಿಣಣಜಿಳಿಳ), ಅವನ ಸಾವು ತಿಳಿದು ಮನಸ್ಸಿಗೆ ಬಲವಾದ ಆಘಾತವಾಗುತ್ತದೆ. ಅವಳು ಕುಸಿದು ಬೀಳುತ್ತಾಳೆ ಇದು ಕತೆಯ ವಸ್ತು. ನಿರ್ಮಲೆಯ ಮನಸ್ಸಿನ ವ್ಯಾಪಾರಗಳನ್ನು ಅಭಿನಯಸಲು ಲೇಖಕರು ವಾಸ್ತವ ಜಗತಿನ ಘಟನೆಗಳು, ಕಾಲಬಂಧವನ್ನು ಲೆಕ್ಕಿಸದ ನೆನಪುಗಳು, ಬಯಕೆ ಪೂರೈಸುವ ಹಗಲುಗನಸುಗಳು ಮುಂತಾದ ಅನೇಕ ವಿಧಾನಗಳನ್ನು ಉಪಯೋಗಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.

ಈ ಮೇಲಿನ ಕತೆಗಳಲ್ಲಿ ಲೇಖಕರು ಸ್ತ್ರೀ ಸಂವೇದನೆಯ ಅನೇಕ ನೆಲೆಗಳನ್ನು ಗುರುತಿಸುತ್ತಾರೆ. ಸಮಾಜದ ಒತ್ತಡಗಳಿಗೆ ಸಿಕ್ಕು ಸ್ತ್ರೀ ಅನುಭವಿಸುವ ನೋವಿನ ಅನೇಕ ಪ್ರಕಾರಗಳನ್ನು ಪ್ರತ್ಯೇಕತೆ:ಅಸ್ವಸ್ಥತೆ, ಪರಕೀಯತೆ :ಲೈಂಗಿಕ ಅತೃಪ್ತಿ, ಬೇಸರ, ನೀಚ-ಭಾವ, ಪ್ರತಿಯೊಂದನ್ನೂ ಇಲ್ಲಿ ಕಾಣಬಹುದಾಗಿದೆ.

'ಸೆರೆ' ಕತೆಯಲ್ಲಿ ಸ್ತ್ರೀತ್ವ ಮತ್ತು ಪುರುಷತ್ವ ಸಂಕೇತಗಳ ಮಿಲನವಿದೆ. 'ಸೆರೆ' ಕತೆಯು ತನ್ನ ಒಟ್ಟು ಪರಿಣಾಮಕ್ಕಾಗಿ ಮೂರು ಪ್ರತೀಕಗಳನ್ನು ಸೃಷ್ಟಿತ್ತದೆ. ಒಂದು, ಕತೆಯ ನಾಯಕ 'ಬರ್ಮಚಾರಿ' ಇವನೊಬ್ಬ ವಿಶಿಷ್ಟಕಾಲ, ಸ್ಥಳ, ಸಂಸ್ಕೃತಿ ಸಂಬಂಧವುಳ್ಳ ವ್ಯಕ್ತಿಯಾಗಿದ್ದರೂ ವ್ಯಕ್ತ್ಯಾತೀತವಾದ ಇಚ್ಛಾಶಕ್ತಿ, ಪುರುಷತ್ವಗಳ ಸಂಕೇತವಾಗಿದ್ದಾನೆ. ಎರಡನೆಯ ಪ್ರತೀಕ ದೇವಿ ಇವಳಿಗೂ ತನ್ನದೇ ಆದ ಇತಿಹಾಸವಿದೆ. ಆದರೆ ಇವಳು ಕತೆಯಲ್ಲಿ ಕಾಣಿಸಿಕೊಳ್ಳುವುದು ಸ್ತ್ರೀತ್ವದ, ಪ್ರಕೃತಿಯ ಸಂಕೇತವಾಗಿ ಮೂರನೆಯದು ಸಾವಿನ ಮನೆ. ಕತೆಯ ವಸ್ತು ಕಾಮಕ್ಕೆ ಸಂಬಂಧಿಸಿದ್ದು ಎನ್ನುವುದು ಸ್ಪಷ್ಟವಾಗಿದ್ದರೂ ಈ ಕಾಮ ಕೂಡ ಬದುಕಿನ ಸಂಕೇತವಾಗಿದೆಯೆನ್ನುವುದನ್ನು ಮರೆಯುವಂತಿಲ್ಲ. ಈ ಹೋರಾಟಾದ ಮೊದಲಿನಿಂದಲೂ ಗೆಲುವು ಬದುಕಿಗೆ ಕಟ್ಟಿಟ್ಟದ್ದು ಎನ್ನುವ ಧೋರಣೆ ಕಂಡು

ಬರುತ್ತದೆ. 'ಬರ್ಮಚಾರಿ' ತನ್ನ ತಾಯಿ ಜಿಜ್ಜಿದ ಮದುವೆಯ ಪುರಾಣ ಕೇಳಿ ಕಿಡಿಕಿಡಿಯಾಗುತ್ತಾನೆ. ಆದರೆ ಅವನ ಬ್ರಹ್ಮಚರ್ಯದ ಗಂಟು ಈ ಮೊದಲೇ ಸಡಿಲಾಗಿರುತ್ತದೆ. ದೇವಿಯ ಬತ್ತಲೆ ತೊಡೆಗಳು ಅವನ ಸುಪ್ತಕಾಮವನ್ನು ಈಗಾಗಲೇ ಕೆರಳಿಸಿರುತ್ತವೆ. ಹಳೆಯ ಮನೆಗೆ ಬಂದು ದೇವಿಯನ್ನು (ಅವಳ ಬತ್ತಲೆ ಮೊಲೆಗಳನ್ನು) ನೋಡಿದಾಗ ಅವಳನ್ನು ಮಾತನಾಡಿಸುವ ಧೈರ್ಯಕೂಡ ಅವನಲ್ಲಿ ಉಳಿದಿರುವುದಿಲ್ಲ. ಮನೆಯ ಒಳಹೊಕ್ಕು ಅಲ್ಲಿನ ಕತ್ತಲೆಯಲ್ಲಿ, ಮಂಗನನ್ನು ಸೋದರತ್ತೆಯ ಭೂತವೆಂದು ಭಾವಿಸಿ, ತನಗೇ ಗೊತ್ತಿಲ್ಲದಂತೆ ದೇವಿಯ ಹೆಸರನ್ನು ಕೂಗಿದಾಗಲೇ ಅವನ ಸೋಲು ಖಂಡಿತವಾಗಿರುತ್ತದೆ. ದೇವಿ ಮೊದಲಿನಿಂದಲೂ ತನ್ನ ಗೆಲುವಿನ ತಯ್ಯಾರಿಯಲ್ಲಿಯೇ ಇರುತ್ತಾಳೆ. ಪೊಳ್ಳು ಇಚ್ಛಾಶಕ್ತಿಯನ್ನು ನಂಬಿ ಬಾಗಿಲಿಗೆ ಪಟ್ಟಿ ಹೊಡೆದು, ತನ್ನನ್ನೇ ಸೆರೆಯಲ್ಲಿಟ್ಟುಕೊಂಡ ಅವನಿಗೆ ದೇವಿಯ ಮೂಲಕ ಬಿಡುಗಡೆ ದೊರೆಯುತ್ತದೆ.

' ಸೆರೆ' ಯ ಬರ್ಮಚಾರಿ 'ಹಾವು' ಕತೆಯಲ್ಲಿ 'ಸಣ್ಣ ಒಡೆದೀರು' ಮತ್ತು ದೇವಿ ಕೆಲಸದ ಹುಡುಗಿಯಾಗಿ ಕಾಣಸಿಕುಳ್ಳುತ್ತಾರೆ. ಆದರೆ 'ಹಾವು' ಬದುಕಿನ ಬಗ್ಗೆ ತಳೆಯುವ ಧೋರಣೆ ಸೋಲಿನದಾಗಿದೆ. ಇಲ್ಲಿ ಕಾಮದ ಸಂಕೇತವಾದ ಹಾವು ಕೇಂದ್ರ ಪ್ರತೀಕ. ಅದಕ್ಕೆ ಹೆದರುವ ' ಸಣ್ಣ ಒಡೆದಿರು', ಚಿಕ್ಕಮ್ಮ, ಚಿಕ್ಕಪ್ಪ ಎಲ್ಲರೂ ಕಾಮದ ಬಗ್ಗೆ ಭಯದ ನಕಾರದ ಧೋರಣೆಗಳನ್ನು ಹೊಂದಿರುತ್ತಾರೆ. ದೇವಿಯೊಬ್ಬಳು ಮಾತ್ರ ಅದನ್ನು ಸಹಜವೆಂದು ಒಪ್ಪಿಕೊಳ್ಳುತ್ತಾಳೆ ಆದರೆ ಅವಳಿಗೂ ವಿಫಲತೆ ಕಾದಿದೆ. 'ಸೆರೆ' ಕಾಮದ, ಬದುಕಿನ ವಿಜಯದಲ್ಲಿ ಕೊನೆಗೊಂಡರೆ, 'ಹಾವು' ಸಣ್ಣ ಒಡೆದಿರ ಪಲಾಯನದಲ್ಲಿ ಮುಕ್ತಾಯಗೊಳ್ಳುತ್ತದೆ.

'ಛಲ' ಕತೆಯ ತುಂಬಾ ಜೀವನೋತ್ಸಾಹಕ್ಕೆ ಸಂಬಂಧಿಸಿದ್ದು ಈ ಉತ್ಸಾಹ ಉಪಯುಕ್ತವಾದಾಗ ಛಲವಾಗಿ, ವಿನಾಶ ಶಕ್ತಿಯಾಗಿ ಪರಿಣಮಿಸುವ ಸತ್ವವನ್ನು ಈ ಕತೆಯ ಕೇಂದ್ರ ವ್ಯಕ್ತಿ ಪದ್ದಕ್ಕೆ ಸಾಂಕೇತಿಸುತ್ತಾಳೆ.

'ಅಬೋಲೀನ' ಕತೆಯ ನಂತರ ಬರುವ ಇನೊಂದು ದುರಂತ 'ಉದ್ಧಾರ'ದ ಕಥಾವಸ್ತು. ಈ ವಸ್ತುವಿಗೆ ಆಕಾರ ಕೂಡುವಲ್ಲಿ ಕತೆಗಾರರು ರಾಮಾಯಣದ ಅಹಲ್ಯೆಯ ಕತೆಯನ್ನು ಉಪಯೋಗಿಸಿಕೊಂಡಿದ್ದಾರೆ. ಪ್ರತಿಮೆ, ಪ್ರತೀಕಗಳ, ಉಪಯೋಗ ಇಲ್ಲಿ

ಬಹಳಷ್ಟು ಆಗಿದೆ. ಒಂದು ಪೌರಾಣಿಕ ಮಿತ್ಥಿನ ಚೌಕಟ್ಟಿನಲ್ಲಿ ತಮ್ಮ ವಾಸ್ತುವಿನ ಅಭಿವ್ಯಕ್ತಿ ಇಲ್ಲಿ ಲಕ್ಷ್ಯವನ್ನು ಸೆಳೆಯುತ್ತದೆ. ಚಿತ್ತಾಲರ ಕತೆಯಲ್ಲಿಯೂ ಒಬ್ಬ ಅಹಲ್ಯೆ ಇದ್ದಾಳೆ. ಕತೆಯ ವರ್ತಮಾನದಲ್ಲಿ ನಡೆಯುವ ಘಟನೆ ಇವಳ ಆತ್ಮಹತ್ಯೆಗೆ ಸಂಬಂಧಿಸಿದ್ದು, ಆದರೆ ಈ ಕತೆ ಅಹಲ್ಯೆಯ ಮೇಲಷ್ಟೇ ಕೇಂದ್ರಿಕೃತವಾಗಿಲ್ಲ ಅಹಲ್ಯೆಯೊಬ್ಬಳನ್ನೇ ಮನೆಯಲ್ಲಿ ಬಿಟ್ಟು ಗೋಕರ್ಣಕ್ಕೆ ಹೋದ ಅವಳ ತಾಯಿ ಮತ್ತು ಅನಪೇಕ್ಷಿತವಾಗಿ ಅವಳ ಮನೆಯೆದುರು ಪ್ರತ್ಯಕ್ಷನಾದ ಮತ್ತು ತನಗೆ ಗೊತ್ತಿಲ್ಲದಂತೆ ಅವಳ ಸಾವಿಗೆ ಕಾರಣವಾದ ವೈರಾಗಿ ಇವರ ಮೇಲೂ ಕತೆಯ ಬೆಳಕು ತಿರುಗುತ್ತಾದೆ. ಅಹಲ್ಯೆಯ ಮುಖಾತರ ಕತೆ ಪಾಪದ ಗೂಢವನ್ನು ಸಂಕೇತಿಸಿದಂತೆ ಉಳಿದೆರಡು ಪಾತ್ರಗಳ ಮೂಲಕ ಶಾಪದ ಅರಿವು, ಹೊಣೆಗಾರಿಕೆಯ ವೈಚಿತ್ರ್ಯವನ್ನು ಸಂಕೇತಿಸುತ್ತದೆ. ಅಹಲ್ಯೆಯ ದುರಂತದ ಹಿಂದೆ ಅವಳ ಬದುಕಿನ ಎರಡು ಅನಾಹುತಗಳಿವೆ. ಒಂದು, ಅವಳ ಮದುವೆಯಾದ ಮೊದಲು ರಾತ್ರಿಯಲ್ಲಿಯೇ ಗಂಡ ಮಲಗುವ ಮನೆಯಿಂದ ಓಡಿಹೋದುದು. ಎರಡನೆಯದು ನಂತರದ ಘಟನೆ ತರುಣ ಕೀರ್ತನಕಾರನನೊಬ್ಬ ಹಳ್ಳಿಗೆ ಬಂದವನು ಇವಳ ಮನೆಯಲ್ಲಿಯೇ ಕಳೆಯುತ್ತಾನೆ. ಆ ರಾತ್ರಿಯೂ ಇವಳು ಮನೆಯಲ್ಲಿ ಒಬ್ಬಳೇ ಈ ಕೀರ್ತನಕಾರನ ಕಣ್ಣುಗಳಲ್ಲಿ ತಾನು ಮದುವೆಯಾದವನ ಕಣ್ಣುಗಳಲ್ಲಿ ಕಂಡ ಬೈರಾಗಿಯ ದೃಷ್ಟಿಯನ್ನು ಅಹಲ್ಯೆ ಕಾಣುತ್ತಾಳೆ. ಇಬ್ಬರೂ ಜಾರುತ್ತಾರೆ. ಬೆಳಗಾಗುವ ಮೊದಲೇ ಕೀರ್ತನಕಾರ ಓಡಿಹೋಗುತ್ತಾನೆ. ಈ ಎರಡು ಅನಾಹುತಗಳನ್ನು ಕೂಡಿಸುವ ಕೊಂಡಿ ಎರಡು ಸಲವೂ ಅಹಲ್ಯೆಗೆ ಕನಸಿನಲ್ಲಿ ಕಾಣಿಸಿಕೊಳ್ಳುವ ಭಯಾನಕ ಕಪ್ಪುನಾಯಿ. ಕತೆಯ ವರ್ತಮಾನದಲ್ಲಿ ಈ ಕಪ್ಪುನಾಯಿ ಅಹಲ್ಯೆಯ ಸಾವಿನ ಮುನ್ಸೂಚನೆಯಾಗಿ ವಾಸ್ತವಿಕವಾಗಿ ಅವತರಿಸುತ್ತದೆ. ಈ ಕತೆಯಲ್ಲಿ ಚಿತ್ತಾಲರು ಅಹಲ್ಯೆಯ, ಕೀರ್ತನಕಾರನ ಪಾಪ ಪ್ರಜ್ಞೆಯನ್ನು ಗುರುಸುತ್ತಾರಾದರೂ ಅದರ ಕ್ರಿಯೆಯನ್ನು ಅಭಿನಯಿಸುವುದರಲ್ಲಿ ಅವರಿಗೆ ಆಸ್ಥೆಯಿಲ್ಲ. ಅವರ ಲಕ್ಷ್ಯವೆಲ್ಲ ಪಾಪ, ಶಾಪ, ಸಾವು, ಇವುಗಳ ಗೂಢದ ಮೇಲಿಯೇ. ಪ್ರಭಾವೀ ವಾತಾವರಣವನ್ನು ನಿರ್ಮಿಸಿ ಈ ಗೂಢವನ್ನು ನೇರವಾಗಿ ಓದುಗನ ಅನುಭವಕ್ಕೆ ತಂದುಕೊಡುವುದರಲ್ಲಿ ಕತೆ ತನ್ನ ಸಫಲ್ಯವನ್ನು ಕಂಡುಕೊಳ್ಳುತ್ತದೆ.

‘ ಉದ್ಧಾರ‘ ವೆಲ್ಲಿನಕ್ಕಿಂತ ಹೆಚ್ಚು ಸಂಕೀರ್ಣವಾದ ಪೌರಾಣಿಕ ಕತೆಯ ಉಪಯೋಗವನ್ನು ನಾವು ‘ಚಕ್ರವ್ಯೂಹ‘ದಲ್ಲಿ ಕಾಣುತ್ತೇವೆ. ಮಹಾಭಾರತದಲ್ಲಿ ಕೌರವರು ರಚಿಸಿದ ಚಕ್ರವ್ಯೂಹ ಒಳಗೆ ಹೋಗುವ ವಿದ್ಯೆಯನ್ನಷ್ಟೇ ಅರಿತ ಅಭಿಮನ್ಯುವಿನ ಸಾವಿಗೆ ಕಾರಣವಾಗುವಂತೆ, 45 ವರ್ಷ ವಯಸ್ಸಿನ, ನಾಲ್ಕು ಮಕ್ಕಳ ತಂದೆಯಾದ ಈ ಕತೆಯ ನಾಯಕನಿಗೆ ಅವನು 24 ವರ್ಷ ಹರಿಯದ ಲೂಯಿಸಾಳೊಡನೆ ಬೆಸೆಸುಯುವ ಸಂಬಂಧ ‘ಸಾವಿ‘ನ ಅನುಭವವನ್ನು ತಂದುಕೊಡುತ್ತದೆ. ಈ ಘಟನೆಯ ಹಿನ್ನಲೆಯಾದ ನ್ಯೂಯಾರ್ಕ ನಗರ ಕೂಡ ಮಹಾಚಕ್ರವ್ಯೂಹವೇ. ಅನಿವಾರ್ಯವಾಗಿ ಮನಸ್ಸು ವರ್ತಮಾನದಿಂದ ಭೂತಕ್ಕೆ ತಿರುಗಿದಾಗ ಅಲ್ಲಿಯೂ ಚಕ್ರವ್ಯೂಹದ ಪ್ರತೀಕವೇ ಅವನನ್ನು ಕಾಡುತ್ತದೆ. ಇಷ್ಟೇ ಇಲ್ಲಿ ಈ ಅನುಭವ ಅವನ ‘ಪ್ರತ್ಯಕ್ಷ‘ ಅನುಭವವಾಗಿರದೆ ಬರುವ ‘ಮುಖಾಮುಖಿ‘ಯಲ್ಲಿ ಕತೆಯ ಕೇಂದ್ರವ್ಯಕ್ತಿ ಮೂಲಭೂತ ಯಾತನೆಯ ಪ್ರತೀಕವಾಗಿದ್ದಾನೆ. ಹೆಂಡತಿ, ಮಗಳು, ಒಳ್ಳೆಯ ನೌಕರಿ ಎಲ್ಲ ಇದ್ದರೂ ಈತ ಅರಿಯದ ನೋವಿನಿಂದ ಬಳಲುವ, ಹಳ್ಳಿ ಬಿಟ್ಟು ನಗರ ಸೇರಿದ ಲೇಖಕ ಬರವಣಿಗೆಯ ಮೂಲಕ ತನ್ನ ನೋವಿನ ನೆಲೆ, ಸೆಲೆಗಳನ್ನು ಅರಿಯಲು ಸಾಧ್ಯವಾಗಬಹುದು. ತನಗೆ ಅದರಿಂದ ಬಿಡುಗಡೆ ಸಿಗಬಹುದು ಎಂಬ ಆಸೆ ಇಟ್ಟುಕೊಂಡವ. ತನ್ನ ಮತ್ತು ಚಿಕ್ಕಂದಿನಲ್ಲಿಯೇ ತನ್ನ ಮೇಲೆ ಪ್ರಭಾವ ಬೀರಿದ ಇಂದಿರಕ್ಕನ ಸಂಬಂಧದಲ್ಲಿ, ಈ ಸಂಬಂಧಕ್ಕೆ ಅಂಟಿಕೊಂಡ ಜಟಿಲ ಪಾಪ ಪ್ರಜ್ಞೆಯಲ್ಲಿ ತನ್ನ ನೋವಿನ ಮೂಲವಿದೆ ಎಂಬ ನಂಬುಗೆಯಿಂದ ಅದನ್ನು ಕೆದಕಿ ಕೆದಕಿ ನೋಡಿ, ಬುದ್ಧಿಪೂರ್ವಕವಾಗಿ ವಿವೇಚಿಸಿ ಶಬ್ದಗಳಲ್ಲಿ ಹಿಡಿದು ಆ ನೋವಿನಿಂದ ಪಾರಾಗಲು ಯತ್ನಿಸುತ್ತಿರುವವ. ಇಂದಿರಕ್ಕನೊಡನೆ ಅನಿರೀಕ್ಷಿತವಾಗಿ ಜರುಗುವ ಎರಡು ಬೆಟ್ಟಿಗಳಲ್ಲಿ ಅವಳ ಜೀವನವೂ ಬಂಜರವಾಗುವುದಕ್ಕೆ ಅವಳಲ್ಲಾದ ಭಯಾನಕ ಬದಲಾವಣೆಗೆ ತಾನು ಸಣ್ಣವನಿದ್ದಾಗ ಇಂದಿರಕ್ಕನ ಪ್ರೇಮ ಅವಳಿಗೆ ಮುಟ್ಟಿಸಲು ಕೊಟ್ಟ ಪತ್ರವನ್ನು ಹರಿದುಹಾಕಿದುದೇ ಕಾರಣ ಎಂದು ಅವನಿಗೆ ಖಾತ್ರಿಯಾಗುತ್ತದೆ. ಆದರೆ ಇಂದಿರಕ್ಕನೊಡನೆ ಮುಖಾಮುಖಿ ಮುಗಿಯುವದಲ್ಲಿಯೇ ಅವಳ ಸಾವಿನ ಹಿಂದೆಯೇ ಎಷ್ಟೋ ವರ್ಷಗಳಿಂದ ಬೇಪತ್ತೆಯಾದ, ಬಹುಶಃ ಆತ್ಮಹತ್ಯೆ ಮಾಡಿಕೊಂಡ, ಅವಳ ಪ್ರೇಮಿ, ಪೊತ್ತಮೀಸೆಯ ಮನುಷ್ಯನೊಂದಿಗೆ ಮತ್ತೊಂದು ಮುಖಾಮುಖಿ ಪ್ರಾರಂಭವಾಗುತ್ತದೆ.

ಮುಖಾಮುಖಿಯಲ್ಲಿ ಜೀವನ ಕಲೆ ಎರಡೂ ಅಂತರ್ಮುಖತೆಯನ್ನು ಒಟ್ಟಿಗೇ ಹೊಂದಿದೆ. ಆದರೆ ಈ ಕತೆಯ ನಾಯಕ ಕತೆಗಾರನೂ ಆದ್ದರಿಂದ ಕತೆಯ ಕೃತೀಕಾತ್ಮಕ ಅರ್ಥವನ್ನು ಅವನು ಸ್ಫುಟಗೊಳಿಸುವುದು, ಪರೀಕ್ಷಿಸುವುದು ಸಹಜಕ್ರಿಯೆಂದೆನಿಸಿದರೂ ಪ್ರತೀಕಗಳು ಪ್ರವಾಹದ ಮೇಲೆ ಕಾಣಿಸಿಕೊಂಡು ಅವಳತ್ತ ನಮ್ಮ ಪ್ರಕ್ರಿಯೆ ಗಾಢವಾಗುವುದಿಲ್ಲ.

ಈ ಎಲ್ಲಾ ಮೇಲಿನ ಕತೆಗಳನ್ನು ನೋಡಿದಾಗ ಕತೆಯವಸ್ತು ಸುತ್ತಮುತ್ತಲಿನ ಸಮಾಜ, ಆದರೆ ಮೌಲ್ಯಗಳು ಒತ್ತಡಗಳು ಅದರಿಂದ ಸ್ತ್ರೀ ಅನುಭವಿಸುವ ನೋವು ತಾಕಲಾಟಗಳು ಮೂಡಿ ಬಂದಿದೆ. ಸ್ತ್ರೀ ಸಂವೇದನೆಯನ್ನು ಅರ್ಥೈಸಿಕೊಳ್ಳಲು ಅಂದಿನ ಪರಿಸರವೂ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಎಂಬುದು ಅಲ್ಲಗಳೆಯಲಾಗದು. ಅಬೋಲೀನ ಅಹಲ್ಯೆ ಇವರ ದುರಂತಕ್ಕೆ ಅಂದಿನ ಸಮಾಜ ಅಂದಿನ ಶಾಪ-ಪಾಪ ಪ್ರಜ್ಞೆಯೇ ಕಾರಣ.

ಸ್ತ್ರೀ ಸಂವೇದನೆಯು ಅಂದಿನ-ಇಂದಿನ ಪರಿಸರಕ್ಕೆ ಅನುಗುಣವಾದಂತೆ ಸಮಾಜದ ಮೌಲ್ಯಗಳಿಗೆ, ಒತ್ತಡಗಳಿಗೆ ಸ್ಪಂದಿಸಿ ನೋವು-ನಲಿವುಗಳನ್ನುಪಡೆಯುತ್ತದೆ.

ಅಧ್ಯಾಯ – ೫

ಸಮಾರೋಪ

ಸ್ತ್ರೀ ವಾದ 'ವಿಮರ್ಶೆ' ಯ ಮೂಲದಿಂದ ಬಂದಿರುವಂತಹ ಸ್ತ್ರೀ ಸಂವೇದನೆಯು ಇಂದು ಹೊಸ ವಿಷಯಗಳೆಡೆ ನೋಡಲು ಪ್ರೇರೇಪಿಸುತ್ತದೆ.

ಚಿತ್ತಾಲರ ಕತೆಗಳಲ್ಲಿ ಸ್ತ್ರೀ ಸಂವೇದನೆಯು ಅನೇಕ ರೂಪಗಳಲ್ಲಿ ಕಂಡು ಬಂದಿದ್ದು ಅವು ನಮ್ಮನ್ನು ಆಲೋಚನೆಯಲ್ಲಿ ತೊಡಗುವಂತೆ ಮಾಡುತ್ತವೆ.

ಚಿತ್ತಾಲರ ಕತೆಗಳಲ್ಲಿ ಸ್ತ್ರೀ ಅನುಭವಿಸುವ ಪ್ರತಿಯೊಂದು ಗಳಿಗೆಯನ್ನೂ ಬಿಂಬಿಸಿದ್ದಾರೆ. ಶೋಷಣೆಯಿರಲಿ, ದುರಂತವಿರಲಿ ನೋವು ನಲಿವಿರಲಿ, ಛಲವಿರಲಿ ಇಂದಿನ ವಾಸ್ತವಿಕ ಸಮಸ್ಯೆ ಹಿಂದಿನ ಕಟ್ಟುನಿಟ್ಟು ಜೀವನ ಸಮಾಜದ ಮೌಲ್ಯಗಳು ಮತ್ತು ಅದನ್ನು ಸ್ತ್ರೀ ಒಪ್ಪಿಕೊಂಡ ಬಗೆ ಪ್ರತಿಯೊಂದನ್ನೂ ಲೇಖಕರು ಅತ್ಯಂತ ನವಿರಾಗಿ ನಾವೇ ಆ ಪಾತ್ರ ಆಗುವ ಹಾಗೆ ಚಿತ್ರಿಸಿದ್ದಾರೆ.

ಸಮಾಜದಿಂದ ಶೋಷಣೆಯನ್ನು ಅನುಭವಿಸುತ್ತಿರುವ ಉತ್ತಮಿಯಾಗಲೀ ಬೊಮ್ಮಿಯಾಗಲಿ ನಮಗೆ ಹೊರಗಿನವರೆನಿಸುವುದಿಲ್ಲ ಅವರ ಶೋಷಣೆ ನಮಗೆ ಹೊಸದೆನಿಸದು.

ಈ ಶೋಷಣೆ ಅನುಭವಿಸುತ್ತಿರುವವರು ಇಲ್ಲಿ ಕ್ರಾಂತಿ ಮಾಡುವದಿಲ್ಲ ಹೋರಾಟ ಮಾಡುವದಿಲ್ಲ ಸಹಜವಾಗಿ ಜೀವನ ಅನುಭವಿಸುತ್ತಾರೆ. ನಮಗೂ ಅವರನ್ನು ಉದ್ಧರಿಸುವ ಛಲ ಇಲ್ಲ ಆದರೆ ಕೇವಲ ಅವರಿಗಾಗಿ ಅನುಕಂಪವಿದೆ.

"ಇನ್ನು 'ಅಬೋಲಿನ' ದುರಂತದ ಬಗ್ಗೆ ಲೇಖಕರೇ ಸ್ವತಃ ನಿಷ್ಪಾಪವಾದ ನಿರ್ದೋಷಿಯಾದ ಒಂದು ಜೀವನಕ್ಕೆ ತನ್ನ ನಿರ್ದೋಷವನ್ನು ಸಿದ್ಧ ಪಡಿಸಿ ತೋರಿಸಬೇಕಾಗಿ ಬರುವ ಒಂದು ದುರ್ಬರ ಪ್ರಸಂಗ ಹಾಗೂ ಸಿದ್ಧಪಡಿಸಲು ಅದು ನಡೆಸುವ ಹೋರಾಟದಲ್ಲಿ ಸೋತು ಕುಸಿದು ಬೀಳುವದರ ದುರಂತ ಚಿತ್ರ ಬಾಳಿನ ಉದ್ದಕ್ಕೂ ಬಿಡಿಸಿಕೊಳ್ಳಲು ಸಾಧ್ಯವಾಗದ ಹಾಗೆ ಬೆನ್ನು ಹತ್ತಿದ ಈ ಭಾವನೆ ನಿರ್ಧೋಷವನ್ನು ಸಿದ್ಧ ಪಡಿಸಿ

ತೋರಿಸಬೇಕಾದ ಅವಶ್ಯಕತೆ-ಜೀವನದಲ್ಲಿಯ ಮಹತ್ವದ 'ಮುಖಾಮುಖಿ'ಯ ಸನ್ನಿವೇಶಗಳನ್ನೆಲ್ಲ ಅಗ್ನಿ ಪರೀಕ್ಷೆಯ ಕ್ಷಣಗಳನ್ನಾಗಿ ಮಾಪರಿಡಿಸುತ್ತದೆ."

ಹೆಣ್ಣಿನ ಮನದ ಭಾವನೆ ಸಮಾಜದ ಒತ್ತಡ ನಿಷ್ಕಳಂಕ ಮನದ ಸ್ತ್ರೀಯರ ಬಗ್ಗೆ 'ದುರಂತ' ಕತೆಗಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇನ್ನೂ ವಿಶಿಷ್ಟವಾದಂತಹ ಕತೆ 'ಕತೆಯಾದಳು ಹುಡುಗಿ' ಯಲ್ಲಿ ಒಂದೇ ಕಾಲಕ್ಕೆ ಮಗಳನ್ನು ಕಳೆದುಕೊಂಡ ತಂದೆಯೊಬ್ಬನ ವ್ಯಥೆಯನ್ನು ಕುರಿತು ಹೇಗೋ ಹಾಗೆಯೇ ಈ ವ್ಯಥೆಯನ್ನು ಮಾನವ ಸಹಜ ವ್ಯಾಕುಲತೆಯಿಂದ ಇನ್ನೊಬ್ಬನಿಗೆ ಮುಟ್ಟಿಸಲು ಹೋದಾಗ ನೇರವಾಗಿ ಮುಟ್ಟಿಸುವುದೇ ಅಸಾಧ್ಯವಾಗಿ ಹಲವು ರೀತಿಯಲ್ಲಿ ರೂಪಾಂತರಗೊಳ್ಳಲು ಕಾರಣವಾಗುವ ಸಮಾಜ ವ್ಯವಸ್ಥೆ ಬಗೆಗೂ ಇದೆ. ಕತೆಯ ನಿರೂಪಣಾ ತಂತ್ರವನ್ನು ಆದರೆ ಭಾವನಾತ್ಮಕತೆಯ ಶಿಲ್ಪವನ್ನು ನಿರ್ಮಿಸಿದ ಕೇಂದ್ರ ಕಲ್ಪನೆ ಎಲ್ಲಿಯೂ ವಾಚ್ಯವಾಗಿರದೆ ಮಾರ್ಕ್ಸ ತನ್ನ ಸಮಾಜದ ಬಗೆಗಿನ ಕನಸನ್ನು ವ್ಯಕ್ತಪಡಿಸಿದ ವಿಚಾರಗಳು ಹುಟ್ಟಿರುವಂಥದು ಸಮಾಜದ ರೂಪಿತ ಮನುಷ್ಯ ಸ್ವಭಾವ ('ಓಣಟಚಿಟಿ ಟಚಿಣಣಡಿಜ ಭಿ ಟಂಜುಜುಜಜ ಎಟಿ ಜಚಿಛು ಘಣಂಡುಛಚಿಟ ಲಜಡುಂಜ') ಮಾನವ ಜಾತಿಯ ಸ್ವಭಾವವೇ ಆಗಿ .(ಲಜಖಿಜ ಟುಜಿಜ ಂಜಿ ಟಚಿಟಿ) ಅರಳುವ ಹಾಗೆ ಸಮಾಜ ವ್ಯವಸ್ಥೆಗೊಳ್ಳಬೇಕು ಹಾಗೆ ಆದಾಗ ಮಾತ್ರ ಹೊಟ್ಟೆಯ ಮಗಳು ಜಾನಕಿ ಸತ್ತ ವ್ಯಥೆಯ ಕತೆ ಹೊಟ್ಟೆಯ ಮಗಳ ಕತೆಯೇ ಆಗಿ ಇನ್ನೊಬ್ಬ ಮನುಷ್ಯನಿಗೆ ಮುಟ್ಟುವುದು ಸಾಧ್ಯವಾದೀತು!"

ಎಂಬ ಲೇಖಕರ ಮಾತು ಮನುಷ್ಯ-ಮನುಷ್ಯರ ನಡುವಿನ ಸುಳ್ಳು ಸಂಬಂಧಗಳನ್ನು ಸೃಷ್ಟಿಸುವ ಸಾಹಿತ್ಯಕ್ಕೂ ಮಾನವಿಯ ಪ್ರಭೆ ಬಂದೀತು ಎಂಬುದು ಲೇಖಕರ ಆಶಯ.

'ಜಾನಕಿಗಾಗಿ ಕತೆ ಬರೆಯಲು ಆರಂಭಿಸಿದ ಲೇಖಕರು ಅನುಭವಿಸುವ ಇನ್ನೊಂದು ದುರಂತದ ಮುಖ ಅಂದರೆ ಮುಗ್ಧಬಾಲಕಿಯ ಮೇಲೆ ಎಸಗುವ ಅತ್ಯಾಚಾರ ಇಂದು ವಾಸ್ತವಿಕ ಸ್ಥಿತಿಯಲ್ಲಿ ನಡೆಯುತ್ತಿರುವ ಘಟನೆ ಹೃದಯಕಲುಕುವಂತೆ ವಿವರಿಸುತ್ತಾರೆ.

ಲೇಖಕರು ಇಲ್ಲಿ ಒಂದೇ ದೃಷ್ಟಿಕೋನದಿಂದ ಯೋಚಿಸಿಲ್ಲ ಹಿಂದೆ ಒಂದು ರೀತಿಯಾಗಿ ಸಮಾಜವನ್ನು ಕಾಡಿದ್ದ ಸ್ತ್ರೀಯರ ವಿವಾಹ ಇಂದು ಇನ್ನೊಂದು ರೂಪದಲ್ಲಿ ಸ್ತ್ರೀಯರನ್ನು ಪೀಡಿಸುತ್ತಿದೆ. ಇಂದು ಶಿಕ್ಷಣವಿಲ್ಲದ ಸ್ತ್ರೀಯರನ್ನು ಪುರುಷರು ಕಡೆಗಣಿಸಿದರೆ ಶಿಕ್ಷಣ ವಿರುವ ಸ್ತ್ರೀ ತನ್ನ ಆಯ್ಕೆಯಲ್ಲಿ ತಾನೇ ಸೋಲುತ್ತಿದ್ದಾಳೆ. ಇನ್ನೊಂದು ಕಡೆ ಹೆಣ್ಣಿನ ತಂದೆ-ತಾಯಿ ಸಮಾಜವನ್ನು ಎದುರಿಸಲಾಗದೆ ಉತ್ತಮ ವರನನ್ನು ಪಡೆಯಲಾಗದೆ, ಸಂದಿಗ್ಧ ಪರಿಸ್ಥಿತಿಯಲ್ಲಿ ಪರದಾಡುತ್ತಿದ್ದಾರೆ ಎಂಬುದನ್ನು ಲೇಖಕರು 'ತಪ್ಪಿದ ಗುರಿ' ಮತ್ತು ' ರಾಧಕ್ಕಾಗ ಮನೋರಥ' ಎಂಬ ಕತೆಗಳಲ್ಲಿ ಬಿಂಬಿಸಿದ್ದಾರೆ.

ಇವೆಲ್ಲವೂಗಳನ್ನು ಓದಿದ ಮೇಲೂ ಒಂದು ಮುಖ್ಯ ಅಂಶ ಬೆಳಕಿಗೆ ಬರುತ್ತದೆ. ಅದೇನೆಂದರೆ ಕೆಲವು ಚಿತ್ತಾಲರ ಕತೆಗಳಲ್ಲಿ ಸ್ತ್ರೀ ಸಂವೇದನೆ ಸುಪ್ತವಾಗಿದೆ ಕೆಲವು ಕತೆಗಳಲ್ಲಿ ಕಂಡೂ ಕಾಣದಂತಿದೆ ಕಂಡೂ ಕಾಣದಂತಿರುವ ಕತೆಗಳಲ್ಲೂ ಕೆಲವು ಕಡೆ ಅವಳ ಚೇತನ ಗಟ್ಟಿಯಾಗಿದೆ ಎಂಬುದಕ್ಕೆ 'ಕಳ್ಳಗಿರಿಯಣ್ಣ' ಕತೆಯೇ ಸಾಕ್ಷಿ ಉಳಿದ ಕತೆಗಳಲ್ಲಿ ಅಲ್ಲಲ್ಲಿ ಸ್ತ್ರೀ ಸಂವೇದನೆ ಕಂಡು ಬಂದರೂ ಅದಕ್ಕೆ ಯಾವುದೇ ವಿಶೇಷತೆ ಇಲ್ಲ.

ಕತೆಗಳಲ್ಲಿ ಸುಪ್ತವಾಗಿ ಕುಳಿತಿರುವ ಕೆಲವು ಸ್ತ್ರೀ ಭಾವನೆಗಳನ್ನು ಸ್ಪಷ್ಟವಾಗಿ ಹೊರಚೆಲ್ಲಲಾಗಿಲ್ಲ. ತನ್ನೊಳಗೆ ಅವುಗಳನ್ನು ಅದುಮಿರಿಸಿ ಮೌನವಾಗಿ ಮುಂದಿನ ಬದುಕಿಗೆ ತಲೆಕೊಟ್ಟಂತಾಗಿದೆ. ಸಮಸ್ಯೆಯನ್ನು ಸಹಜವಾಗಿ ಸ್ವೀಕರಿಸಿದ್ದರಿಂದ ಯಾವುದೇ ತರಹದ ಭಾವನೆಯನ್ನು ಹೊಂದಲಾಗಿಲ್ಲ.

ಇಲ್ಲಿ ಕಾರಣವನ್ನು ಹುಡುಕುತ್ತಾ ಹೊದರೆ ಲೇಖಕರಿಗೆ ಅಲ್ಲಿ ಸ್ತ್ರೀಭಾವನೆಯ ಅವಶ್ಯಕತೆ ಎನಿಸಲಿಲ್ಲವೇ? ಅಥವಾ ಅವಳಲ್ಲಿ ಅತಿಯಾದ ದಿಟ್ಟತನ ತೋರಲು ಹಿಂಜರಿದರೆ? ಆಗಿನ ಪರಿಸ್ಥಿತಿ ಚಿತ್ರಿಸುವಲ್ಲಿ ಅದು ಅನಿವಾರ್ಯವಾಗಿತ್ತೇ? ಎಂದು ಮುಂತಾದ ಭಾವನೆಗಳು ನಮ್ಮನ್ನು ಕಾಡುತ್ತವೆ.ಅಂದಿನ ಸಮಾಜ, ಅಂದಿನ ಪರಿಸ್ಥಿತಿ ಸ್ತ್ರೀಕ್ರಾಂತಿಗೆ ಉತ್ತೇಜನ ನೀಡಿಲ್ಲ,ಸಮಾಜದ ಮೌಲ್ಯಗಳು ಹೆಣ್ಣನ್ನು ಕಟ್ಟುಪಾಡಿಗೆ ಒಳಪಡಿಸಿ ಆ ನೀತಿ ನಿಯಮಗಳನ್ನು ಪಾಲಿಸುವಂತೆ ಮಾಡಲು ಯಶಸ್ವಿಯಾಗಿದ್ದಾರೆ. ಎಂಬ ಕಾರಣವೊಡ್ಡಿ ಉತ್ತುಮ ಕ್ರಾಂತಿಕಾರಿಯಾಗಿಲ್ಲ.

ಅವರ ಇನ್ನೊಂದು ಕತೆಯಾದ 'ಉದ್ಧಾರ' ದಲ್ಲಿಯೂ ಅಹಲ್ಯೆಯ ಪೂರ್ಣ ಪ್ರಮಾಣದ ನೋವನ್ನೆಲ್ಲಾ ಕೇವಲ ಪ್ರತಿಮೆಗಳ ಮೂಲಕ ಸಂಕೇತಗಳ ಮೂಲಕ ತೋಲಿಸಲಾಗಿದೆ.

ಅಹಲ್ಯೆ ನಿಜಕ್ಕೂ ದುರಂತವನ್ನು ಅನುಭವಿಸಿದವಳು ಅವಳ ದುರಂತಕ್ಕೆ ಕಾರಣ ಯಾರು ? ಅವಳ ಪತಿ ಅವಳನ್ನು ಮದುವೆಯ ಪ್ರಥಮ ರಾತ್ರಿ ತೊರೆದು ಹೋದಾಗ ನೊಂದಳೆ? ಬೆಂದಳೆ? ಏನೂ ತಿಳಿಯದು ಕೇವಲ ಶಾಪ-ಪಾಪದ ಭಯದಿಂದ ಆತ್ಮಹತ್ಯೆ ಮಾಡಿ ಕೊಂಡಳೆ ಮಾಡಿಕೊಳ್ಳುವುದಾದರೆ ಕೀರ್ತನೆಕಾರ ಹೋದ ತಕ್ಷಣವೇ ಏಕೆ ಮಾಡಿಕೊಳ್ಳಲಿಲ್ಲ ಎಂಬುದೂ ಇಲ್ಲಿ ವಿಶೇಷ ಅಲ್ಲಿತನಕ ಅವಳು ತಡೆದದ್ದು ಹೇಗೆ? ತಾಯಿಯಿಲ್ಲದ ರಾತ್ರಿ ಆ ಏಕಾಂತತೆ ಹಳೆಯ ಕತೆ ಕೆದರಿ ಅವಳನ್ನು ಆತ್ಮಹತ್ಯೆಗೆ ಪ್ರೇರೆಪಿಸಿತೆ?

ಕೊನೆಗೆ ತಾನೂ ಮಾಡಿದ ಪಾಪಕ್ಕೆ ಸಾವೇ ಖಂಡಿತ ಎನ್ನುವುದಾದರೆ ಅವಳಿಗೆ ಮೊದಲಿಂದೂ ತಾನು ಮಾಡಿದರ ಬಗ್ಗೆ ಪಾಪದ ಭಯ ಇರಲಿಲ್ಲವೇ? ಎಂಬುದೂ ಆಗ ಆತ್ಮಹತ್ಯೆಗೆ ಪ್ರಯತ್ನಿಸಲಿಲ್ಲವೆ? ಕೇವಲ ಏಕಾಂತವೇ ಅವಳನ್ನು ಆ ಕೆಲಸಕ್ಕೆ ಪ್ರೇರೆಪಿಸಿತೆ?

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸ್ವಲ್ಪ ಅಸ್ಪಷ್ಟವಾದರೂ ಕೇವಲ ಸೂಕ್ಷ್ಮ ಎಳೆಗಳ ಮೂಲಕ ಈ ಕತೆಯನ್ನು ಬಂಧಿಸಿದ್ದಾರೆ ಎಂಬುದೂ ಸತ್ಯ.

ಮನೋವೈಜ್ಞಾನಿಕವಾಗಿ ಕಲಾಪೂರ್ಣತೆ ಕಲಾ ಪ್ರಜ್ಞತೆಯಿಂದ ಕೂಡಿದ ಚಿತ್ತಾಲರ ಕತೆಗಳಲ್ಲಿ ಸ್ತ್ರೀಸಂವೇದನೆಯು ಎಲ್ಲ ನೆಲೆಗಳಿಂದಲೂ ಮೂಡಿ ಬಂದಿದೆ. ಶೋಷಣೆ ದುರಂತ ನೋವು-ನಲಿವು ಎಲ್ಲವುಗಳಿಂದಲೂ ಅವಳು ಅನುಭವಿಸಿರುವ ಎಲ್ಲೆ ಮೀರಿದ ಕ್ಷಣಗಳು ಇಲ್ಲಿ ಮನಮುಟ್ಟುವಂತೆ ಚಿತ್ರಿಸಲಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಚಿತ್ತಾಲರ ಕತೆಗಳು ಎಲ್ಲ ದೃಷ್ಟಿ ಯಿಂದಲೂ ಸ್ತ್ರೀ ಸಂವೇದನೆಯನ್ನು ಹೊರಚೆಲ್ಲುವಲ್ಲಿ ಯಶಸ್ವಿಯಾಗಿವೆ.

ಗ್ರಂಥ ಸೂಚಿ

1) ಚಿತ್ತಾಲರ ಕತೆಗಳು:-ಯಶವಂತ ಚಿತ್ತಾಲ, ಪ್ರಜಾ ಮುದ್ರಣಾಲಯ

ಬೆಂಗಳೂರು, 1ನೇ ಆವೃತ್ತಿ 1983.

2) ಸಾಹಿತ್ಯ ಚೈತ್ರ :-ಚೆನ್ನಕ್ಕ ಪಾವಟೆ (ಎಲಿಗಾರ), ಚೆನ್ನಗಂಗಾ

ಪ್ರಕಾಶನ ಧಾರವಾಡ,1ನೇ ಆವೃತ್ತಿ 1993.

3) ಸ್ತ್ರೀಸಂವೇದನೆ:- ಜಿ.ಎಂ. ರೋಹಿಣಿ, ಹೇಮಾಂಶು ಪ್ರಕಾಶನ

ಮಂಗಳೂರು 19995.

4) ಸಮ ಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು:

ಜಿ.ಎಸ್.ಅಮೂರ, ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು, 2ನೇ ಆವೃತ್ತಿ 1999.

5) ಸಾಹಿತ್ಯ ವಿಮರ್ಶೆ 1998:- ಜಿ.ಎಂ. ಹೆಗಡೆ, ಕನಾ೯ಟಕ ಸಾಹಿತ್ಯ

ಅಕಾಡೆಮಿ ಬೆಂಗಳೂರು, 1ನೇ ಆವೃತ್ತಿ 1999.